SARASWATHI PRINTING WORKS

ಶ್ರೀ ಸರಸ್ವತೀ ಮುದ್ರಣಾಲಯ

ಧಾರವಾಡ.

ಬೆಲೆ : ೦—೧೪—೦

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ

ಭಗವಾನ್ ಶ್ರೀಧರ ಸ್ವಾಮಿಗಳವರ

ಸಂಕ್ಷಿಪ್ತ ಚರಿತ್ರೆ

೧. ವಿದ್ಯಾರ್ಥಿ ಸಂಪುಟ

ಮುದ್ರಕರು :

ಶ್ರೀ ಸರಸ್ವತೀ ಮುದ್ರಣಾಲಯ,

ಹುಬ್ಬಳ್ಳಿ ರಸ್ತೆ, ಧಾರವಾಡ.

ಮುದ್ರಕರು :
ಶ್ರೀ. ಎಸ್. ಎನ್. ಕುರಡಿ, B. Sc.
ಶ್ರೀ ಸರಸ್ವತೀ ಮುದ್ರಣಾಲಯ,
ಹುಬ್ಬಳ್ಳಿ ರಸ್ತೆ, ಧಾರವಾಡ.

ಪ್ರಕಾಶಕರು :
ಶ್ರೀಧರ ಭಕ್ತಮಂಡಲ
ಸಾಗರ.

ಮೊದಲ ಮಾತು

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ||

—ಗೀತೆ.

ಮಹಾನುಭಾವರು, ಪುಣ್ಯಪುರುಷರು, ಸಂತ ಮಹಾಂತರು, ಆರ್ಯ ಮಹರ್ಷಿಗಳು ಮೊದಲಾದವರ ಜೀವನ ಚರಿತ್ರೆಯನ್ನು ಆಳವಾಗಿ ಅವಲೋಕಿಸಿದರೆ ಅವರು ಅಂತಹ ಉಚ್ಚ ಅವಸ್ಥೆಗೆ ಮುಟ್ಟುವದಕ್ಕಿಂತ ಮೊದಲು ಎಷ್ಟೆಲ್ಲ ಕಷ್ಟಪರಂಪರೆಗಳನ್ನು ಎದುರಿಸಬೇಕಾಯಿತು, ಅಂಥ ಸಂಕಟ ಒದಗಿದಾಗ ಅವರು ಮನಸ್ಥೈರ್ಯವನ್ನು ಕಳೆದುಕೊಳ್ಳದೆ ಹೇಗೆ ಧೈರ್ಯದಿಂದ ನಡೆದು ಪಾರಾದರು, ಇವೇ ಮೊದಲಾದ ಹಲವು ವಿಚಾರಗಳು ನಮಗೆ ತಿಳಿದುಬರುವವು. ಇದನ್ನೇ ನಾವು ಇನ್ನೊಂದು ರೀತಿಯಿಂದ ಪರಿಭಾವಿಸಬಹುದು: ಪ್ರಾಪಂಚಿಕ ವಿಷಯದಲ್ಲಿ ಉನ್ನತಿ ಪಡೆಯಲೆಳಸಿದ ಒಬ್ಬ ಬಡ ವಿದ್ಯಾರ್ಥಿಯು ತನ್ನ ಅಭ್ಯಾಸದ ಅವಧಿಯಲ್ಲಿ, ಅನ್ನ ವಸ್ತ್ರಗಳಿಗಾಗಿ, ಅಭ್ಯಾಸದ ಅನುಕೂಲಕ್ಕಾಗಿ, ಸರಿಕರನ್ನು ಮೀರಿದ ಪ್ರಗತಿಸಾಧನೆಗಾಗಿ, ಎಷ್ಟು ಕಷ್ಟಪಡಬೇಕಾಗುವದು ? ಅವನ್ನೆಲ್ಲ ಶಾಂತವೃತ್ತಿಯಿಂದ ಸಹಿಸಿಕೊಂಡು ತನ್ನ ಅಭ್ಯಾಸವನ್ನು ಮುಗಿಸಿ ಇಚ್ಛಿತ ಪರೀಕ್ಷೆಯಲ್ಲಿ ಉಚ್ಚ ತರಗತಿಯಲ್ಲಿ ಉತ್ತೀರ್ಣನಾದ ಬಳಿಕ ಅವನೊಬ್ಬ ಸನ್ಮಾನ್ಯ ಗೃಹಸ್ಥನಾಗುವನು. ಹಾಗೆಯೇ ಆತ್ಮೋನ್ನತಿ ಸಾಧಕರಾದ ವ್ಯಕ್ತಿಗಳು ತಮ್ಮ ಸಾಧನ ಮಾರ್ಗದಲ್ಲಿರುವಾಗ, ಎಂದರೆ ಪರಮಾರ್ಥಪಥದಲ್ಲಿ ಪ್ರವಾಸ ನಡೆಸಿರುವಾಗ, ಪರಮೇಶ್ವರನ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಬಯಸಿ ಕಾರ್ಯ ನಡೆಯಿಸಿರುವಾಗ, ಅವರು ಎಂಥ ದುರ್ಗಮವಾದ ಮಾರ್ಗದಲ್ಲಿ ಪ್ರವಾಸ ಮಾಡಬೇಕಾಗುವದೆಂಬದು ಗೊತ್ತಾಗುವದು. ಅವರು ಕಷ್ಟಕ್ಕೆ ಹೆದರದೆ, ಜನರ ಘೋಷಣೆ–ದೂಷಣೆಗಳಿಗೆ ಮನಗೊಡದೆ, ಮಾನಾಪಮಾನಗಳ ಪರಿವೆಮಾಡದೆ, ಶಾಂತ ದಾಂತ ಮನೋವೃತ್ತಿಯನ್ನು ಕಡೆತನಕ ಕಾದುಕೊಂಡು, ಆ ಪರಮಾತ್ಮನು ಹಮ್ಮಿದ ಸತ್ವಪರೀಕ್ಷೆಯನ್ನು ದಾಟಿ, ಅವನ ಕರುಣೆಗೆ ಪಾತ್ರರಾಗುವರು, ಎಂಬ ಮಾತನ್ನು ನಾವು ಅವರ ಜೀವನ ಚರಿತ್ರೆಯಲ್ಲಿ ಅಡಿಗಡಿಗೆ ಕಾಣಬಹುದು.

ಸಂದರ್ಭವು ಒದಗುವವರೆಗೂ ಎಲ್ಲರೂ ಶಾಂತರು, ದಾಂತರು; ಆದರೆ ಮನಸ್ಸನ್ನು ಕದಡುವ ಪ್ರಸಂಗವು ಬಂದಕೂಡಲೆ ಆ ಶಾಂತತೆ ಅಡಗಿ ಹೋಗುವದು; ಮನೋನಿಗ್ರಹವು ಮುರಿದು ಬೀಳುವದು. ಅಂಥ ಕಠಿಣ ಸಂದರ್ಭದಲ್ಲಿಯೂ ಕೂಡ ಶಾಂತ ದಾಂತರಾಗಿ ಉಳಿದು ಮುಂದುವರಿದರೆ ಮಾತ್ರ ಅವರಿಂದ ಮಹತ್ಕಾರ್ಯಗಳು ಸಾಧಿಸುವವು.

ಹೀಗೆ ಅತಿಮಾನವರಾದ ಎಂದರೆ ಸಾಮಾನ್ಯ ಮನುಷ್ಯರಿಗೆ ಅಸಾಧ್ಯ ವೆನಿಸುವ ಕಾರ್ಯಗಳನ್ನು ಸಾಧಿಸಿ ಪರಮಾತ್ಮನ ಕೃಪೆಗೆ ಪಾತ್ರರಾದ ಮಹಾನುಭಾವರನ್ನು ಸಾಮಾನ್ಯ ಜನರು ಬೇರೆ ಬೇರೆ ಭಾವನೆಗಳಿಂದ ನೋಡುವರು. ಭಕ್ತಿ ಸಂಪನ್ನವಾದ ಹೃದಯದವರಿಗೆ ಅವರು ಪರಮಾತ್ಮನ ಅವತಾರದಂತೆ ತೋರುವರು. ಮಿಕ್ಕವರೂ ಸಹ ಅವರನ್ನು ಅನುಕರಣೆ ಮಾಡುವರು. ಮತ್ತು ಅಂತಹ ಸಾಧನ ಸಂಪನ್ನನಾದ ಮಹಾವ್ಯಕ್ತಿಯನ್ನು ಭಜಿಸಿ ಪೂಜಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆಯಬೇಕೆಂಬ ಆಶೆಯೂ ಅವ ರನ್ನು ಆ ಮಾರ್ಗಕ್ಕೆ ಎಳೆಯುವದು. ಇಲ್ಲಿ ನಾವು ಒಂದು ಮಾತನ್ನು ಮರೆಯಲಾಗದು. ಗೀತೆಯಲ್ಲಿ ಭಗವಂತನು ತಾನೇ ಹೇಳಿರುವಂತೆ ಸರ್ವ ಪ್ರಾಣಿಗಳಲ್ಲಿಯೂ ಆತನ ಅಂಶವು ಇದ್ದೇ ಇರುವದು. ಒಂದು ಚಿಕ್ಕ ಬೆಂಕಿಯ ಕಿಡಿಯನ್ನು ತಕ್ಕ ಜ್ವಲನಸಾಧನಗಳನ್ನಿಟ್ಟು ಊದಿ ಹೊತ್ತಿಸಿ ಪ್ರಜ್ವಲಿಸುವ ಅಗ್ನಿ ಕುಂಡವನ್ನಾಗಿ ಮಾಡಬಹುದಲ್ಲವೆ? ಹಾಗೆಯೇ ಪ್ರತಿ ಮಾನವನಲ್ಲಿಯೂ ಅದೃಶ್ಯವಾಗಿ ವಾಸವಾಗಿರುವ ಭಗವಂತನ ಅಂಶವನ್ನು ಸದ್ವಿಚಾರ ಸತ್ಸಾಧನಗಳ ಸಹಾಯದಿಂದ ಜಾಗ್ರತಗೊಳಿಸಿಕೊಂಡರೆ ಅವ ನೊಬ್ಬ ಮಹಾಪುರುಷನಾಗಬಲ್ಲನೆಂಬದು ಇಂಥ ಸಾಧುಸಂತರ ಚರಿತ್ರೆಯ ಸೂಕ್ಷ್ಮ ಅವಲೋಕನೆಯಿಂದ ನಮಗೆ ಅವಗತವಾಗುವದು.

ಭಗವಾನ್ ಶ್ರೀ ಶ್ರೀಧರ ಸ್ವಾಮಿಗಳವರ ಚರಿತ್ರೆ ಅಂಥ ಉದ್ದೀಪಕ ಚರಿತ್ರೆಯಾಗಿದೆ; ಪ್ರತಿಮಾನವನೂ ಅದನ್ನು ಆದರ್ಶವಾಗಿಟ್ಟುಕೊಂಡು ನಡೆದು ಜೀವನ ಸಾರ್ಥಕಮಾಡಿಕೊಳ್ಳಬಹುದಾದ ಮಾರ್ಗದರ್ಶಕ ಸಾಧನ ವಾಗಿದೆ.ಇದು ಓರ್ವ ಸರ್ವಸಾಧಾರಣ ವ್ಯಕ್ತಿಯು ತನ್ನ ಅಸಾಧಾರಣವಾದ ಮನೋಬಲದಿಂದ ಸ್ವತಃಸಿದ್ಧವಾದ ನಿಜರೂಪವನ್ನರಿತು ಮಹಾನ್ ವಿಭೂತಿ ಪುರುಷನಾಗಬಲ್ಲನೆಂಬುದನ್ನು ಅತಿ ಸ್ಪಷ್ಟವಾಗಿ ಚಿತ್ರಿಸುವುದು. ಆಳವಾಗಿ

ಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ

ವಿಮರ್ಶಿಸಿದರೆ, ಪ್ರತಿಯೊಬ್ಬನಲ್ಲಿಯೂ ಅಖಂಡವಾಗಿ ವ್ಯಾಪಿಸಿರುವ ದಿವ್ಯ ಚೈತನ್ಯವೊಂದಿದೆ. ಅದನ್ನು ಅರಿತು, ಉದ್ದೀಪನಗೊಳಿಸಿಕೊಂಡು, ತಾನು ಅದರಲ್ಲಿಯೇ ತನ್ಮಯನಾಗಿ ಕೊನೆಗೆ ಆ ಅದ್ವಿತೀಯ ಚೈತನ್ಯವೇ ತಾನಾಗ ಬಲ್ಲನೆಂಬುದನ್ನು ಶ್ರೀ ಶ್ರೀಧರ ಸ್ವಾಮಿಗಳು ನಮ್ಮ ಎದುರು ಪ್ರತ್ಯಕ್ಷ ಪ್ರಮಾಣವಾಗಿ ಇಟ್ಟಿದ್ದಾರೆ.

ಇಳೆಯೊಳೆಂದೆಂದೆಮ್ಮ ಧರ್ಮದ ।
ಕಳೆಯಿಳಿದು ಬೆಳೆಯುವದಧರ್ಮವು ।
ಇಳಿದು ಬಹೆನಂದಂದು ಧರ್ಮೋದ್ಧಾರ ಕಾರಣದೆ ॥

ಎಂದು ಭಗವಂತನು ಶ್ರದ್ಧಾಳುಗಳಾದ ಭಕ್ತವೃಂದಕ್ಕೆ ಗೀತೆಯಲ್ಲಿ ಅಭಯವಚನವನ್ನಿತ್ತಿದ್ದಾನೆ.

ಕಳೆಯೆ ಸುಜನರ ಕಷ್ಟಸಂಸೃತಿ-
ಯುಳಿಯೆ ದುರ್ಜನ ಕುಲವ ಧರೆಗಾ-
ನಿಳಿದು ಬಹೆನುದ್ಧರಿಸೆ ಧರ್ಮವ ಯುಗಯುಗಂಗಳಲಿ ॥

ಎಂಬದೂ ಕೂಡ ಆ ಪರಮಾತ್ಮನ ಕರುಣಾಬುದ್ಧಿಯ ಮತ್ತು ಧರ್ಮ ಸಂರಕ್ಷಣೆಯ ಅಭಿಮಾನ ಪೂರ್ಣವಾದ ಪ್ರೇರಕ ವಾಕ್ಯವೇ ಸರಿ.

ಇಲ್ಲಿ ನಾವು ಆ ಪರಮಾತ್ಮನು ಅವತರಿಸುವನೆಂಬ ಮಾತಿನ ಹೊಲಬನ್ನು ಸರಿಯಾಗಿ ಅರಿತುಕೊಳ್ಳುವದು ಅವಶ್ಯ. ಅದರ ರಹಸ್ಯವನ್ನರಿಯದೆ ಮಾತು ಮಾತಿಗೆ ದೇವರು ಅವತರಿಸಿ ಬಂದಿರುವನೆಂದು ಭಾವಿಸುವದು ಸರಿಯಲ್ಲ. ಶ್ರೀ ಶ್ರೀಧರ ಸ್ವಾಮಿಯವರು ಈ ಮಾತನ್ನು ತಮ್ಮ ಭಕ್ತರಿಗೆ ಅಡಿಗಡಿಗೆ ವಿಶದಪಡಿಸುತ್ತಿರುವ ವಿಚಾರಗಳನ್ನು ನಾವು ಗಮನಿಸಬೇಕು. ಸಾಧುಸಂತರೆಲ್ಲರೂ ಪರಮಾತ್ಮನ ಅವತಾರವೆಂದು ಭಾವಿಸುವದು ಒಂದು ವಿಧದ ಮೂಢ ಭಕ್ತಿಯ ನಿದರ್ಶನಮಾತ್ರ. ಒಳತಿರುಳನ್ನು ತಿಳಿಯಲಾರದ ಜನ ಜಂಗುಳಿ ಈ ಭಾವನೆಯನ್ನುತಳೆದು ಆ ಸಾಧುಸಂತರ ಉಪದೇಶಗಳನ್ನು ಪಾಲಿಸಲು ಹವಣಿಸುತ್ತಿದ್ದರೆ ಹಾಗೆ ಹವಣಿಸಲಿ. ಆದರೆ ತಿಳಿವಳಿಕೆಯುಳ್ಳವರೂ ಸಹ ಅಂತಹ ಸಿದ್ಧಪುರುಷರನ್ನು ಜನ್ಮತಃ ದೇವರ ಪ್ರತಿನಿಧಿ ಸ್ಥಾನದಲ್ಲಿ ಇಡುವದು ಸರಿಯಲ್ಲ. ನಿಷ್ಠಾವಂತನಾಗಿ ಸರಿಯಾದ ಸಾಧಕ ಮಾರ್ಗದಲ್ಲಿ

ಸಾಗಿದರೆ 'ನರನು ನಾರಾಯಣನಾಗ ಬಲ್ಲನು' ಎಂಬ ವಿಚಾರವೇ ಇಲ್ಲಿ ಪ್ರಾಮುಖ್ಯವಾಗಿ ಭಾವಿಸಬೇಕಾದ ಮಾತು. ಅಲ್ಲದೆ, ದೇವರನ್ನು ನಾಟಕದೊಳಗಿನ ಭಿನ್ನ ಭಿನ್ನ ಪಾತ್ರಗಳನ್ನು ಅಭಿನಯಿಸುವ ನಟನಸ್ಥಾನಕ್ಕೆ ಪ್ರತ್ಯಕ್ಷವಾಗಿ ಅಡಿಗಡಿಗೆ ಇಳಿಸುತ್ತ ಹೋಗುವದು ತೀರ ಗೌಣ,ಎಂಬುದನ್ನು ನಾವೆಲ್ಲರೂ ಅರಿತಿರಬೇಕು. ತಮ್ಮ ಭಕ್ತಿಪೂರಿತವಾದ ಸಾಧನಮಾರ್ಗದ ಬಲದಿಂದ ಅವರು ನಿಷ್ಕಾಮವಂತರಾದವರಿಗೆ ಅತಿಮಾನವರಾಗಿ, ದೇವ ಸದೃಶರಾಗಿ, ತೋರಬಹುದು; ಆ ಮಾತು ಬೇರೆ.

ಇನ್ನು ಇಂಥ ಸಾಧು ಸತ್ಪುರುಷರು ತಮ್ಮ ಅಲೌಕಿಕ ಶಕ್ತಿಯ ಬಲದಿಂದ ಪಾರ್ಶ್ವವರ್ತಿಗಳನ್ನೂ ಅನುಯಾಯಿಗಳನ್ನೂ ಸನ್ಮಾರ್ಗಕ್ಕೆ ಎಳೆದು ಹಚ್ಚುವರೆಂಬದನ್ನು ಮಾತ್ರ ನಾವು ಎಲ್ಲೆಡೆಯಲ್ಲಿ ಕಾಣುತ್ತೇವೆ. ಬೆಂಕಿಯ ಕೆಂಡವನ್ನು ಸೋಂಕಿದ ಹಸಿಕಡ್ಡಿಯು ಮೊದಲು ಹೊಗೆಯೆಬ್ಬಿಸಿದರೂ ಅದರ ಕಾವಿನಿಂದ ಒಣಗಿಕೊಂಡ ಬಳಿಕ ಉರಿಯು ಹತ್ತುವದು. ಆದರೆ ದೀಪದ ಕಡ್ಡಿಯನ್ನು ಆ ಕೆಂಡದ ಬಳಿಗೆ ಒಯ್ಯುವದೊಂದೇ ತಡ. ಜಗ್ಗನೆ ಹೊತ್ತಿಕೊಂಡು ಉರಿದೇಳುವದು. ಸ್ವಾಮಿ ರಾಮಕೃಷ್ಣ ಪರಮಹಂಸರಿಗೆ ತಮ್ಮ ಶಿಷ್ಯರನೇಕರನ್ನು ಹಾದಿಗೆತರಲು ಬಹುಕಾಲ ಹಿಡಿಯಿತು. ಆದರೆ ಉಜ್ವಲ ಪ್ರತಿಭಾವಂತ ಶಿಷ್ಯ ನರೇಂದ್ರನ ಆತ್ಮಬಲವನ್ನು ಉದ್ದೀಪನಗೊಳಿಸಿ ಸ್ವಾಮಿ ವಿವೇಕಾನಂದರನ್ನಾಗಿ ಮಾಡಲು ಹೆಚ್ಚು ಅವಕಾಶವೇ ಹತ್ತಲಿಲ್ಲ. ಪರಮಾತ್ಮನೇ ಅವರಿಗೆ ಅಂಥ ಶಕ್ತಿಯನ್ನು ಕರುಣಿಸಿರುವನು.

ಇಂಥ ಮಹಾನುಭಾವರ ದರ್ಶನಾನುಗ್ರಹಗಳಿಂದ ಪ್ರಾಪಂಚಿಕರಾದ ಭಕ್ತರ ಮನಃ ಸಂಕಲ್ಪಗಳೆಲ್ಲ ಸಿದ್ಧಿಸುವವೆಂಬ ವಿಚಾರದಲ್ಲಿಯೂ ತಥ್ಯಾಂಶವಿಲ್ಲದಿಲ್ಲ. ಅವನ್ನು ಅನುಭವದಿಂದ ಕಂಡುಕೊಳ್ಳಬಹುದು.

ಇಷ್ಟೇ ಮೊದಲ ಮಾತುಗಳನ್ನು ಅರಿತುಕೊಂಡು,

"ನಮಸ್ತೇ ಶ್ರೀಧರ ಸ್ವಾಮಿನ್ ನಮಸ್ತೇ ರಾಘವಪ್ರಿಯ ।
ನಮಸ್ತೇ ಜಿತಸಮ್ಮೋಹ ದೇಹಿಮೇ ತವ ದರ್ಶನಮ್ ॥"

ಎಂದು ಪ್ರಾರ್ಥಿಸಿ ಸ್ವಾಮೀಜಿಯವರ ಪೂರ್ವಾಶ್ರಮ ಚರಿತ್ರೆಯನ್ನು ಓದಲು ಪ್ರಾರಂಭಿಸೋಣ.



ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ

ಬ್ರಹ್ಮಚೈತನ್ಯ ಭಗವಾನ್ ಶ್ರೀ ಶ್ರೀಧರಸ್ವಾಮಿ ಮಹಾರಾಜರವರು



ಶ್ರೀಗಣೇಶಾಯನಮಃ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ

ಭಗವಾನ್ ಶ್ರೀಧರ ಸ್ವಾಮಿಗಳವರ
ಸಂಕ್ಷಿಪ್ತ ಚರಿತ್ರೆ

೧. ವಂಶವೃತ್ತ

ಹೈದರಾಬಾದ ಸಂಸ್ಥಾನದ **ನಂದೇಡ** ಜಿಲ್ಹೆಯಲ್ಲಿ **ದೇಗಲೂರು** ಎಂಬ ಒಂದು ಪಟ್ಟಣವಿದೆ. ಸುಪ್ರಸಿದ್ಧರಾದ ಶ್ರೀ ಗುಂಡಾ ಮಹಾರಾಜ, ಹಾಗು ಶ್ರೀ ಧುಂಡಾ ಮಹಾರಾಜ ಇವರ ಜನ್ಮ ಸ್ಥಳವು ಇದೇ. ವಾರಕರೀ ಸಂಪ್ರದಾಯದ ಅನೇಕರಿಗೆ ಈ ಊರಿನ ಪರಿಚಯವುಂಟು. ಪಟ್ಟಣವು ರಮ್ಯವಾದ ನದೀತೀರದಲ್ಲಿದ್ದುದರಿಂದ ಧಾರ್ಮಿಕ ಸದ್ಭಾವನೆಗಳ ಪ್ರೇರಕ ವಾಗಿದೆ. ಇಲ್ಲಿಯೇ ಶ್ರೀ ಶ್ರೀಧರ ಸ್ವಾಮಿಗಳವರು ಉದಯವಾಗಿದ್ದು ಅವರ ವಂಶವೃತ್ತವು ಸರಿಯಾಗಿ ನಮಗೆ ದೊರೆತಿಲ್ಲ. ಇವರ ಜನ್ಮೇತಿಹಾಸಕ್ಕೂ ಶ್ರೀ ನೃಸಿಂಹ ಸರಸ್ವತಿಗಳವರ ಜನ್ಮೇತಿಹಾಸಕ್ಕೂ ತುಂಬ ಹೋಲಿಕೆಯುಂಟು. ಇವರೂ ಅಗಸ್ತ್ಯ ಗೋತ್ರವರಾಗಿದ್ದು, ಇವರಮಾತಾ ಪಿತೃಗಳು ಶ್ರೀ ಗಾಣಗಾಪುರದಲ್ಲಿ ಕಡುತರವಾದ ತಪಸ್ಸನ್ನಾಚರಿಸಿ, ತಮ್ಮ ವಂಶದ ಉದ್ಧಾರಕ್ಕಾಗಿಯೂ ಸಕಲ ಲೋಕೋದ್ಧಾರಕ್ಕಾಗಿಯೂ ಸುಪುತ್ರನು

ಹುಟ್ಟಲು ವರವನ್ನು ಪಡೆದಿದ್ದರು. ಸುಮಾರು ೧೫೦ ವರ್ಷಗಳ ಹಿಂದೆ ದೇಗಲೂರಿನಲ್ಲಿ ಆಶ್ವಲಾಯನ ಶಾಖೆಯ ಋಗ್ವೇದೀ ದೇಶಸ್ಥ ಪಂಗಡದ ಗಿರುಮಾಜಿಯೆಂಬ ಶ್ರೇಷ್ಠ ಬ್ರಾಹ್ಮಣರೊಬ್ಬರಿದ್ದರು. ತಿರುಮಾಜಿಯೆಂಬ ವರು ಅವರ ಮಕ್ಕಳಲ್ಲಿ ಒಬ್ಬರು. ತಿರುಮಾಜಿಯುವರಿಗೆ ಇಬ್ಬರು ಮಕ್ಕಳು. ಅವರಲ್ಲಿ **ಗೋವಿಂದರಾವ್** ಎಂಬವರು ಜ್ಯೇಷ್ಠಪುತ್ರರು. ಅವರಿಗೆ ಹೈದರಾ ಬಾದಿನಲ್ಲಿ 'ದಾದಾಸಾಹೇಬ' ಎಂದು ಕರೆಯುತ್ತಿದ್ದರು ತಿರುಮಾಜಿ ಯುವರ ದ್ವಿತೀಯ ಪುತ್ರರು **ನಾರಾಯಣರಾಯರು.** ಇವರೇ ನಮ್ಮ ಚರಿತ್ರ ನಾಯಕರಾದ ಶ್ರೀ ಶ್ರೀಧರ ಸ್ವಾಮಿಜಿಯುವರ ತಂದೆಯವರು.

ಗಿರುಮಾಜಿ, ತಿರುಮಾಜಿ ಎಂಬ ಹೆಸರುಗಳನ್ನು ಕೇಳಿ ಇವು ಎಂಥ ಹೆಸರು ಎಂದು ಶಂಕಿಸಬಹುದು. ಇದರಲ್ಲಿ 'ಗಿರಿ' ಎಂಬುದು ಹೆಸರಾ ಗಿಯೂ 'ಜಿ' ಎಂಬದು ಗೌರವಾರ್ಥ ಸೂಚಕ ಪ್ರತ್ಯಯವಾಗಿಯೂ ಇರು ವದು. ಈ ದೃಷ್ಟಿಯಿಂದ ಗಿರುಮಾಜಿಯೆಂಬ ಹೆಸರು ವಾಡಿಕೆಯಲ್ಲಿ ಬಂದಿತು. ತಿರುಮಾಜಿಯೆಂಬದೂ ಅದಕ್ಕೇ ಅನ್ವಯಿಸುವದು 'ತಿರು' ಎಂದರೆ ತಿರುಪತಿ, ತಿರುಮಲವೆಂತಲೂ ಹೇಳುವರು. 'ತಿರು' ಎಂಬದು ಪಾವಿತ್ರ್ಯನಿದರ್ಶಕವು. ಈ ದೃಷ್ಟಿಯಿಂದ ತಿರುಮಾಜಿಯೆಂಬ ಹೆಸರು ಪ್ರಚಾರದಲ್ಲಿ ಬಂದಿರುವದು. ಅವರ ಆರಾಧ್ಯ ದೇವರು ಶ್ರೀ ವೇಂಕಟೇಶ ನಾಗಿದ್ದನು. ಆದ್ದರಿಂದ ಶ್ರೀ ಸ್ವಾಮಿಜಿಯುವರಿಗೂ ಕೂಡ ಅವರ ತಂದೆ ತಾಯಿಗಳು '**ಶ್ರೀಧರ**' ಎಂದು ಹೆಸರಿಡಲು ಕಾರಣವಾಯಿತು.

ಈ ವಂಶದವರ ಕುಲದೇವತೆಯು ಶ್ರೀ ಅಂಬಾದೇವಿ. ಕೊಲ್ಹಾಪುರ, ತುಳಜಾಪುರ,ಮಾತಾಪುರ ಈ ಮೂರು ಸ್ಥಳಗಳಲ್ಲಿಯೂ ಅವರು ಪೂಜೆ ಸಲ್ಲಿ ಸುತ್ತಿದ್ದರು. ಆಶ್ವಿನ ನವರಾತ್ರಿಯ ಒಂಬತ್ತು ದಿನವೂ ಮನೆಯಲ್ಲಿ ವಿಜೃಂ ಭಣೆಯಿಂದ ಉತ್ಸವನಡೆಸುತ್ತಿದ್ದರು. ದೇಗಲೂರ ಮಠದಲ್ಲಿ ಶ್ರೀ ಹರಿಮಹಾ ರಾಜ, ಮತ್ತು ಶ್ರೀ ಗುಂಡಾಮಹಾರಾಜ ಇವರ ಸಮಾಧಿಗಳು ರಾಮ ಮಂದಿರದ ಎದುರುಗಡೆ ಇರುವವು. ಆ ರಾಮಮಂದಿರದ ಎಡಗಡೆಗೆ ವಿಠ್ಠಲನ ಮಂದಿರವಿದ್ದು, ಅಲ್ಲಿ ವಿಠ್ಠಲನದೆ ಪ್ರಧಾನೋಪಾಸನೆ ನಡೆಯು ತ್ತಿದೆ. ಸದ್ಯ ರಾಮಚಂದ್ರ ಎಂಬವರು ಈ ಮಠವನ್ನು ಚೆನ್ನಾಗಿ ನಡೆಸಿ ಕೊಂಡು ಹೋಗುತ್ತಲಿದ್ದಾರೆ. ಈ ಮಠದ ಮೂಲಪುರುಷರು ಗುಂಡಾ

ಮಹಾರಾಜರೆಂಬವರು. ಇವರಿಗೆ ಪ್ರತ್ಯಕ್ಷ ನಾರದರಿಂದ ಉಪದೇಶವಾಗಿತ್ತೆಂಬದು ಅಲ್ಲಿ ನಮಗೆ ತಿಳಿದು ಬಂದಿತು. ಇವರ ಪ್ರಭಾವದಿಂದಲೇ ಶ್ರೀ ಸ್ವಾಮಿಜಿಯವರ ಪೂರ್ವಜರು ಶ್ರೀವಿಠ್ಠಲನ ಭಕ್ತರಾಗಿದ್ದರು.

ದೇಗಲೂರ ಬಳಿಯಲ್ಲಿ 'ಇಂದೂರ ಬೋಧನ್' ಎಂಬ ನಗರವಿರುವದು. ಅದಕ್ಕೀಗ 'ನಿಜಾಮಾಬಾದ' ಎಂದು ಕರೆಯುತ್ತಾರೆ. ಅಲ್ಲಿ ಶ್ರೀ ಸಮರ್ಥ ರಾಮದಾಸಸ್ವಾಮಿಗಳ ಶಿಷ್ಯರಾದ ಉದ್ಧವ ಸ್ವಾಮಿಗಳ ಮಠವಿದೆ. ಆ ಮಠದ ಅಧಿಕಾರಿಯು ಇವರ ಪೂರ್ವಜನಾದುದರಿಂದ ಶ್ರೀರಾಮನ ಉಪಾಸನೆಯೂ ಇವರ ವಂಶದಲ್ಲಿ ನಡೆದು ಬಂದಿರಬೇಕು. ಗಿರುಮಾಜಿ-ತಿರುಮಾಜಿ ಇವರಿಗೆ ಯಾರಿಂದ ಅನುಗ್ರಹವಾಗಿತ್ತೆಂಬುದು ಸರಿಯಾಗಿ ತಿಳಿದು ಬಂದಿಲ್ಲ. ಆದರೆ ಗೋವಿಂದರಾವ್ ಮತ್ತು ನಾರಾಯಣರಾವ್ ಇವರಿಗೆ ಹೈದರಾಬಾದಿನ ಕಲ್ಯಾಣಸ್ವಾಮಿಯ ಗಾದಿಯ ಒಬ್ಬ ಶ್ರೇಷ್ಠ ಪುರುಷರಿಂದ ಅನುಗ್ರಹ ದೊರೆತಿತ್ತು. ಆದ್ದರಿಂದ ಪೂರ್ವಾಪರವನ್ನೆಲ್ಲ ವಿಮರ್ಶಿಸಿ ನೋಡಿದಲ್ಲಿ ಶ್ರೀವಾರಕರೀ, ಶ್ರೀಸಮರ್ಥ, ಶ್ರೀದತ್ತ ಮುಂತಾದ ಎಲ್ಲ ಸಂಪ್ರದಾಯಗಳಿಗೂ ಶ್ರೀಧರಸ್ವಾಮಿಜಿಯವರ ವಿಶ್ವಾಸದಲ್ಲಿ ಸಂಪೂರ್ಣ ಪಾಲಿದೆ.

ಶ್ರೀ ಸ್ವಾಮಿಜಿಯವರ ಮನೆತನದ (ಅಡ್ಡ) ಹೆಸರು 'ಪತಕಿ' ಎಂದಿದೆ. '**ಪತಕೀ**' ಎಂಬ ಅಡ್ಡಹೆಸರು ಬೇರೆ ಬೇರೆ ಜಾತಿಯವರಲ್ಲಿ ರೂಢಿಯಲ್ಲಿದೆ. ಬ್ರಾಹ್ಮಣರಲ್ಲಿರುವ ಈ 'ಪತಕಿ' ಎಂಬ ಶಬ್ದವು '**ಫಸಕೀ**' ಎಂಬ ಶಬ್ದದ ಅಪಭ್ರಂಶವಾಗಿದೆ. ನಿಜಾಮಾಬಾದಿನಲ್ಲಿ ಒಬ್ಬ ಅಧಿಕಾರಿಗೆ ಈ ಹೆಸರನ್ನು ಹೇಳುವ ವಾಡಿಕೆಯಿತ್ತು. ಶ್ರೀ ಸ್ವಾಮಿಜಿಯವರ ವಂಶದಲ್ಲಿ ಹಿಂದೆ ಯಾರೋ ಈ ಅಧಿಕಾರದಲ್ಲಿದ್ದುದರಿಂದ ಅವರ ಮನೆತನಕ್ಕೆ 'ಪತಕಿ' ಎಂದು ಅಡ್ಡಹೆಸರು ಬೀಳಲು ಕಾರಣವಾಯಿತು. ಸ್ವಾಮಿಜಿಯವರ ಮನೆಗೆ 'ಪತಕ್ಯಾಂಚಾ ವಾಡಾ' ಎಂದು ಹೆಸರಿದೆ. ಅಲ್ಲಿ ಅದರ ಕೆಲವು ಅವಶೇಷಗಳು ಈಗಲೂ ಕಂಡುಬರುವವು. ಮುಂದೆ ಎಂದಾದರೂ ಈ ಸ್ಥಳವನ್ನು ವಶಕ್ಕೆ ತೆಗೆದುಕೊಂಡು ಅಲ್ಲಿ ಒಂದು ಸ್ಮಾರಕವನ್ನು ಕಟ್ಟಿಸುವ ಇಚ್ಛೆ ನಮಗಿದೆ.

ಖಂಡಿತವಾಗಿಯೂ ಶ್ರೀ ಸ್ವಾಮಿಜಿಯವರ ವಂಶವು ಧನ್ಯ. ನಮಗೆ ಆ ಕುಲದ ವಿಷಯವಾಗಿ ತುಂಬಾ ಆದರ ಹುಟ್ಟುತ್ತದೆ. ಆ ವಂಶದಲ್ಲಿ

ಬಹುಕಾಲದಿಂದ ನಡೆದು ಬಂದ ಪರಮಾತ್ಮ ಭಕ್ತಿಯೇ ಅದರಲ್ಲಿ ಇಂತಹ ಸುಕುಮಾರನು ಉದಯಿಸಲು ಕಾರಣವಾಯಿತು.

ಅಜ್ಜನವರು ತೀರಿಕೊಂಡ ಬಳಿಕ ಗೋವಿಂದರಾವ್ ಹಾಗು ನಾರಾಯಣರಾವ್ ಇವರಿಬ್ಬರೂ ತಮ್ಮ ಚಿಕ್ಕ ತಂದೆಯವರ ಅಡಿಯಾಳಾಗಿ ಉಳಿಯ ಬೇಕಾಯಿತು. ಬಾಲ್ಯದಲ್ಲಿಯೇ ತಂದೆ ತೀರಿಕೊಂಡಿದ್ದರು. ಸಹೋದರರಿಬ್ಬರಿಗೂ ಈಗ ಚಿಕ್ಕಪ್ಪನೇ ಗತಿ! ಆದರೆ ಆತನ ಸ್ವಭಾವವು ಬಲು ಕ್ರೂರ. ಇವರು ವಿದ್ಯಾವಂತರಾದರೆ ಆಸ್ತಿಯ ವಿಷಯದಲ್ಲಿ ಕೈಹಾಕಬಹುದೆಂದುಕೊಂಡು, ವ್ಯಾಸಂಗಕ್ಕೆ ಎಡೆಗೊಡದೆ ಇಬ್ಬರನ್ನೂ ದನಕಾಯುವದಕ್ಕೆ ಹಾಕಿಬಿಟ್ಟನು. ಆ ಬಾಲಕರಾದರೋ ಬಂದ ಕಷ್ಟಗಳನ್ನೆಲ್ಲ ಸಹಿಸುತ್ತ ಮರುಮಾತನಾಡದೆ ಹೇಳಿದ ಕೆಲಸಗಳಲ್ಲಿ ನಿರತರಾಗಿರುತ್ತಿದ್ದರು. ಆದರೂ ಚಿಕ್ಕಪ್ಪನಿಗೆ ತೃಪ್ತಿಯಿಲ್ಲ. ಬಗೆ ಬಗೆಯಾಗಿ ತೊಂದರೆ ಪಡಿಸುವನು; ಹೊಡೆದು ಹಿಂಸಿಸುವನು. ಪಾಪ! ಬಾಲಕರು ಎಷ್ಟು ಕಷ್ಟ ಸಹಿಸಿದರು! ಎಂಥ ಅಪಮಾನ ಪಟ್ಟರು! ಆದರೂ ಶಾಂತಿಯ ಮೇರೆಯನ್ನು ಮೀರಲಿಲ್ಲ. ಒಂದೊಂದುಬಾರಿ ಮನೆಬಿಟ್ಟು ಓಡಿಹೋಗಬೇಕೆಂದು ಆಲೋಚಿಸುತ್ತಿದ್ದರು. ಆದರೆ ತಮ್ಮ ಮನೆ, ತಮ್ಮ ಚಿಕ್ಕಪ್ಪ ಎಂಬ ಮೋಹವೂ ಹಿರಿಯರ ಆಜ್ಞೆಯನ್ನು ಮೀರಬಾರದೆಂಬ ಶ್ರದ್ಧೆಯೂ ಅವರನ್ನು ಅಲ್ಲಿಯೇ ಕಟ್ಟಿಹಾಕುತ್ತಿತ್ತು. ಒಂದು ದಿನ ಆಹಾರಕ್ಕೆ ಏನೂ ಸಿಕ್ಕಲಿಲ್ಲ; ಅಸಾಧ್ಯ ಕೆಲಸಮಾಡಿದ್ದರಿಂದ ಆಯಾಸವೂ ಬಹಳವಾಗಿತ್ತು. ಆ ದಿನ ಚಿಕ್ಕಪ್ಪನಿಗೆ ಇವರನ್ನು ಹೊಡೆಯಲು ಯಾವ ಕಾರಣವೂ ಸಿಕ್ಕಲಿಲ್ಲ. ಆದರೂ ಸಿಟ್ಟಿಗೆದ್ದು ಬಲವಾಗಿ ಹೊಡೆದು ಅವರನ್ನು ನೆಲಕ್ಕೆ ಕೆಡವಿದನು. ಹಸಿವೆಯಿಂದ ಬಳಲುವ ತಾಪವೊಂದುಕಡೆ; ಆತನ ಹೊಡೆತದ ನೋವು ಇನ್ನೊಂದುಕಡೆ; ಈ ರೀತಿ ಅವರ ಪಾಡಾಯಿತು. ಚಿಕ್ಕಪ್ಪನು ಹೀನದೃಷ್ಟಿಯಿಂದ ಅವರ ಕಡೆ ನೋಡಿ, ಬಂದವರೆದುರು "ಕಂಬದ ಹಾಗೆ ಬೆಳೆದಿದ್ದಾರೆ; ಆದರೆ ಒಂದಕ್ಷರವೂ ಓದಲಿಕ್ಕೆ ಬಾರದು. ಏತಕ್ಕಾಗಿ ಈ ಕುಲದಲ್ಲಿ ಹುಟ್ಟಿದರೋ ಕಾಣೆ. ಇದು ನಮ್ಮ ದುರ್ದೈವ" ಎಂದು ಹಳಿದನು. ಆ ಮಾತನ್ನು ಕೇಳುತ್ತಲೇ ಇಬ್ಬರೂ ಧೈರ್ಯದಿಂದ ಮುಂದೆ ಬಂದು "ನಮ್ಮನ್ನು ದನಕಾಯಲಿಕ್ಕೆ ಹಾಕದೆ ಪಾಠಶಾಲೆಗೆ ಸೇರಿಸಿದ್ದರೆ ಖಂಡಿತ ಬುದ್ಧಿವಂತರಾಗುತ್ತಿದ್ದೆವು.

ಇದರಲ್ಲಿ ನಮ್ಮ ತಪ್ಪೇನಿದೆ?" ಎಂದರು. "ನೀವು ಅಷ್ಟು ಬುದ್ಧಿವಂತರಾಗಿದ್ದು ಮನೆಯಲ್ಲಿ ಶಿಕ್ಷಣ ಸಿಗುವದಿಲ್ಲವಾದರೆ, ಬೇರೆ ಕಡೆಗೆ ಹೋಗಿ ಸ್ವತಂತ್ರತೆಯಿಂದ ವಿದ್ಯೆಕಲಿಯಿರಿ; ಇನ್ನೇನೂ ಚಿಕ್ಕವರಲ್ಲ ನೀವು. ಆದರೆ ವಿದ್ಯೆಯು ನಿಮಗೇ ಬೇಡವೆನಿಸಿದೆ" ಎಂದು ಚಿಕ್ಕಪ್ಪನೆಂದನು. ತತ್‌ಕ್ಷಣ ಇದೂ ಒಂದು ಸುಸಂಧಿ ಎಂದು ಕೊಂಡು ಇಬ್ಬರೂ ಸೇರಿ, "ಹಾಗೋ, ನಾವು ಹೊರಡುತ್ತೇವೆ. ನಿಮ್ಮ ಆಜ್ಞೆಯಂತೆ ವಿದ್ಯೆ ಕಲಿತು ಸ್ವಸಂರಕ್ಷಣೆ ಮಾಡಿಕೊಳ್ಳುತ್ತೇವೆ. ನಮಗೆ ನಿಮ್ಮ ಆಸ್ತಿಯಲ್ಲಿ ಒಂದು ತೃಣವೂ ಬೇಕಿಲ್ಲ" ಎಂದು ಉತ್ತರಿಸಿ ಹೈದರಾಬಾದದ ದಾರಿಯನ್ನು ಹಿಡಿದು ಹೊರಟರು.

ಶ್ರೀ ಸ್ವಾಮಿಜಿಯವರ ಪುಣ್ಯಶೀಲಕುಲದಲ್ಲಿ ಹೀಗೇಕೆ ಆಯಿತು? ಇಂತಹ ದುರ್ಘಟನೆಯೇಕೆ ನಡೆಯಿತು? ಈ ರೀತಿ ವರ್ತನೆ ನಡೆಯಲು ಕಾರಣವೇನು? ಎಂಬುದನ್ನು ತುಸು ನೋಡೋಣ. ಈ ವಂಶದಲ್ಲಿ ಒಂದು ಸರ್ಪವಧೆಯಾಗಿ ಶಾಪ ತಟ್ಟಿದ್ದಿತು. ಆ ವಧೆ ಯಾರಿಂದ ನಡೆಯಿತೆಂಬದು ನಿರ್ದಿಷ್ಟವಾಗಿ ತಿಳಿದು ಬರುವಂತಿಲ್ಲ. ನಾರಾಯಣರಾಯರ ಚಿಕ್ಕಪ್ಪನು ರಾಜಸ ಸ್ವಭಾವದವನಾಗಿ ಯುದ್ಧಕಲೆಯಲ್ಲಿ ನಿಪುಣನೂ ದೃಢಕಾಯನೂ ಆಗಿದ್ದನು. ಇವನ ಸ್ವಭಾವಕ್ಕನುಸಾರವಾಗಿ ಸರ್ಪವಧೆಯು ಇವನಿಂದಲೇ ಆಯಿತೆಂದರೆ ತಪ್ಪಾಗಲಾರದು. ಆದರೆ ಹಾಗೆ ಸಿದ್ಧಾಂತವಾಗಿ ಹೇಳಲುಬರುವಂತಿಲ್ಲ. ಒಂದು ದಿನ ಭಯಂಕರವಾದ ಸರ್ಪವೊಂದು ಕಾಣಿಸಿಕೊಂಡಿತು. ಅಕ್ಕಪಕ್ಕದವರೆಲ್ಲ ಗಾಬರಿಯಾದರು. ಅವರ ಮನೆಯಲ್ಲಿದ್ದವನೊಬ್ಬನು ಕೂಡಲೆ ಅದನ್ನು ಹೊಡೆಯಲು ಹೊರಟನು. ಆ ಸರ್ಪವು ತನ್ನನ್ನು ಹೊಡೆಯಕೂಡದೆಂದು ಹೆಡೆಯಲ್ಲಾಡಿಸಿ ಪರಿ ಪರಿಯಾಗಿ ಸೂಚಿಸಿದರೂ ಕರುಣೆಯಿಲ್ಲದೆ ಕೊಂದು ಹಾಕಿದನು. ಸರ್ಪವು ಆದಿನ ರಾತ್ರಿ ಸ್ವಪ್ನದಲ್ಲಿ ಬ್ರಾಹ್ಮಣವೇಷದಿಂದ ಕಾಣಿಸಿಕೊಂಡು "ನೀನು ಇಂದು ನಿನ್ನ ಮೂಲ ಪುರುಷನಾದ ನನ್ನನ್ನು ಕೊಂದಿರುವೆ. ನಾನು ಸರ್ಪರೂಪದಲ್ಲಿದ್ದು ಬಹುದಿನಗಳಿಂದ ನಿನ್ನ ಕುಲದ ಸಂರಕ್ಷಣ ಮಾಡುತ್ತಿದ್ದೆನು. ಆದರೂ ನೀನು ನನ್ನಲ್ಲಿ ಚಾಂಡಾಲ ವೃತ್ತಿಯನ್ನು ತೋರಿದೆ. ನಿನ್ನ ಕುಲವು ನಿರ್ವಂಶವಾಗಲಿ" ಎಂದು ಶಪಿಸಿತು. ಆಗ ಅವನು ಪಶ್ಚಾತ್ತಾಪದಿಂದ "ನನ್ನ ಅನ್ಯಾಯದ ಹತ್ಯಾದೋಷ

ವನ್ನು ಮನ್ನಿಸದಿದ್ದರೆ ನಮ್ಮ ಪಾಡು ಏತಕ್ಕೆ ಬಂದೀತು? ನಮ್ಮ ಕುಲದ ಉದ್ಧಾರವಾಗುವ ಬಗೆ ಹೇಗೆ?" ಎಂದು ಸ್ವಪ್ನದಲ್ಲಿಯೇ ಬೇಡಿಕೊಂಡನು. ಆಗ "ನಿಮ್ಮ ಈ ಕುಲದ ಉದ್ಧಾರಕ್ಕಾಗಿ ದತ್ತವರದಿಂದ ಒಬ್ಬ ಬಾಲ ಸಂನ್ಯಾಸಿಯು ಹುಟ್ಟುವನು. ಆತನಿಂದ ಈ ಕುಲವು ಪಾವನವಾಗುವದಲ್ಲದೆ ಲೋಕಕಲ್ಯಾಣವೂ ಆಗುವದು" ಎಂದು ಅಭಯವಿತ್ತು ಬ್ರಾಹ್ಮಣರೂಪದಸರ್ಪವು ಅದೃಶ್ಯವಾಯಿತು. ಆನಂತರ ಆ ಸಂಸಾರಕ್ಕೆ ಅನೇಕ ತೊಂದರೆಗಳು ಬರಲಾರಂಭಿಸಿದವು. ಎಲ್ಲ ಬಗೆಯಿಂದಲೂ ಈ ಕುಟುಂಬವು ಕ್ಷೀಣಪ್ರಾಯವಾಯಿತು. ಆ ಬಾಲಸಂನ್ಯಾಸಿಯೇ ನಮ್ಮ ಚರಿತ್ರನಾಯಕರಾದ ಶ್ರೀಧರಸ್ವಾಮಿಯವರೆಂಬದು ವಾಚಕರ ಲಕ್ಷ್ಯಕ್ಕೆ ಬಂದಿರಬಹುದಲ್ಲವೆ?

ನಾರಾಯಣರಾಯರನ್ನೂ ಗೋವಿಂದ ರಾಯರನ್ನೂ ಮನೆಯಿಂದ ಹೊರಡಿಸಿದ ಚಿಕ್ಕಪ್ಪನು ಹೆಚ್ಚುಕಾಲ ಬದುಕಲಿಲ್ಲ. ಮಾನವದೇಹವನ್ನು ಬಿಟ್ಟು ಆತನು ಹಣದಾಸೆಯಿಂದ ಬ್ರಹ್ಮರಾಕ್ಷಸನಾಗಿ ಕುಳಿತುಬಿಟ್ಟನು. ಕಳೆದ ವರ್ಷ (೧೯೪೪ರಲ್ಲಿ) ಶ್ರೀಸ್ವಾಮಿಜಿಯವರಿಗೆ ಅಲ್ಲಿಗೆ ಹೋಗಿ ಆತನನ್ನು ಉದ್ಧರಿಸಲು ಅವರ ಮಾತೃಶ್ರೀಯವರ ದೃಷ್ಟಾಂತವಾದುದರಿಂದ ದೇಗಲೂರಿಗೆ ಹೋಗುವ ಪ್ರಸಂಗಬಂದಿದ್ದಿತು. ಆದರೆ ವಾಚಕರು ಆ ಮನುಷ್ಯನನ್ನು ವಿಪರೀತವಾಗಿ ಎಣಿಸದೆ, ಈ ಮಹಾಪುರುಷರ ಜನ್ಮಕ್ಕೆ ಆತನೂ ಒಂದುಬಗೆಯಿಂದ ಕಾರಣನಾದನೆಂದೇ ಭಾವಿಸಬೇಕು.

ಕೆಸರಿನಲ್ಲಿಯೂ ಕಮಲವು ಹುಟ್ಟುವದಲ್ಲವೆ? ಕಮಲಕ್ಕೆ ಜನ್ಮವಿತ್ತ ಕೆಸರನ್ನು ಕೆಸರೆಂದು ಹಳಿಯುವದೇಕೆ?

ನಾರಾಯಣರಾಯರೂ ಗೋವಿಂದರಾಯರೂ ಕಾಲುನಡಿಗೆಯಿಂದಲೇ ಹೈದರಾಬಾದಕ್ಕೆ ಹೋಗಬೇಕೆಂದು ನಿರ್ಧರಿಸಿ ಹೊರಟರು. ಕೈಯಲ್ಲಿ ಹಣವಿಲ್ಲ, ಮೈಮೇಲೆ ಹೆಚ್ಚಿನ ಬಟ್ಟೆಯಿಲ್ಲ. ಇಂಥಲ್ಲಿಗೆ ಹೋಗಿ ಇಂಥದೇ ಕೆಲಸ ಮಾಡಬೇಕೆಂಬ ನಿರ್ಧಾರವೂ ಇಲ್ಲ. ಎಲ್ಲದಕ್ಕೂ ಪರಮಾತ್ಮನ ಪ್ರೇರಣೆಯೇ ಕಾರಣವೆಂಬ ಒಳಮನಸ್ಸಿನ ಹೇಳಿಕೆಯೊಂದೇ ಅವರನ್ನು ಮುಂದೆ ಮುಂದೆ ಸಾಗಿಸುತ್ತಿದ್ದಿತು. ಹೊಟ್ಟೆಯಹಸಿವೆ ದಾರಿಯದಣಿವುಗಳನ್ನು ಲಕ್ಷಿಸದೆ ಸಾಗಿ ಬಂಧುಗಳಿಬ್ಬರೂ ಹೈದರಾಬಾದವನ್ನು ಸೇರಿದರು.

೨. ಹೈದರಾಬಾದಿನಲ್ಲಿ ಸಹೋದರರು

ಇತ್ತ ಈ ಬಂಧುಗಳಿಬ್ಬರೂ ಮಾತಾಡಿಕೊಂಡು ಹೈದರಾಬಾದಕ್ಕೆ ಬಂದು ಸೇರಿದರು. ಜನ್ಮದಾರಭ್ಯ ಮನೆಬಿಟ್ಟು ಹೊರಟವರಲ್ಲ; ಹಣಕಾಸಿನ ಸಹಾಯವೂ ಇಲ್ಲ.ತಾವಾಗಿ ಇತರರ ಮನೆಗೆ ಹೋಗುವದಕ್ಕೆ ಮನಸ್ಸಾಗದು. ದೂರ ದಾರಿನಡೆದ ಆಯಾಸಬೇರೆ. ಹೀಗಿರುವಾಗ ಅವರನ್ನು ಸಂರಕ್ಷಿಸುವ ಭಾರವು ದೀನದಯಾಳುವಾದ ಪರಮೇಶ್ವರನಿಗೇ ಸೇರಿತು. ಇಬ್ಬರಿಗೂ ಯಾರಾದರೂ ಪರಿಚಿತರ ಮನೆಯನ್ನು ಸೇರಿ ಬದುಕುವದು ಯೋಗ್ಯವೆನಿಸ ಲಿಲ್ಲ. ಮಧುಕರಿಯಿಂದಾದರೂ ಜೀವಿಸೋಣವೆಂದರೆ ಮನಸ್ಸು ಬಾರದು. ನೌಕರಿಯಿಂದ ಬದುಕೋಣವೆಂದರೆ, ನಿರಕ್ಷರಿಗಳಿಗೆ ನೌಕರಿ ಕೊಡುವವರಾ ದರೂ ಯಾರು ? ಇನ್ನೇನು, ಉಪವಾಸವೇಗತಿಯೆಂದು ಕೆಲದಿನ್ನಗಳವರೆಗೆ ನಿರಾಹಾರದಿಂದ ಉಳಿದರು. ಅನಂತರ ದೈವಯೋಗದಿಂದ ಒಬ್ಬ ಶ್ರೀಮಂತ ಗೃಹಸ್ಥನು ಅವರನ್ನು ಕರೆದುಕೊಂಡುಹೋಗಿ ತನ್ನ ಮನೆಯಲ್ಲಿಯೇ ಇಟ್ಟು ಕೊಂಡನು. ಆದರೆ, ಅಲ್ಲಿ ಹಗಲೆಲ್ಲಾ ತುಂಬ ಕೆಲಸಮಾಡಬೇಕಾಗಿ ಬಂದು ಅತಿಶಯ ದಣಿಯಬೇಕಾಗಿದ್ದಿತು. ರಾತ್ರಿಯಲ್ಲಿ ಏನಾದರೂ ಕಲಿಯಬೇ ಕೆಂದುಕೊಂಡು ವ್ಯಾಸಂಗಮಾಡಲು ಪ್ರಾರಂಭಿಸಿದರು. ಇವರ ವಿದ್ಯೆಯು "ಶ್ರೀ ಗಣೇಶಾಯ ನಮಃ" ದಿಂದ ಪ್ರಾರಂಭವಾಯಿತು. ಕಷ್ಟಪಟ್ಟು ಯಾರಕಡೆಗಾದರೂ ಹೋಗಿ ಅವರ ಸಹಾಯದಿಂದ ಕಲಿಯುತ್ತಿದ್ದರು. ರಾತ್ರಿ ಆಯಾಸದ ಮೂಲಕ ಬಹಳವಾಗಿ ನಿದ್ದೆ ಬರುತ್ತಿದ್ದುದರಿಂದ ಮೇಲುಗಡೆಯ ಗೂಟಕ್ಕೆ ಜುಟ್ಟನ್ನು ಕಟ್ಟಿಕೊಳ್ಳುತ್ತಿದ್ದರಂತೆ! ಅಷ್ಟುಮಾಡಿ ಸ್ವಲ್ಪದಿನಗಳ ಲ್ಲಿಯೇ ವಿದ್ಯೆಯಲ್ಲಿ ಪ್ರಗತಿ ಹೊಂದಿದರು. ಈ ವಿಷಯವು ಶ್ರೀಮಂತಗೃಹಸ್ಥ ನಿಗೂ ತಿಳಿಯಿತು; ಆತನೂ ಅವರಿಗೆ ತಕ್ಕ ಸಹಾಯಮಾಡತೊಡಗಿದನು. ಕೆಲವುದಿನಗಳ ನಂತರ ಅವರಿಗೆ ಯಾವ ಕೆಲಸವನ್ನೂ ಮಾಡಗೊಡಲಿಲ್ಲ. ಇಬ್ಬರೂ ಪರೀಕ್ಷೆಗೆ ಕುಳಿತು ಯೋಗ್ಯರೀತಿಯಲ್ಲಿಯೇ ತೇರ್ಗಡೆಹೊಂದಿದರು. ಅನಂತರ ಸಣ್ಣಪುಟ್ಟ ಅಧಿಕಾರವನ್ನು ಸಂಪಾದಿಸಲು ಅಪೇಕ್ಷೆಪಟ್ಟರು. ಶ್ರೀಮಂತನ ಮಿತಿಮೀರಿದ ಪ್ರಯತ್ನದಿಂದ ಈರ್ವರಿಗೂ ನೌಕರಿ ಸಿಕ್ಕಿತು.

ಅನ್ನದಾತನಮೇಲೆ ಇನ್ನೂ ಭಾರಹಾಕದೆ, ಪ್ರತ್ಯೇಕವಾಗಿ ಉಳಿಯುವ ಇಚ್ಛೆ ಅವರಿಗಾಯಿತು. ಆದರೆ ಅದನ್ನು ಶ್ರೀಮಂತನಿಗೆ ತಿಳಿಸುವ ಬಗೆ ಹೇಗೆ? ಆತನಿಗೂ ಇವರಮೇಲೆ ಬಲು ಅಕ್ಕರೆ; ತುಂಬ ಆದರದಿಂದಲೇ ಕಾಣುತ್ತಿದ್ದನು. ಮುಂದೆ ಆತನೇ ಇವರಿಬ್ಬರ ವಿವಾಹಮಾಡಿಸಿ ಇಬ್ಬರನ್ನೂ ಪ್ರತ್ಯೇಕವಾಗಿ ಮನೆಮಾಡಿ ಇಟ್ಟುಕೊಟ್ಟನು. ಇವರು ಕೊನೆಯವರೆಗೂ ಆ ಶ್ರೀಮಂತನಲ್ಲಿ ಕೃತಜ್ಞರಾಗಿಯೇ ಇದ್ದರು; ಮೇಲ್ಮಟ್ಟದ ಸಂಸಾರ ಸಾಗಿಸಿದರು. ಕುಲ ಧರ್ಮ ಕುಲಾಚಾರಗಳಂತೆ ನಡತೆ ಪ್ರಾರಂಭವಾಯಿತು. ಶ್ರೀ ರಾಮನವಮಿ, ನವರಾತ್ರಿ, ಮುಂತಾದ ಉತ್ಸವಗಳು ಅವರ ಮನೆಗಳಲ್ಲಿ ಹೆಚ್ಚಿನಮಟ್ಟದಲ್ಲಿ ನಡೆಯುಹತ್ತಿದವು. ನೂರಿನ್ನೂರು ಜನರ ಅನ್ನ ಸಂತರ್ಪಣೆಯೂ ನಡೆಯುತ್ತಿದ್ದಿತು. ಶ್ರಾದ್ಧಪಕ್ಷಾದಿ ವಿಶೇಷ ಸಂದರ್ಭಗಳಲ್ಲಿ ನಾರಾಯಣರಾಯರು ಅಣ್ಣ ಗೋವಿಂದರಾಯರ ಮನೆಗೆ ಹೋಗುತ್ತಿದ್ದರು. ಏಕಾದಶಿಯದಿನ ಗೀತಾಪಾರಾಯಣಾದಿ ಕಾರ್ಯಕ್ರಮವು ಜರುಗುತ್ತಿತ್ತು. ದ್ವಾದಶಿಯ ದಿನ ಒಬ್ಬಿಬ್ಬರಾದರೂ ಬ್ರಾಹ್ಮಣರು ಪಂಗ್ತಿಯಲ್ಲಿ ಇಲ್ಲದೆ ಅವರು ಉಣ್ಣುತ್ತಿರಲಿಲ್ಲ. ಅವರಿಗೆ ಯೋಗ್ಯ ದಕ್ಷಿಣೆಯನ್ನು ಕೊಟ್ಟು ಕಳುಹುತ್ತಿದ್ದರು. ಹಾಗೆಯೇ ಶ್ರಾವಣಮಾಸ ಶಿವರಾತ್ರಿ ಮುಂತಾದ ಪರ್ವಕಾಲಗಳಲ್ಲಿ ವ್ರತ ವೈಕಲ್ಯಗಳನ್ನು ನಡೆಸುತ್ತಿದ್ದರು. ಹೀಗೆ ಪರಸ್ಪರರು ಪ್ರೇಮದಿಂದ ದಿವಸಗಳನ್ನು ಸಂತೋಷವಾಗಿ ತಳ್ಳಿದರು. ಆದರೆ ಕೆಲದಿನಗಳಲ್ಲಿಯೇ ಇಬ್ಬರಿಗೂ ಪತ್ನೀವಿಯೋಗವಾಯಿತು. ಗೋವಿಂದರಾಯರಿಗೆ ಮಕ್ಕಳಾಗಿರಲಿಲ್ಲ. ನಾರಾಯಣರಾಯರಿಗೆ ಮಾತ್ರ ರೇಣುಕಾ ಎಂಬ ಹುಡುಗಿಯೊಬ್ಬಳಿದ್ದಳು. ಇವರ ಮಗ ಕಮಲಾಪುರಕರ ಎಂಬವರು ಈಗ ಇವರು ಹೈದರಾಬಾದದಲ್ಲಿರುವರು.

ಅಧಿಕಾರದಲ್ಲಿದ್ದು ಗಳಿಕೆ ಬಳಿಕೆಗಳಿಗೆ ಸಾಕಾದಷ್ಟು ಉತ್ಪನ್ನವಿದ್ದುದರಿಂದ ಪುನಃ ಇಬ್ಬರೂ ವಿವಾಹಿತರಾದರು. ಆ ವೇಳೆಯಲ್ಲಿ ಇವರಿಗೆ ಸುಮಾರು ಮೂವತ್ತು–ಮೂವತ್ತೆರಡು ವರುಷಗಳು. ಯಥಾ ಪ್ರಕಾರ ಹೊಸ ಸಂಸಾರದ ಆರಂಭವಾಯಿತು. ನಾರಾಯಣರಾಯರ ದ್ವಿತೀಯ ಪತ್ನಿಯ ಹೆಸರು ಕಮಲಾಬಾಯಿಯೆಂದಿತ್ತು. ಅವರು ಪ್ರಕೃತಿಯಿಂದ ಸುದೃಢರಾಗಿ ರೂಪದಲ್ಲಿ ಸುಂದರಿಯಾಗಿದ್ದರು. ಇವರೇ ನಮ್ಮ ಆದರ್ಶಚರಿತ್ರ ಪುರುಷನ ಪಾವನ ಮಾತೆಯವರು! ಒಮ್ಮೆ ಶ್ರೀ ಸ್ವಾಮಿಜಿಯವರು ಹರಿಶ್ಚಂದ್ರನ ಪತ್ನಿ—

ತಾರಾಮತಿಯು ಭಾವಚಿತ್ರವನ್ನು ನೋಡಿ ತಮ್ಮ ತಾಯಿಯವರು ಹೀಗೇ ಇದ್ದರೆಂದು ಉದ್ಗಾರ ತೆಗೆದಿದ್ದರು.

ಸ್ವಲ್ಪ ಕಾಲದಲ್ಲಿಯೇ ನಾರಾಯಣರಾಯರಿಗೆ ತ್ರಯಂಬಕನೆಂಬ ಒಬ್ಬ ಪುತ್ರನು ಜನಿಸಿದನು. ಆತನ ನಂತರ ಅವರಿಗೆ ಗೋವಿಂದನೆಂಬ ಇನ್ನೊಬ್ಬ ಮಗನು ಹುಟ್ಟಿ ತನ್ನ ಮೂರನೆಯ ವಯಸ್ಸಿನಲ್ಲಿಯೇ ತೀರಿ ಕೊಂಡನು. ದಂಪತಿಗಳಿಗೆ ತುಂಬಾ ದುಃಖವಾಯಿತು. ಕೊನೆಗೆ ಅವನ ನಮ್ಮ ಋಣಾನುಬಂಧವಿಷ್ಟೇ ಇತ್ತು ಎಂದುಕೊಂಡು ಪರಮೇಶ್ವರನ ಮೇಲೆ ಭಾರಹಾಕಿ ಪ್ರಪಂಚವನ್ನು ಮುಂದುವರಿಸಿದರು. ಆ ಮುಂದೆ ಗೋದಾವರಿ ಯೆಂಬ ಇನ್ನೊಬ್ಬಳು ಹೆಣ್ಣುಮಗಳು ಜನಿಸಿದಳು. ತ್ರಯಂಬಕನಿಗೆ ಉಪನಯನ ಸಂಸ್ಕಾರವು ಆಗಿ ಐದನೆಯ ತರಗತಿಯಲ್ಲಿ ಓದುತ್ತಿದ್ದನು. ಗೋದಾವರಿಗೆ ಎಂಟು ವರ್ಷ ತುಂಬಲು ಅವಳಿಗೆ ವಿಧಿಪೂರ್ವಕವಾಗಿ ವಿವಾಹ ಸಂಸ್ಕಾರವನ್ನು ನೆರವೇರಿಸಿದರು. ಗೋವಿಂದರಾಯರಿಗೆ ಮಾತ್ರ ಸಂತಾನವಾಗಲೇ ಇಲ್ಲ. ಕಮಲಾಬಾಯಿಯವರ ತಾಯಿಯ ಹೆಸರು ಬಯಾಬಾಯಿ. ಅವರ ತವರೂರು ಮಡಿಯಾಳ. ಇದು ಗುಲಬುರ್ಗಿಯ ಬಳಿಯಿರುವದು. ಬಯಾಬಾಯಿಯು ಪತಿವಿಯೋಗವಾದಂದಿನಿಂದ ತವರು ಮನೆಯಲ್ಲಿಯೇ ಇರುತ್ತಿದ್ದರು. ಬಯಾಬಾಯಿಯು ಇನ್ನೊಬ್ಬ ಹುಡುಗಿ ಯನ್ನು ಚಿಂಚೊಳ್ಳಿಯ ದೇಸಾಯರ ಮನೆಗೆ ಕೊಟ್ಟಿದ್ದರು. ಈ ಊರು ಗಾಣಗಾಪುರದಿಂದ ಹತ್ತು ಹನ್ನೆರಡು ಮೈಲು ದೂರದಲ್ಲಿರುವದು. ಇವ ರೆಲ್ಲರೂ ವೈಷ್ಣವ ಸಂಪ್ರದಾಯದವರು. ನೈಜಾಮ ಪ್ರಾಂತದಲ್ಲಿ ಬಾಸರಾ ಎಂಬ ಸರಸ್ವತೀಕ್ಷೇತ್ರವು ಪ್ರಸಿದ್ಧವಿದೆ. ಈ ಊರಿಗೆ ರೇಲ್ವೆ ನಿಲ್ದಾಣವುಂಟು. ಅಲ್ಲಿಂದ೧೦-೧೨ ಮೈಲು ದೂರದ ಚಿಂತಕುಂಟಿಯ ಭುಜಂಗರಾವ್ ದೇಸಾಯಿ ಯವರಿಗೆ ನಾರಾಯಣರಾಯರ ಮಗಳು ಗೋದಾವರಿಯನ್ನು ಕೊಟ್ಟಿದ್ದರು.

ನಾರಾಯಣರಾಯರೂ ಗೋವಿಂದ ರಾಯರೂ ಯಾವ ಕೊರತೆಯೂ ಇಲ್ಲದೆ ಸಂಸಾರ ಸಾಗಿಸಿದ್ದರು. ಇವರು ಕೊನೆಯವರೆಗೂ ದೇಗಲೂರಿಗೆ ಹೋಗಲೇ ಇಲ್ಲ. ಆ ಭಾಗದ ಪರಿಚಿತರನೇಕರು ಆಗಿಂದಾಗ ಹೈದರಾಬಾದಿಗೆ ಬರುತ್ತಿದ್ದರು. ದೇಗಲೂರಿನ ಮನೆಯಲ್ಲಿ ಬಹಳ ಅವನತಿಯಾಗಿದ್ದಿತು. ಅನೇಕರು ಮೃತಪಟ್ಟಿದ್ದರು. ಈ ಕುರಿತು ನಾರಾಯಣರಾಯರು ತಮ್ಮ

ಪುರೋಹಿತರನ್ನು ಕೇಳಿದಾಗ ಅವರು ಸರ್ಪಶಾಪದ ಪೂರ್ವವೃತ್ತಾಂತವನ್ನು ತಿಳಿಸಿದರು. ಅದನ್ನು ಕೇಳಿ ಭಯಭೀತರಾದ ನಾರಾಯಣರಾಯರು ತಮ್ಮ ಇಬ್ಬರೂ ಮಕ್ಕಳ ಜನ್ಮಪತ್ರಿಕೆಯನ್ನು ತೋರಿಸಿದರು. ಪುರೋಹಿತರು ದೊಡ್ಡ ವಿದ್ವಾಂಸರಾಗಿದ್ದರು. ಆ ಜನ್ಮಕುಂಡಲಿಗಳನ್ನು ನೋಡಿ ಅವರ ಇಬ್ಬರು ಮಕ್ಕಳೂ ಅಲ್ಪಾಯುಷಿಗಳೆಂದು ಹೇಳಿದರು. ನಂತರ ಕಮಲಾಬಾಯಿ ಯವರ ಜಾತಕ ವಿಮರ್ಶಿಸಿ, "ನಿಮ್ಮ ಉದರದಲ್ಲಿ ಒಬ್ಬ ಮಹಾಪುರುಷನು ಹುಟ್ಟಿ ಪೂರ್ವಜರ ಉದ್ಧಾರಮಾಡುತ್ತಾನೆ. ಅದಕ್ಕೋಸ್ಕರ ನೀವಿಬ್ಬರೂ ಗಾಣಗಾಪುರಕ್ಷೇತ್ರಕ್ಕೆ ಹೋಗಿ ತಪಸ್ಸನ್ನಾಚರಿಸಿರಿ. ಆತನಿಂದಲೆ ನಿಮ್ಮ ಕುಲ ಪಾವನವಾಗುವದು. ಶ್ರೀದತ್ತನ ಅನುಗ್ರಹವಾಗುವವರೆಗೂ ಹಿಂದಿರುಗ ಬೇಡಿರಿ. ಒಂದೆರಡು ತಿಂಗಳಲ್ಲಿಯೇ ನಿಮ್ಮ ಇಚ್ಛೆ ಪೂರ್ಣವಾಗುವದು" ಎಂದು ಹೇಳಿದರು.

ಪುರೋಹಿತರ ಮಾತಿನಿಂದ ನಾರಾಯಣರಾಯರಿಗೆ ಆನಂದವಾಯಿತು. ಒಂದು ವೇಳೆ ಪುತ್ರನಾಗುವದಾದರೆ ದೀರ್ಘಾಯುಷಿಯಾಗಿದ್ದು, ಯಾರ ಪ್ರಭಾವವು ಮೂಲೋಕವನ್ನು ಭೇದಿಸಿ ಗಣನಾತೀತವಾದ ಅದ್ಭುತ ಶಕ್ತಿ ಯಿಂದ ಸಚೇತನಗೊಳಿಸುವದೋ ಅಂತಹ ಸುಪುತ್ರನನ್ನು ಪಡೆದರೆ ಮಾತ್ರ ಸಾರ್ಥಕವು; ಇಲ್ಲದಿದ್ದರೆ ಸಾಮಾನ್ಯಪುತ್ರನಿಂದ ಪ್ರಯೋಜನವೇನು? ಎಂದುಕೊಂಡು ಪತಿಪತ್ನಿಯರಿಬ್ಬರೂ ಶುಭದಿನದಲ್ಲಿ ಗಾಣಗಾಪುರವನ್ನು ಸೇರಿ ಅನುಷ್ಠಾನವನ್ನು ಪ್ರಾರಂಭಿಸಿದರು. ಕಟುತರ ನಿಮಗಳನ್ನು ಪಾಲಿಸುತ್ತ ವ್ರತೋಪವಾಸಾದಿಗಳನ್ನು ನಡೆಯಿಸಿ ನಿಷ್ಠಾಪೂರ್ವಕವಾಗಿ ತಪಸ್ಸನ್ನಾಚರಿಸಿದರು. ಅವರ ಆ ನಿಷ್ಠೆ, ಆ ಭಕ್ತಿ ಉತ್ಸಾಹಗಳಿಂದ ಕೂಡಿದ ಅನನ್ಯ ಆಸಕ್ತಿ, ಮನೋನಿಗ್ರಹಗಳಿಗೆ ಮೆಚ್ಚಿ ಕೆಲವೇ ದಿನಗಳಲ್ಲಿ ಶ್ರೀ ದತ್ತಾತ್ರೇಯನು ಪ್ರಸನ್ನನಾದನು. ಹಾಗೂ ತನ್ನ ವರದ ಹಸ್ತದಿಂದ ಪ್ರಸಾದವೆಂದು ಒಂದು ತೆಂಗಿನಕಾಯಿಯನ್ನು ಕೊಟ್ಟು "ನಿಮ್ಮ ಇಚ್ಛೆಯು ಪೂರ್ಣ ವಾಗಲಿ. ಈ ಫಲವನ್ನು ನೀವಿಬ್ಬರೂ ಸೇವಿಸಿರಿ" ಎಂದು ಸುಮಧುರ ವಾಣಿಯಿಂದ ಸಂತೈಸಿದನು. ಆಗ ದಂಪತಿಗಳ ಆನಂದಕ್ಕೆ ಪಾರವಿಲ್ಲದಾ ಯಿತು. ಇಬ್ಬರೂ ಪಾರಣೆ ಮುಗಿಸಿ ಪ್ರಸಾದ ಸ್ವೀಕರಿಸಿದರು.

ದತ್ತಾತ್ರೇಯ ದೇವಸ್ಥಾನ (ಕ್ಷೇತ್ರ)

ಯದಾ ಯದಾ ಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ - ಶ್ರೀ ಭಗವದ್ಗೀತಾ

೩. ಜನ್ಮ ಮತ್ತು ಬಾಲ್ಯ

ಸ್ವಲ್ಪಕಾಲದಲ್ಲಿಯೇ ಕಮಲಾಬಾಯಿಯವರು ಗರ್ಭವತಿಯರಾದರು. ಅವರು ವೈರಾಗ್ಯವಂತರಾದ ಜನರ ಜತೆಯಲ್ಲಿಯೇ ಇರುತ್ತ ಜ್ಞಾನದ ವಿಷಯದಲ್ಲಿ ತುಂಬಾ ಶ್ರದ್ಧೆಯನ್ನು ವಹಿಸಿ ಮಾತನಾಡುತ್ತಿದ್ದರು. ಧರ್ಮಗ್ಲಾನಿಯ ವಿಚಾರವನ್ನೆತ್ತಿ ಅದರ ಪುನರುದ್ಧಾರವಾಗಲೆಂದು ಚಿಂತನೆಮಾಡುತ್ತಿದ್ದರು. ಹಾಗು ಲೋಕೋದ್ಧಾರಕನಾದ ಪುತ್ರನು ತಮ್ಮಲ್ಲುದಯಿಸುವನೆಂದು ಭಾವಿಸಿ ದತ್ತನ ಗುಣಗಾನಮಾಡುತ್ತ ಆ ಶುಭದಿನವನ್ನು ನಿರೀಕ್ಷಿಸುತ್ತಿದ್ದರು.

ತಾಯಿ ಬಯಾಬಾಯಿಯವರು ಕಮಲಾಬಾಯಿಯವರನ್ನು ಚಿಂಚೋಳಿಗೆ ಕರೆದುಕೊಂಡು ಹೋದರು. ನವ ಮಾಸವು ತುಂಬಿತು. ಶುಭಶಕುನಗಳು ತೋರಿದವು. ನಾಲ್ಕು ಕಡೆಗೆ ವಿಲಕ್ಷಣಶಾಂತಿಯು ಪಸರಿಸಿತು. ಅಂದು ಶ್ರೀ ದತ್ತಜಯಂತಿಯ ಉತ್ಸವ. ಅವರು ವಿಜೃಂಭಣೆಯಿಂದ ದತ್ತಸಮಾರಂಭದಲ್ಲಿ ಭಾಗವಹಿಸಿದರು. ಅಂದೇ ಶ್ರೀ ದತ್ತನ ಪಲ್ಲಕ್ಕಿಯನ್ನು ಹೊರಡಿಸುವ ಸಮಯದಲ್ಲಿ ಕಮಲಾಬಾಯಿಯವರು ಪ್ರಸೂತರಾದರು; ಈ ಶುಭಮುಹೂರ್ತದಲ್ಲಿ ಕಮಲಾಬಾಯಿಯವರ ಪುತ್ರ ರತ್ನಸ್ವರೂಪದಲ್ಲಿ ನಮ್ಮ ಶ್ರೀ ಸ್ವಾಮಿಜಿಯವರು ದೇಹಧಾರಿಗಳಾಗಿ ಜನ್ಮತಾಳಿದರು! ಆ ತೇಜಸ್ವಿಯಾದ ಬಾಲಕನನ್ನು ನೋಡಿದವರಿಗೆಲ್ಲ ಉತ್ಸಾಹ. ಶ್ರೀ ದತ್ತನ ಅನುಗ್ರಹವನ್ನು ಸ್ಮರಿಸಿ ಸಂತೋಷಭರಿತರಾಗಿ ಯೋಗ್ಯರೀತಿಯಲ್ಲಿ ಎಲ್ಲರೂ ಉತ್ಸವವನ್ನಾಚರಿಸಿದರು. ಶ್ರೀ ದತ್ತನ ಉತ್ಸವದ ದಿನ; ಅದರಲ್ಲೂ ಸುಪುತ್ರನ ಜನನ. ಏನು ಕೇಳಬೇಕು? ಹನ್ನೆರಡುದಿನಗಳು ಕಳೆದವು. ವಿಚಾರಪೂರ್ವಕವಾಗಿ 'ಶ್ರೀಧರ' ಎಂದು ಹೆಸರಿಟ್ಟರು. ತನ್ನ ಮಗನು ಶ್ರೀದತ್ತನ ಪ್ರಸಾದವೇ ಆದ್ದರಿಂದ ಕಮಲಾಬಾಯಿಯವರಿಗೂ ತುಂಬ ಅಭಿಮಾನ. ಅವರು ಶ್ರೀಧರನನ್ನು 'ರಾಜಾ' ಎಂದು ಸಂಬೋಧಿಸುತ್ತಿದ್ದರು. ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಿರುವ ಶ್ರೀಧರನನ್ನು ಬಿಟ್ಟು ಒಂದು ಕ್ಷಣವೂ ಇರುತ್ತಿರಲಿಲ್ಲ. ಈ ಸುಕುಮಾರನಿಗಾಗಿ ಅನೇಕಕಡೆಗೆ ಹರಕೆ ಹಾಕಿಕೊಂಡಿದ್ದರು. ಶ್ರೀ ವೆಂಕಟೇಶನ ಸನ್ನಿಧಿಯಲ್ಲಿ ಉಪನಯನ ಮಾಡಿಸಿಕೊಳ್ಳುವೆನೆಂದು ಹರಕೆ ಹೊತ್ತಿದ್ದರು! ಕುಲದೇವತೆ ಶ್ರೀ ದೇವಿಯಲ್ಲಿಯೂ ಈ ತರಹದ ಹರಕೆಯೊಂದು ಇದ್ದಿತು.

ಬಹುದಿನಗಳಿಂದ ಇಚ್ಛಿಸಿದ ಅಮೋಘನಿಧಿಯೊಂದು ಸಿಕ್ಕಿದರೆ ಉಂಟಾಗಬಹುದಾದ ಉಲ್ಹಾಸದೊಡನೆ ಮೂರು ವರ್ಷಗಳು ತೇಲಿಹೋದುವು. ಬಾಲಕ ಶ್ರೀಧರನ ನಗುಮೊಗವು ಆಕರ್ಷಣೀಯವಾಗಿದ್ದಿತು. ಅದನ್ನು ನೋಡಿದರೆ ದುಃಖದೌರ್ಮನಸ್ಯಗಳೆಲ್ಲ ಹಿಂಗಿ ಮನಸ್ಸು ನಿರ್ಮಲವಾಗುತ್ತಿದ್ದಿತು; ಪ್ರಶಾಂತವಾಗುತ್ತಿದ್ದಿತು. ನಾರಾಯಣರಾಯರು ತಮ್ಮ ಕೋಮಲಕುಮಾರನ ಪ್ರಶಾಂತವದನವನ್ನು ನೋಡಿ ನೋಡಿ ಜನ್ಮಸಾಫಲ್ಯವಾಯಿತೆಂದು ಭಾವಿಸುತ್ತಿದ್ದರು. ಅನಂತರ ಅತ್ಯಲ್ಪ ಕಾಲದಲ್ಲಿಯೇ ನಾರಾಯಣರಾಯರು ದೇಹಬಿಟ್ಟರು. ಮಗುವಿನ ಮುಂದಿನ ಆಟಪಾಟ ವಿನೋದ ವಿಲಾಸಗಳನ್ನು ನೋಡಲು ಉಳಿಯಲಿಲ್ಲ. ದೈವಲೀಲೆ!

ಕೆಲವು ದಿನಗಳ ನಂತರ ಶ್ರೀಧರನಿಗೆ ದೇವಿ (ವೈಲಿ) ಬಂದಿತು. ಅದು ಸರ್ವಾಂಗವನ್ನೂ ವ್ಯಾಪಿಸಿದ್ದುದರಿಂದ ವೇದನೆ ಬಹಳವಾಗುತ್ತಿತ್ತು. ಕಮಲಾಬಾಯಿಯವರಿಗೆ ಪತಿವಿಯೋಗದ ದುಃಖವೊಂದು ಕಡೆ; ಕುಲದ ಉದ್ಧಾರಕನೆಂದು ನಂಬಿದ್ದ ಮಗನ ಚಿಂತೆಯಿನ್ನೊಂದು ಕಡೆ. ಇದರಿಂದ ದಿಙ್ಮೂಢರಾದರು. ಗಾಣಗಾಪುರ ತಿರುಪತಿ ಕೊಲ್ಲಾಪುರದ ದೇವಿ ಮುಂತಾದ ಕಡೆಗಳಲ್ಲೆಲ್ಲ ಮಗನಿಗೋಸ್ಕರ ಹರಕೆ ಹೊತ್ತರು. ನಂತರ ದೇವಿ ಗುಣವಾದರೂ ಅದರ ಕಲೆಗಳು ಮಾತ್ರ ಹಾಗೇ ಉಳಿದವು. ಆಗ ತ್ರಯಂಬಕನಿಗೆ ಹದಿನೈದನೆಯ ವಯಸ್ಸು. ತಂದೆಯ ಆಧಾರವಿಲ್ಲದ ಕಾರಣ ಬಹಳ ವ್ಯಥೆಪಟ್ಟನು. ಆದಾಗ್ಯೂ ಧೈರ್ಯತಾಳಿಕೊಂಡು ತಾಯಿಗೂ ಸಮಾಧಾನ ಹೇಳಿದನು. ಸಂಸಾರದ ಹೊಣೆಗಾರಿಕೆಯು ತನ್ನ ಮೇಲೆ ಬಿದ್ದಿರುವದೆಂಬದನ್ನು ಆತನು ಅರಿತಿದ್ದನು. ಸಾಕಷ್ಟು ವಿದ್ಯಾಭ್ಯಾಸವಾದುದರಿಂದ ಮುಂದಿನ ವಿದ್ಯಾಭ್ಯಾಸವನ್ನು ನಿಲ್ಲಿಸಿ, ನೌಕರಿಯನ್ನು ಹುಡುಕಲಾರಂಭಿಸಿದನು. ಹೇಗೋ ೩೦ ರೂಪಾಯಿ ಸಂಬಳದ ಒಂದು ನೌಕರಿ ಸಿಕ್ಕಿತು.

ಶ್ರೀಧರನು ತಾಯಿಗೆ ಪತಿವಿಯೋಗದ ಸ್ಮರಣೆಯಿಂದ ದುಃಖವಾಗಲಾಗದೆಂದು ಅವರ ಮುಖದಲ್ಲಿ ವಿಷಾದಮೂಡಿದಾಗಲೆಲ್ಲಾ ನಾನಾಲೀಲೆ ವಿನೋದಗಳಿಂದ ಅವರನ್ನು ಸಮಾಧಾನಗೊಳಿಸುತ್ತಿದ್ದನು. ಅಡಗಿಕೊಳ್ಳುವದು, ತಪ್ಪಿಸಿಕೊಂಡು ಓಡುವದು, ಓಡಿಬಂದು ಮುದ್ದಿಡುವದು, ಕೀರ್ತನೆ

ಮಾಡುವವರಂತೆ ನಟಿಸುವದು ಮುಂತಾದವುಗಳಿಂದ ತಾಯಿಯವರನ್ನು ಹರುಷಗೊಳಿಸುತ್ತಿದ್ದನು. ಬಾಲಕ ಶ್ರೀಧರನು—

ಘಟಿಕಾ ಗೇಲೀ ಪಳೇ ಗೇಲೀ ತಾಸ ವಾಜೇ ಝುಣಾಣಾ।
ಆಯುಷ್ಯಾಚಾ ನಾಶಹೋತೋ 'ರಾಮ' ಕಾರೇ ಮ್ಹಣಾನಾ?॥

ಎಂಬ ಹಾಡನ್ನು ಯಾವಾಗಲೂ ಹಾಡುತ್ತಿದ್ದನು. ಗಳಿಗೆ ಪಳೆಗಳು ಕಳೆದು ಹೋದವು. ಘಂಟೆಯು ಝಣ ಝಣ ಬಾರಿಸಿತು. ವ್ಯರ್ಥ ಆಯುಷ್ಯದ ನಾಶವಾಗುತ್ತಿದೆ. ಏಕೆ 'ರಾಮಾ' ಎಂದು ಉಚ್ಚರಿಸುವದಿಲ್ಲ? ಎಂದು ಈ ಪದ್ಯದ ಅರ್ಥವು. ಅಲ್ಲದೆ—

ನಕಳತಾ ಪದ ಅಗ್ನಿವರೀ ಪಡೇ। ನ ಕರಿ ದಾಹ ಅಸೇ ಕಧೀ ನಾ ಘಡೇ।
ಅಮಿತ ನಾಮುವದೋ ಭಲತ್ಯಾಮಿಸೇ। ಸಕಲಪಾತಕ ಭಸ್ಮಕರೀತಸೆ॥
ಕಾಳಘಾರ ಫಿರಟ್ಯಾ ಬಹು ಘಾಲೀ। ಮಾನವಾ ತುಜ ಕಶೀ ನಿಜ ಆಲೀ॥
ಜಾಗಜಾಗಸ್ವರೂಪೀ ಲವಲಾಹೇ। ಜಾತಸೇವಯ ಅಮೋಲಕ ಪಾಹೇ॥
ಮನಹೇ ವೋಡಾಳ ಗರು ಪರಧನ ಪರಕಾಮಿನೀಕಡೆ ಧಾವೇ॥
ಯಾಸ್ತವ ವಿವೇಕಪಾಶೇ ಕಂಠೀ ವೈರಾಗ್ಯಕಾಷ್ಠ ಬಾಂಧಾವೇ॥

ಈ ಪದವನ್ನು ಬಾಲಕ ಶ್ರೀಧರನು ಕೀರ್ತನಕಾರರಂತೆ ಹಾವಭಾವ ಮಾಡಿ ಹೇಳುತ್ತಿದ್ದನು.

"ಬೆಂಕಿಯೆಂದು ತಿಳಿಯದೆ ಕಾಲಿಟ್ಟರೂ ಅದು ಸುಟ್ಟೀಸುಡುವಂತೆ ಭಗವಂತನ ನಾಮಸ್ಮರಣ ಬಲದಿಂದ ಪಾತಕನಾಶವಾಗುವದು. ಮೃತ್ಯುವೆಂಬ ರಹಣದ್ದು ತನ್ನ ಮೇಲೆ ಅತಿರಭಸದಿಂದ ತಿರುಗುತ್ತಿದ್ದರೂ ಮನುಷ್ಯನು ಇಹಲೋಕದ ಬಾಳನ್ನೇ ಬಯಸುವನು. ವ್ಯರ್ಥವಾಗಿ ವಯಸ್ಸು ಕಳೆಯುತ್ತಿರುವಾಗ ನಿಜಸ್ವರೂಪದ ಅರಿವಿನಿಂದ ಜಾಗೃತನಾಗುವದು ಒಳ್ಳೆಯದು. ಮನವೆಂಬ ಕರುವು ಪರಧನ ಪರನಾರಿಯರ ಕಡೆಗೆ ಧಾವಿಸುತ್ತಿರುವದು. ಅದಕ್ಕೆ ವೈರಾಗ್ಯವೆಂಬ ಗುದ್ದಿಯನ್ನು ವಿವೇಕವೆಂಬ ಪಾಶದಿಂದ ಕಟ್ಟಬೇಕು." ಈ ಮುಂತಾದ ಅನೇಕ ಪದ್ಯಗಳನ್ನು ಕೀರ್ತನಕಾರರಂತೆ ಅಭಿನಯದೊಡನೆ ಹಾಡುತ್ತಿದ್ದನು. ಮತ್ತು ಕೀರ್ತನೆಯಲ್ಲಿ ತಾನು ರಾಮನೆಂಬಂತೆ ಭಾವಿಸಿ, ರಾವಣನ ಮೇಲೆ ಯುದ್ಧಮಾಡುವವನಂತೆ ಆವೇಶದಿಂದ ಮುನ್ನುಗ್ಗುತ್ತಿದ್ದನು. ಕಮಲಾಬಾಯಿಯವರು ಮಗನ ಆ ಆವೇಶವನ್ನು

ಗುದ್ದಿ = ಗುಬಿಗೆ
ಮರದ ತುಂಡು

ನೋಡಿ ಓಡಿಬಂದು ವೈದಡವುತ್ತಿದ್ದರು. “ ವಾಘಿಣೀಗ ಮಜಬಾಳಾತೇ ”* ಎಂಬ ಶಿವಾಜಿಯು ಹೇಳುತ್ತಿದ್ದ ಹಾಡನ್ನು ಗಾನಮಾಡುತ್ತ ಮಗನನ್ನು ನಿದ್ದೆಮಾಡಿಸುತ್ತಿದ್ದರು.

ಹೈದರಾಬಾದ ಪ್ರಾಂತದಲ್ಲಿ ಶ್ರೀ ನಾರಾಯಣಮಹಾರಾಜರೆಂಬ ಸಾಧು ಸತ್ಪುರುಷರ ಮಠವಿದೆ. ಅವರು ಸಜ್ಜನಗಡದಲ್ಲಿ ಹನ್ನೆರಡುವರ್ಷ ತಪಸ್ಸನ್ನಾಚರಿಸಿದ್ದರು. ಪ್ರತಿವರ್ಷವೂ ಶ್ರೀ ದಾಸನವಮಿಯ ವೇಳೆಯಲ್ಲಿ ಅವರು ಭಕ್ತವೃಂದದೊಡನೆ ಅಲ್ಲಿ ನಡೆಯುವ ಉತ್ಸವಕ್ಕೆ ಬರುತ್ತಿದ್ದರು. ಹೈದರಾಬಾದ ಪ್ರಾಂತದಲ್ಲಿ ಅವರ ಖ್ಯಾತಿ ಬಹಳವಾಗಿತ್ತು. ಅವರ ಸ್ವಭಾವವು ಬಹಳ ಶಾಂತವಾಗಿದ್ದಿತು. ಒಂದುಸಲ ಗಡಕ್ಕೆ ಹೋಗುವಾಗ ಮಾಹುಲಿ ಎಂಬ ಊರಿನಲ್ಲಿ ಓರ್ವ ದುಷ್ಟನು ಅವರ ಮೇಲೆ ಕಾಲಿವೆಯ ಕೊಳೆಯ ನೀರನ್ನು ಎರಚಿದನು. ಆದರೂ ಅವರ ಶಾಂತಿ ಅಚ್ಚಳಿಯಲಿಲ್ಲ. ಕೋಪಿಸಿಕೊಂಡು ಹೊಡೆಯಲು ಹೋದ ತನ್ನ ಭಕ್ತರನ್ನು ಆಚೆಗೆ ತಳ್ಳಿ “ ಈ ಕೊಳೆಗಿಂತಲೂ ನಮ್ಮ ದೇಹದಲ್ಲಿ ಹೆಚ್ಚಿನ ಕಲ್ಮಷ ತುಂಬಿರುವದು. ಕಾರಣ ಈ ದೇಹದ ವ್ಯೋಹ ಹಿಡಿಯುವದು ಯುಕ್ತವಲ್ಲ.” ಎಂದು ಭಕ್ತರನ್ನು ಸಮಾಧಾನ ಪಡಿಸಿದರು. ಆಗ ಆ ದುಷ್ಟನು ತನ್ನ ತಪ್ಪನ್ನು ತಿಳಿದು ಅವರ ಕ್ಷಮೆ ಬೇಡಿದನು. ನಮ್ಮ ಶ್ರೀಧರನ ದೂರ ಸಂಬಂಧದ ದೊಡ್ಡಮ್ಮ ತ್ರಿವೇಣೀಬಾಯಿಯೆಂಬವರು ಈ ಮಠದವರಿಂದ ಅನುಗ್ರಹಪಡೆದಿದ್ದರು. ಇವರ ಕುಟುಂಬದಲ್ಲಿ ೨-೩ ಮನೆಗಳವರು ದೇಗಲೂರನ್ನು ಬಿಟ್ಟು ಹೈದರಾಬಾದಿನಲ್ಲಿಯೇ ಬಂದು ಉಳಿದಿದ್ದರು. ಈಗ ಈ ಕುಟುಂಬದ ಪೈಕಿ ತ್ರಿವೇಣೀಬಾಯಿಯವರು ಮಾತ್ರ ರೇಣುಕಾಬಾಯಿಯವರಲ್ಲಿ, ಅಂದರೆ ದತ್ತಾತ್ರೇಯ ಕುಮಲಾಪೂರಕರರಲ್ಲಿ ಉಳಿದಿರುವರು. ಇವರ ವಯಸ್ಸುಸುಮಾರು ೭೫ವರ್ಷ. ಇವರಿಗೆ ನಾರಾಯಣ ಮಹಾ

*ಒಂದು ದಿವಸ ಶ್ರೀ ಸಮರ್ಥ ರಾಮದಾಸ ಸ್ವಾಮಿಯವರು ಬೇನೆಬಿದ್ದಾಗ ತಮ್ಮ ಶಿಷ್ಯರನ್ನು ಪರೀಕ್ಷಿಸಲೋಸುಗ ಹುಲಿಯ ಹಾಲನ್ನು ತಂದರೆ ತನ್ನ ಕಾಯಿಲೆ ಗುಣವಾಗುವದೆಂದು ಹೇಳಿದ ಮೇರೆಗೆ ಶಿವಾಜಿಯು ಹುಲಿಯನ್ನು ಹುಡುಕಿಕೊಂಡು ಹೊರಟನು. ಆಗ ಸ್ತನಭರಿತವಾದ ಹುಲಿಯೊಂದು ಸಿಗುವದು. ಆಗ “ ವಾಘಿಣೀಗ ಮಜಬಾಳಾತೇ ” ಎಂಬ ಹಾಡನ್ನು ಹಾಡಿ ಹುಲಿಯು ಹಾಲನ್ನು ತಂದು ಶಿವಾಜಿಯು ಗುರುವಿಗೆ ಸಮರ್ಪಿಸಿದನಂತೆ.

ರಾಜರ ಹೆಚ್ಚಿನ ಪರಿಚಯವಿದ್ದುದರಿಂದ ಕಮಲಾಬಾಯಿಯವರು ಶ್ರೀಧರನನ್ನೊಡಗೊಂಡು ಆಗಾಗ ಅಲ್ಲಿಗೆ ಹೋಗಿಬರುತ್ತಿದ್ದರು. ಅಲ್ಲಿಯ ಶುದ್ಧ ಭಕ್ತಿ ಮಯವಾದ ವಾತಾವರಣದ ಪರಿಣಾಮವು ಬಾಲಕ ಶ್ರೀಧರನ ಅಂತಃಕರಣದ ಮೇಲೆ ಆಗದೆ ಉಳಿಯಲಿಲ್ಲ.

ಈ ಮಠದಲ್ಲಿ ಶ್ರೀ ಸಮರ್ಥರ ಒಂದು ತೈಲಚಿತ್ರವುಂಟು. ಅದು ಶ್ರೀಧರನನ್ನು ಆಕರ್ಷಿಸಿತು. ಅವನು ಅನೇಕ ಘಂಟೆಗಳವರೆಗೆ ಅದನ್ನೇ ನೋಡುತ್ತ ಏಕಾಗ್ರಚಿತ್ತದಿಂದ ನಾಮಸ್ಮರಣ ಮಾಡುತ್ತಿದ್ದನು. ತನ್ನ ಮನೆಯವರು ಜಪಕ್ಕೆ ತುಳಸೀಮಾಲೆಯನ್ನು ಉಪಯೋಗಿಸುತ್ತಿದ್ದುದನ್ನು ಕಂಡು ಬಾಲಕ ಶ್ರೀಧರನೂ ಕೂಡ ಒಂದು ತುಳಸೀಮಾಲೆಯನ್ನು ದೊರಕಿಸಿಕೊಂಡನು. ಈತನಿಗೆ ರಾಮನಾಮದಮೇಲೆ ವಿಶ್ವಾಸ ಬಹಳ. ತಾನೂ ಜಪಮಾಡಲು ಪ್ರಾರಂಭಿಸಿದನು. ರಾಮನವಮಿ ಮುಂತಾದ ಉತ್ಸವಗಳಲ್ಲಿ ಈತನದೇ ಮುಖ್ಯ ಕಾರ್ಯಭಾಗ. ರಾಮಾಯಣಾದಿ ಪುರಾಣಗಳಲ್ಲಿ ಇವನಿಗೆ ಬಲು-ಆಸಕ್ತಿ.

ಯಾರಾದರೂ ರಾಮನಿಗೆ ಅಥವಾ ಧರ್ಮಕ್ಕೆ ಅಪಮಾನಕರವಾದ ಮಾತನಾಡಿದರೆ ಶ್ರೀಧರನು ಸರ್ವಥಾ ಸಹಿಸುತ್ತಿರಲಿಲ್ಲ. ಕೂಡಲೇ ಪ್ರತಿವಾದವನ್ನು ಹೂಡುತ್ತಿದ್ದನು. ಕೇಳಿದ ಪ್ರಶ್ನೆಗಳಿಗೆಲ್ಲ ಶಾಂತವಾಗಿ ಸಮರ್ಪಕ ಉತ್ತರಕೊಡುತ್ತಿದ್ದನು. ಅವರು ಆತನನ್ನು ರೇಗಿಸುವುದಕ್ಕಾಗಿ ತೀರ ವಿತಂಡವಾದ ಹೂಡಿದರೆ "ನೀವು ಭಕ್ತಿಯಿಂದ ರಾಮನ ನಾಮಸ್ಮರಣ ಮಾಡಿದರೆ ಎಲ್ಲವೂ ತಿಳಿಯುವದು. ಆದರೆ ಆಗ್ರಹದಿಂದ ದೇವ-ಧರ್ಮಗಳ ನಿಂದಕರಾದರೆ ದುಷ್ಟ ರಾಕ್ಷಸರಾಗುವಿರಿ" ಎಂದು ಆ ಸ್ಥಳವನ್ನು ಬಿಟ್ಟು ಹೋಗಿಬಿಡುತ್ತಿದ್ದನು. ಹಾಗು ಏಕಾಂತದಲ್ಲಿ ಹೋಗಿ ಕುಳಿತು ಅವರಿಗೆ ಸದ್ಬುದ್ಧಿಯನ್ನು ಕೊಡು, ಎಂದು ಶ್ರೀರಾಮನನ್ನು ಪ್ರಾರ್ಥಿಸುತ್ತಿದ್ದನು.

ಒಮ್ಮೆ ಹೈದರಾಬಾದಿನಲ್ಲಿ ಪ್ಲೇಗು ಬಂದುದರಿಂದ ಊರಿನವರೆಲ್ಲರೂ ಊರಹೊರಗೆ ದೂರ ಹೋಗಿ ಡೇರೆಗಳನ್ನು ಕಟ್ಟಿಕೊಂಡು ವಾಸಮಾಡಹತ್ತಿದರು. ಅಲ್ಲಿ ಶ್ರೀಧರನು ಪ್ರತಿದಿನವೂ ಒಂದು ಆಕಳಕರುವನ್ನು ತಂದು ಡೇರೆಯ ಗೂಟಕ್ಕೆ ಕಟ್ಟುತ್ತಿದ್ದನು. ಆ ಕರುವು ಡೇರೆಯನ್ನು ಎಳೆಯುತ್ತಿದ್ದುದರಿಂದ ತಾಯಿಯವರು ಅದನ್ನು ಬಿಟ್ಟುಕೊಡುತ್ತಿದ್ದರು. ಅವರ ಮನೆಯಲ್ಲಿ ಒಂದಾದರೂ ನಾಯಿಮರಿ ಇದ್ದೇ ಇರುತ್ತಿದ್ದಿತು. ಹೀಗೆ ಶ್ರೀಧರನಿಗೆ ಆಕಳು

ನಾಯಿಗಳ ಮೇಲೆ ತುಂಬ ಪ್ರೀತಿಯಿದ್ದಿತು. ದಿನಾಲು ಶ್ರೀಧರನು ತನ್ನ ಗೆಳೆಯರೊಡನೆ ತಿರುಗಾಡಲು ಹೋಗುತ್ತಿದ್ದನು. ಆಗ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ತನ್ನ ಗೆಳೆಯರಿಗೆ ಬಣ್ಣಿಸುತ್ತ ಊರಿನ ಬೇನೆಯು ವಾಸಿಯಾಗಿ ಜನರು ತಮ್ಮ ಊರಿಗೆ ಹೋಗುವಂತಾಗಲೆಂದು ದೇವರನ್ನು ಪ್ರಾರ್ಥಿಸುತ್ತ ಸಂಚರಿಸುತ್ತಿದ್ದನು. ಆ ಸಮಯದಲ್ಲಿ ರಾತ್ರಿ ಕಳ್ಳರ ಕಾಕರ ಬಾಧೆ ಹೆಚ್ಚಿತು. ಆಗ ಶ್ರೀಧರನು ರಾತ್ರಿ ಬಹಳಹೊತ್ತು ಹೊರಗೆ ತಿರುಗಾಡುತ್ತ ಎಲ್ಲರನ್ನೂ ಮಾತಾಡಿಸುತ್ತ ಸಂತೋಷದಿಂದ ಇರುತ್ತಿದ್ದನು. ಹೀಗೆ ಊರಹೊರಗಿನ ಬಯಲಿನಲ್ಲಿರುವಾಗ ಶ್ರೀಧರನ ಕಾಲವು ಬಲು ಸೊಗಸಾಗಿ ಸಾಗಿತು.ಬಾಲಕ ಶ್ರೀಧರನಿಗೆ ಹುತುತು ಖೋ ಖೋ ಮುಂತಾದ ದೇಶೀಯ ಆಟಗಳಲ್ಲಿ ಬಲು ಪ್ರೇಮ. ಹುಡುಗರ ಮುಂದಾಳುವಾಗಿ ಆಡಿ, ಎದುರು ಗಡೆಯುವರನ್ನು ಸಾಹಸದಿಂದ ಸೋಲಿಸುತ್ತಿದ್ದನು. ಆಟದಲ್ಲಾಗಲೀ ಕುಸ್ತಿಯಲ್ಲಾಗಲೀ ಈತನು ಸೋಲನ್ನು ಎಂದೂ ಕಂಡವನಲ್ಲ.

ಶ್ರೀಧರನು ಶಾಲೆಗೆ ಹೋಗಲು ಪ್ರಾರಂಭಿಸಿದನು.ಆ ಶಾಲೆ 'ವಿವೇಕ ವರ್ಧಿನೀ' ಎಂಬ ಹೆಸರಿನಿಂದ ಈಗಲೂ ನಡೆಯುತ್ತಿದೆ. ತಪ್ಪದೆ ಸಾಲೆಗೆ ಹೋಗಿ ಕಲಿತು ಒಂದೇ ವರ್ಷದಲ್ಲಿ ಒಂದನೆಯ ಇಯತ್ತೆಯಲ್ಲಿ ಪ್ರಥಮ ತರಗತಿಯಲ್ಲಿ ಪಾಸಾದನು. ಆದರೂ ಆತನ ಪ್ರತಿ ದಿನದ ನಾಮಸ್ಮರಣೆ ಸಾಧನೆಗಳು ಸಾಗಿಯೇ ಇದ್ದವು. ದಿನದ ಸಾಲೆಯ ಅಭ್ಯಾಸ ಮುಗಿಸಿದೊಡನೆಯೆ ನಾಮ ಸ್ಮರಣದಲ್ಲಿ ತಲ್ಲೀನನಾಗುತ್ತಿದ್ದನು. ರಾಮಲೀಲೆ ಕೀರ್ತನೆಗಳು ನಡೆದಲ್ಲೆಲ್ಲ ತಪ್ಪದೆ ಹೋಗುತ್ತಿದ್ದನು. ಸಂಗಡ ತಾಯಿಯವರನ್ನೂ ಕರೆದೊಯ್ಯುತ್ತಿದ್ದನು. ದಿನಾಲು ಸಾಲೆಬಿಟ್ಟೊಡನೆ ಊರಿನ ದೇವಸ್ಥಾನಗಳನ್ನೆಲ್ಲ ಸಂದರ್ಶಿಸುವದು ಈತನ ದಿನದ ಪರಿಪಾಠ. ಸಾಲೆಗೆ ಹೋಗುವದನ್ನು ತಪ್ಪಿಸಬಾರದೆಂದು ತಾಯಿಯು ರಾಮಲೀಲೆಗೆ ಹೋಗುವದನ್ನು ತಡೆಯಬಹುದೆಂಬ ಭಯದಿಂದ ಈತನು ಶಾಲೆಯನ್ನೆಂದೂ ತಪ್ಪಿಸುತ್ತಿರಲಿಲ್ಲ.

ಶ್ರೀಧರನು ಸಾಲೆಗೆ ಹೋಗುವ ದಾರಿಯ ಪಕ್ಕದಲ್ಲಿ ಒಂದು ದೊಡ್ಡ ಮೈದಾನವಿದ್ದು, ಅದರ ಸುತ್ತು ಮುತ್ತಲೂ ಮಹಮ್ಮದೀಯರ ಮನೆಗಳಿದ್ದವು.ಅಲ್ಲಿ ಆ ಮಹಮ್ಮದೀಯ ಹುಡುಗರು ಸಾಲೆಗೆಹೋಗುವ ಬಾಲಕರನ್ನು ಹೆದರಿಸಿ,ಅವರಿಗೆ ಕಲ್ಲೆಸೆಯುತ್ತಿದ್ದರು.ಒಂದುದಿನ ಆ ಬಾಲಕರು ಶ್ರೀಧರನಿಗೆ

ದೂರಿಕೊಂಡರು. ಅಂದಿನಿಂದ ಶ್ರೀಧರನು ಪ್ರತಿದಿನವೂ ಅವರನ್ನು ತನ್ನ ಸಂಗಡ ಕರಕೊಂಡು ಹೋಗಹತ್ತಿದನು. ಶ್ರೀಧರನನ್ನು ಕಂಡರೆ ಮುಹಮ್ಮದೀಯರ ಹುಡುಗರು ಹೆದರುತ್ತಿದ್ದರು. ಏಕಂದರೆ, ಶ್ರೀಧರನು ಸಿರುಪಾಯನಾಗಿ ಅವರನ್ನು ಒಂದೆರಡು ಬಾರಿ ಚೆನ್ನಾಗಿಯೇ ಹೊಡೆದಿದ್ದನು. ಮುಂದೆ ಮುಂದೆ ಆ ಬಾಲಕರಿಗೆ ತಾವೇ ಆ ದಾರಿಯಿಂದ ಹೋಗಲು ಧೈರ್ಯ ಬಂದಿತು.

ಅಣ್ಣ ತ್ರಯಂಬಕರದು ಬಹಳ ಸಾತ್ವಿಕ ಸ್ವಭಾವ. ಕುಟುಂಬದ ಸರ್ವಭಾರವೂ ಅವರ ಮೇಲೆಯೆ ಬಿದ್ದಿದ್ದಿತು. ಆದರೆ ಸರಕಾರದ ನೌಕರಿ ಸಿಕ್ಕಿದ ಕಾರಣ ಹೆಚ್ಚು ಕಷ್ಟವಾಗುತ್ತಿರಲಿಲ್ಲ. ಅವರಿಗೆ ಜ್ಯೋತಿಷ್ಯದಲ್ಲಿ ತುಂಬ ಪ್ರೀತಿಯಿದ್ದುದರಿಂದ, ಮಾರುತಿರಾಯರೆಂಬ ಜ್ಯೋತಿಷ್ಕರಲ್ಲಿ ಆ ವಿಷಯವನ್ನು ಕಲಿಯುತ್ತಿದ್ದರು. ಕ್ರಮೇಣ ಆ ವಿದ್ಯೆಯಲ್ಲಿ ಪ್ರವೀಣರೂ ಆದರು. ತ್ರಯಂಬಕರ ನಾಲಿಗೆಯ ಮೇಲೆ ಮೀನಿನಾಕಾರದ ಮತ್ಸ್ಯ ಚಿನ್ಹ ವಿಧ್ದುದರಿಂದ ಅವರ ಮಾತೆಲ್ಲ ನಿಜವಾಗುತ್ತಿತ್ತು. ಒಂದು ದಿನ ಕಮಲಾಬಾಯಿಯವರು "ಶ್ರೀಧರನ ವಿಷಯದಲ್ಲಿ ನಿನಗೇನು ತೋರುತ್ತದೆ?" ಎಂದು ಕೇಳಲು ಅವರು ಶ್ರೀಧರನ ಕುಂಡಲಿಯನ್ನು ನೋಡಿ ಅದು ತಪ್ಪಾಗಿದೆಯೆಂದು ಹರಿದುಹಾಕಿಬಿಟ್ಟರು. "ಶ್ರೀಧರನು ಜಗತ್‌ಪ್ರಸಿದ್ಧ ರಾಜನಾಗುತ್ತಾನೆ; ಇಲ್ಲವೆ ಜಗತ್ಪ್ರಸಿದ್ಧ ಯತಿಯಾದರೂ ಆಗುವನು." ಎಂದು ಭವಿಷ್ಯವನ್ನು ತಿಳಿಸಿದರು. ಒಮ್ಮೆ ಶ್ರೀಧರನ ಐದನೆಯ ವಯಸ್ಸಿನಲ್ಲಿ ತ್ರಯಂಬಕರು ಆತನನ್ನು ಗಣೇಶೋತ್ಸವಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿಯ ಒಂದು ಸ್ಫೂರ್ತಿಯುತ ಭಾಷಣವನ್ನು ಕೇಳಿ ಚಿಕ್ಕ ಮಗು ಶ್ರೀಧರನು ಆಶ್ಚರ್ಯಗೊಂಡು "ಇಷ್ಟು ಚಿಕ್ಕ ತಲೆಯಲ್ಲಿ ಇಷ್ಟೆಲ್ಲ ಶಬ್ದಗಳು ಇರುವದು ಹೇಗೆ?" ಎಂದು ಕೇಳಿದನು. ಇದನ್ನು ಕೇಳಿ ಸೋದರರು ನಸುನಗುತ್ತ "ಪರಮಾತ್ಮನ ಅನಂತ ಶಕ್ತಿಗೆ ಎಲ್ಲವೂ ಸಾಧ್ಯವಿದೆ" ಎಂದು ಸಮಾಧಾನ ಪಡಿಸಿದರು.

ಒಂದುದಿನ ತ್ರಯಂಬಕರು ಶ್ರೀಧರನೊಡನೆ ಬೇರೆ ಊರಿಗೆ ಹೊರಟರು. ಅವರ ಜೊತೆಗೆ ಮತ್ತೆ ಕೆಲವು ಜನರಿದ್ದರು. ಅವರೆಲ್ಲ ರಾಮನ ಮಹಿಮೆಯ ವಿಷಯವಾಗಿ ಮಾತಾಡುತ್ತಿದ್ದರು. ಒಂದು ಸರೋವರವು ಕಾಣಿಸಿತು.

ಶ್ರೀರಾಮನು ತನ್ನ ಭಕ್ತರನ್ನು ಕಾಪಾಡಿಕೊಂಡು ಯಾವಾಗಲೂ ಅವರ ಹಿಂದೆಯೇ ಇರುವನು ಎಂದು ಶ್ರೀಧರನು ಮಾತೆತ್ತಿದನು. ಆಗ ಅವರಲ್ಲಿ ಒಬ್ಬನು ತಮಾಷೆಯಾಗಿ "ನೋಡೋಣ, ರಾಮನೇ ಸಂರಕ್ಷಿಸುವುದಾದರೆ ಈ ಸರೋವರದಲ್ಲಿ ಧುಮುಕು. ಮೂಗು ಬಾಯಿಗಳಲ್ಲಿ ನೀರುತುಂಬಿಕೊಂಡು ಎಷ್ಟು ಕೂಗಿದರೂ ನಿನ್ನನ್ನು ನಾವು ಮೇಲೆತ್ತುವದಿಲ್ಲ. ನಿನ್ನ ರಾಮನೇ ಹೇಗೆ ಸಂರಕ್ಷಿಸುವನೋ ನೋಡೋಣ" ಎಂದನು. ಆಗ ಶ್ರೀಧರನು ಆವೇಶ ದಿಂದ ಓಡಿಹೋಗಿ ಕೊಳಕ್ಕೆ ಧುಮುಕಲು ಅನುವಾದನು. ಆದರೆ ಜತೆಯ ಜನರು ತಡೆದುಹಿಡಿದರು. ಪರಮಾತ್ಮನ ಪರೀಕ್ಷೆಗೆ ಸಾಮಾನ್ಯ ಮಾನವರು ಅಣಿಯಾಗುವರೆಂತು ?

ಕಮಲಾಬಾಯಿಯವರು ಒಂದು ದಿನ ಶ್ರೀಧರನನ್ನು ಕುರಿತು "ರಾಜಾ, ನೀನು ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆಹೊಂದಿದರೆ, ನಿನ್ನ ಉಪನಯನವನ್ನು ವಿಜೃಂಭಣೆಯಿಂದ ಮಾಡಿ, ಕುದುರೆಯ ಮೇಲೆ ಮೆರ ವಣಿಗೆ ಹೊರಡಿಸುವೆನು" ಎಂದರು. ಉತ್ತರ ದೇಶದಲ್ಲಿ ಉಪನಯನವಾದ ಮೇಲೆ ಮೆರವಣಿಗೆ ಹೊರಡಿಸುವ ಪರಿಪಾಠವುಂಟು. ಶ್ರೀಧರನಿಗೆ ಕುದುರೆಯ ಮೇಲೆ ಕುಳಿತುಕೊಳ್ಳಲು ಸಿಗುವದೆಂದು ಆನಂದವಾಯಿತು. ಆದರೆ ಮುಂದೆ ಕೆಲವುದಿನ ಜ್ವರಬಂದುದರಿಂದಸಾಲೆಗೆಹೋಗಲಾಗಲಿಲ್ಲ.ಆದ್ದರಿಂದಪರೀಕ್ಷೆಯ ವೇಳೆಗೆ ಸಾಕಾದಷ್ಟು ಅಭ್ಯಾಸವಾಗಿರಲಿಲ್ಲ. ಆಗ ಅವನು ಎರಡನೆಯ ತರಗತಿ ಯಲ್ಲಿ ಓದುತ್ತಿದ್ದನು. ಪರೀಕ್ಷೆಯು ಸಮೀಪಿಸಿದುದರಿಂದ ಸರ್ವಭಾರವನ್ನೂ ರಾಮನ ಮೇಲೆ ಹಾಕಿದನು. ಪ್ರಾತಃಕಾಲದಲ್ಲೆದ್ದು ನಾಮಸ್ಮರಣಾದಿಗಳನ್ನು ಮುಗಿಸಿ, ಹತ್ತುವರೆ ಘಂಟೆಯಾಗುತ್ತಲೆ ಶಾಲೆಗೆ ಹೋಗುತ್ತಿದ್ದನು. ಜ್ವರದ ಅವಧಿಯಲ್ಲಿ ಅನೇಕ ದಿನ ಶಾಲೆ ತಪ್ಪಿಸಿದ್ದರಿಂದ ವಿದ್ಯಾರ್ಥಿಗಳ ಅಭ್ಯಾಸ ನಡೆದಾಗ ಉಪಾಧ್ಯಾಯರು ಶ್ರೀಧರನಿಗೆ ಪ್ರಶ್ನೆಕೇಳುವುದನ್ನೇ ಬಿಟ್ಟುಬಿಟ್ಟಿ ದ್ದರು. ಹಿಂದೆ ಸರಿಯಾಗಿ ಅಭ್ಯಾಸವಾಗದುದರಿಂದ ಅವರು ಹೇಳಿದ ಮುಂದಿನ ವಿಚಾರವೂ ಶ್ರೀಧರನಿಗೆ ಸರಿಯಾಗಿ ತಿಳಿಯುತ್ತಿರಲಿಲ್ಲ. ಇಂಥ ಸ್ಥಿತಿಯಲ್ಲಿ ತಾನು ಓದಿ ತೇರ್ಗಡೆಯಾಗುವದು ಸಾಧ್ಯವಿಲ್ಲವೆಂದೂ ತನಗೆ ರಾಮನೊಬ್ಬನೇ ಗತಿಯೆಂದೂ ನಾಮಸ್ಮರಣವನ್ನು ಮಾತ್ರ ತಪ್ಪದೆ ಮಾಡು ತ್ತಿದ್ದನು. ಪರೀಕ್ಷೆಯ ದಿನ ರಾಮನನ್ನು ನೆನೆಯುತ್ತ ಶಾಲೆಗೆ ಹೋಗಿ ಎಲ್ಲ

ರಂತೆ ಪರೀಕ್ಷೆಯಲ್ಲಿ ಭಾಗವಹಿಸಿದನು.ಪರೀಕ್ಷಕರ ಪ್ರಶ್ನೆಗಳಿಗೆಲ್ಲ ತಕ್ಕ ಉತ್ತರ ಹೊರಟಿತು. ಗಣಿತದಲ್ಲಿ ನೂರಕ್ಕೆ ನೂರು ಗುಣಗಳು ದೊರೆದವು. ಪರೀಕ್ಷೆಯು ಮುಗಿಯುವವರೆಗೂ ರಾಮನಾಮಸ್ಮರಣವನ್ನು ಮಾತ್ರ ಬಿಡಲಿಲ್ಲ. ಅಂತೂ ಶ್ರೀಧರನು ಉತ್ತಮ ತರಗತಿಯಲ್ಲಿ ತೇರ್ಗಡೆಹೊಂದಿದನು! ಉಪಾಧ್ಯಾಯರಿಗೆ ಬಹಳ ಆಶ್ಚರ್ಯವಾಯಿತು. ತಾಯಿಯವರು ಕೂಡ ತುಂಬಾ ಆನಂದಪಟ್ಟು ಉತ್ಸಾಹದಿಂದ ಶ್ರೀಧರನ ಉಪನಯನವನ್ನು ಮಾಡಿಸಿ ಕುದುರೆಯ ಮೇಲೆ ಮೆರವಣಿಗೆ ಹೊರಡಿಸಿದರು.ಶ್ರೀಧರನು ಬೈತಾಬಾದದ ಮಾರುತಿಯ ಗುಡಿಗೆ ಆಗಾಗಹೋಗುತ್ತಿದ್ದನು.ಹೈದರಾಬಾದಿನ ಸುತ್ತುಮುತ್ತಲಿನ ನೂರು-ನೂರಾ ಇಪ್ಪತ್ತು ಮೈಲಿಗಳೊಳಗಿನ ಎಲ್ಲ ದೇವಾಲಯಗಳು ಇವನಿಗೆ ಗೊತ್ತಿದ್ದುವು. ಹರಿಕತೆ-ಉತ್ಸವ ಇತ್ಯಾದಿಗಳಲ್ಲಿ ಶ್ರೀಧರನು ಮೊದಲಿಗನಾಗಿರುತ್ತಿದ್ದನು. ಅವನಿಗೆ ಗೊತ್ತಿಲ್ಲದೆ ನಡೆದರೆ ಮಾತ್ರ ನಿರುಪಾಯ. ಶ್ರೀಧರನು ಪುರಾಣಗಳ ಅನೇಕ ಕತೆಗಳನ್ನು ತಿಳಿದುಕೊಂಡಿದ್ದನು. ಹರಿವಿಜಯ, ಭಕ್ತಲೀಲಾಮೃತ,ಶಿವಲೀಲಾಮೃತ,ರಾಮಾಯಣ. ಮಹಾಭಾರತ ಮುಂತಾದುವನ್ನು ಕಮಲಾಬಾಯಿಯವರು ಮಗನಿಂದ ಓದಿಸಿ ಕೇಳುತ್ತಿದ್ದರು.

ಶ್ರೀಧರನಿಗೆ ತನ್ನ ಸಹೋದರಿ ಗೋದಾವರಿಯಮೇಲೆ ತುಂಬ ಅಕ್ಕರೆ. ಸಹೋದರಿಯು ಮನೆಗೆ ಬಂದಳೆಂದರೆ ೨-೩ ದಿನ ಶಾಲೆಗೆ ಹೋಗದೆ ಅವಳ ಜತೆಯಲ್ಲಿಯೇ ಇರುವನು.ಶಾಲೆತಪ್ಪಿಸಲು ತಾಯಿಯ ಅಪ್ಪಣೆ ಪಡೆಯುವದಕ್ಕಾಗಿ, ಬಾಯಿಯಲ್ಲಿ ಹಪ್ಪಳದ ಹಿಟ್ಟನ್ನಿಟ್ಟುಕೊಂಡು ನಾಲಿಗೆಗೆ ನೀರು ಬಂದೊಡನೆ ಅದನ್ನು ತಾಯಿಗೆ ತೋರಿಸಿ, "ಅಮ್ಮ, ಇಂದೇನೋ ಆಗುತ್ತದೆ. ಬಾಯಿಯಲ್ಲಿ ನೀರು-ನೀರು ಬರುವದು" ಎಂದು ಹೇಳಿ ಶಾಲೆಗೆ ಹೊರಡುವವನಂತೆ ನಟಿಸುತ್ತಿದ್ದನು. ತಾಯಿಯವರು ಕನಿಕರದಿಂದ ಶಾಲೆಗೆ ಹೋಗಬೇಡವೆನ್ನುತ್ತಿದ್ದರು. ಅನೇಕ ವೇಳೆ ತನ್ನ ಸೋದರಿಯ ಮನೆಗೂ ಹೋಗುತ್ತಿದ್ದನು. ಅದು ಒಂದು ಸಣ್ಣಹಳ್ಳಿಯಾಗಿದ್ದು, ಅಲ್ಲಿದ್ದವರೆಲ್ಲ ಅವಿದ್ಯಾವಂತರಾಗಿದ್ದರು. ಅವರಿಗೆ ತನ್ನ ದೊಡ್ಡಸ್ತಿಕೆಯನ್ನು ತೋರಿಸಲು ದಪ್ಪಾದ ಒಂದು ಪುಸ್ತಕವನ್ನು ಎದೆಯಮೇಲೆ ಇಟ್ಟುಕೊಂಡು ಕಾಲು ನೀಡಿ ಓದುವವನಂತೆ ನಟಿಸುತ್ತಿದ್ದನು. ಆಗ ನೋಡಿದವರು "ಇವನು ಇಷ್ಟುಚಿಕ್ಕವನಾದರೂ ಎಂಥ ಪುಸ್ತಕವನ್ನೆಲ್ಲ ಓದುತ್ತಿರುವನು! ಎಷ್ಟು ಬುದ್ಧಿವಂತನಾಗಿರುವನು!"

ಎನ್ನುತ್ತಿದ್ದರು. ಅವರು ತನ್ನ ಬಗೆಗೆ ಮರುಳಾದುದನ್ನು ಕಂಡು ಶ್ರೀಧರನು ನಗುತ್ತಿದ್ದನು. ಒಮ್ಮೆ ಗೋದಾವರಿಯ ಮೈದುನನ ವಿವಾಹವನ್ನು ನಿಶ್ಚಯಿಸಿದ್ದರು. ಗೋದಾವರಿ ಬಂದು ಶ್ರೀಧರನನ್ನು ಅಲ್ಲಿಗೆ ಕರೆದೊಯ್ದಳು. ಈ ಯತಿರಾಜನಿಗೆ ವಿವಾಹಮಂಡಪದ ಆ ವಾತಾವರಣವು ರುಚಿಸಲಿಲ್ಲ. ೨–೩ ದಿನಗಳನಂತರ ತನ್ನನ್ನು ಕಳುಹಿಕೊಡು ಎಂದು ಮದುವಣಿಗನಿಗೆ ಹೇಳಿದನು. ಅದಕ್ಕೆ ಆ ಗೆಳೆಯನು ಮನಸ್ಸುಕೊಡದೆ “ ನೀನು ಹೋದರೆ ಬಹಳ ಬೇಸರವಾಗುತ್ತದೆ. ಆಪ್ತರಾರೂ ಇಲ್ಲವಾಗುವರು ” ಎಂದು ಅಲ್ಲಿಯೇ ಇರಲು ಬಲಾತ್ಕರಿಸಿದನು. ಮದುವಣಿಗನು ಶ್ರೀಧರನಿಗಿಂತ ವಯಸ್ಸಿನಲ್ಲಿ ಎರಡು ಮೂರು ವರ್ಷಗಳಿಗೆ ದೊಡ್ಡವನು. ಆತನನ್ನು ಕುರಿತು ಶ್ರೀಧರನು “ ನಿನಗೆ ಮದುವೆಯಾಗಿ ಎರಡು ಮೂರೇ ದಿನಗಳಾದವು. ಆದರೂ ನಿನಗೆ ಪತ್ನಿಯಮೇಲೆ ಇದ್ದಷ್ಟು ಪ್ರೇಮವು ಯಾರಮೇಲೂ ಇಲ್ಲವಲ್ಲ. ಜನನ ಮರಣಕ್ಕೆ ಕಾರಣಭೂತವಾದ ಮಾಯಾಪಾಶವೆಂದರೆ ಇದೇ. ಇದರಲ್ಲಿ ಸಿಲುಕಿ, ಸ್ವಾತಂತ್ರ್ಯವನ್ನು ಕಳೆದುಕೊಂಡು ಪಶು ಜೀವನವನ್ನ ಸಾಗಿಸುವುದೆಂದರೆ, ಇದೇ ” ಎಂದನು. ಶ್ರೀಧರನ ಈ ಪಾರಮಾರ್ಥಿಕ ವಿಚಾರವನ್ನು ಕೇಳಿ ಅನೇಕ ಪಂಡಿತರು “ ಇಷ್ಟುಸಣ್ಣ ಹುಡುಗನಾದರೂ ಇವನ ಮಾತು ಅಮೂಲ್ಯವಾಗಿವೆ ” ಎಂದು ಆಶ್ಚರ್ಯಪಟ್ಟರು.

ಶ್ರೀಧರನು ಸಾಲೆಗೆ ಹೋಗುತ್ತ ಮನೆತನದ ಚಿಕ್ಕಪುಟ್ಟ ಕಾರ್ಯಗಳಲ್ಲಿ ಅಣ್ಣ ತ್ರ್ಯಂಬಕರಿಗೆ ನೆರವಾಗುತ್ತಿದ್ದನು. ತಾಯಿ ಕಮಲಾಬಾಯಿಯವರಿಗಂತೂ ಮುದ್ದಿನ ಮಣಿಯಾದ ಶ್ರೀಧರನು ಪುಟಿಯುವ ಚಂಡಿನಂತೆ ಚಟುವಟಿಕೆಯಿಂದ ಕೆಲಸ ಮಾಡುವ ನೆರವಿಗನಾಗಿದ್ದನು. ಸಾಲೆಯಲ್ಲಿ ಗುರುಗಳಿಗೂ ಪ್ರಿಯ ವಿದ್ಯಾರ್ಥಿಯಾಗಿದ್ದು ಸಹಪಾಠಿಗಳೆಲ್ಲರಿಗೂ ತುಂಬ ಸಹಾಯ ಮಾಡುವ ಮಮತೆಯ ಗೆಳೆಯನಾಗಿದ್ದನು. ಹೀಗೆ ಲೌಕಿಕದಲ್ಲಿ ಎಲ್ಲರಿಗೂ ಪ್ರಿಯನಾಗಿರುವಂತೆಯೇ ಶ್ರೀರಾಮನ ನಾಮಸ್ಮರಣೆ ದೇವ ಭಕ್ತಿಯ ಕಾರ್ಯಗಳು ಇವುಗಳಲ್ಲಿಯೂ ಶ್ರೀಧರನು ಅನನ್ಯ ಮಾನಸನಾಗಿ ತೊಡಗಿಕೊಂಡು ಅಲೌಕಿಕ ತೇಜಸ್ಸಿನಿಂದ ಬೆಳಗುವ ಈಶ್ವರ ಭಕ್ತನಾಗಿ ಬೆಳೆಯುತ್ತಿರುವ ಬಾಲಕ ಶ್ರೀಧರನು ಸಕಲರ ಪ್ರೀತಿಗೂ ಪಾತ್ರನಾಗಿದ್ದನು.

೪. ಕಷ್ಟಪರಂಪರೆ-ಸಮಾಧಾನ

ಶ್ರೀಧರನ ಉಪನಯನವು ಒಂದು ಶಂಕರನ ದೇವಾಲಯದಲ್ಲಾಯಿತು. ಅಲ್ಲಿಯೇ ಒಂದು ಮಾರುತಿಯ ಮೂರ್ತಿಯೂ ಔದುಂಬರ ವೃಕ್ಷವೂ ಇದ್ದುವು. ಹತ್ತಿರದ ಬಾಡಿಗೆಯ ಮನೆಯಲ್ಲಿ ತ್ರಿಯಂಬಕ ರಾಯರು ವಾಸವಾಗಿದ್ದರು. ಶ್ರೀಧರನು ಶಂಕರನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕಿ ಔದುಂಬರದ ಅಡಿಯಲ್ಲಿ ಕುಳಿತುಕೊಳ್ಳುವದಕ್ಕಾರಂಭಿಸಿದನು. ಆಗಾಗ ೧॥ ಮೈಲಿ ದೂರವಿರುವ ದತ್ತಮಂದಿರಕ್ಕೂ ಹೋಗಿಬರುತ್ತಿದ್ದನು. ಹೀಗಿರಲು ಮುಂದೆ ಎರಡುಮೂರು ವರ್ಷ ಕಳೆದ ಬಳಿಕ ತ್ರಿಯಂಬಕ ರಾಯರು ಇಹಲೋಕ ಯಾತ್ರೆಯನ್ನು ಮುಗಿಸಿದರು. ಅದೇ ಸಮಯದಲ್ಲಿ ಗೋದಾವರಿಯೂ ತೀರಿಕೊಂಡಳು. ಕಮಲಾಬಾಯಿಯವರ ದುಃಖಕ್ಕೆ ಪಾರವಿಲ್ಲದಾಯಿತು. ಅವರು ಸಹಿಸಲಾರದ ವ್ಯಥೆಯಿಂದ ರೋದಿಸಲಾರಂಭಿಸಿದರು. ಆಗ ಶ್ರೀಧರನು ತಾಯಿಯನ್ನು ತಬ್ಬಿಕೊಂಡು ಹೀಗೆ ಸಂತೈಸತೊಡಗಿದನು:—

"ಅಮ್ಮಾ, ಯಾವುದರ ಪ್ರೀತಿಗೋಸುಗ ನೀನು ವ್ಯಥೆ ಪಡುವೆಯೋ ಅದು ಆತ್ಮರೂಪವಾಗಿದ್ದು ಜನನ-ಮರಣರಹಿತವಾಗಿರುವದು. ಶರೀರಕ್ಕೆ ಜನನಮರಣಗಳುಂಟು; ಅದು ಪಂಚಭೂತಾತ್ಮಕವಾಗಿದೆ. ಮರಣವೆಂದರೆ ಒಂದುಗೂಡಿದ್ದ ಪಂಚಭೂತಗಳು ತಿರುಗಿ ಆಯಾ ಭೂತಗಳಲ್ಲಿ ಹೋಗಿ ಸೇರುವದು. ಜನನವೆಂದರೆ ಪರಮಾತ್ಮನ ವಿಚಿತ್ರ ಶಕ್ತಿಯಿಂದ ಈ ಪಂಚಭೂತಗಳು ಏಕತ್ರ ಸೇರಿ ಒಂದು ಆಕೃತಿಗೊಳ್ಳುವದು. ಈ ಎಲ್ಲ ದೇಹದಲ್ಲಿ ವ್ಯಾಪ್ತವಾಗಿರುವ ನಾನು ಎಂಬ ನಿಸ್ಸಂಗರೂಪವಾದ ಸ್ಫೂರ್ತಿಯು ಯಾವುದರ ಯೋಗದಿಂದ ಪ್ರಕಟವಾಗುವದೋ ಆ ಪರಮಾತ್ಮನ ರೂಪವು ಮಾತ್ರ ನಿತ್ಯವು. ದೇಹದಲ್ಲಿರುವ 'ನಾನು' ಎಂಬ ಸ್ಫೂರ್ತಿಯು ಪ್ರಾಣಚಲನೆಯನ್ನು ನಿಲ್ಲಿಸಿ ಮತ್ತೆ ಭಾಸವಾಗದೆ ಅದೃಶ್ಯವಾಯಿತೆಂದರೆ ಆ ಶರೀರಕ್ಕೆ ಮೃತ್ಯು ಬಂದಿತೆಂದು ಹೇಳಲಾಗುವದು."

"ಈ ದೇಹಕ್ಕಿಂತ ಮೊದಲೇ ಇರುವವನೇ ದೇಹವುಳ್ಳವನು. ಅವನು ತನ್ನ ಇಚ್ಛಾನುಸಾರವಾಗಿ ಘಟಿಸಿದ ಕರ್ಮದ ಫಲವೆಂದು ಇನ್ನೊಂದು

ದೇಹವನ್ನು ಧರಿಸುವದಕ್ಕೋಸ್ಕರ ಹಳೆಯ ದೇಹವನ್ನು ಬಿಡುತ್ತಾನೆ. ಈ ದೃಷ್ಟಿಯಿಂದ ದೇಹಧಾರಣೆಯೆಂದರೆ ಜನನ, ದೇಹಬಿಡುವುದೆಂದರೆ ಮರಣ. ದೇಹ ಧರಿಸುವವನು ದೇಹ ಧರಿಸುವದಕ್ಕಿಂತ ಮೊದಲೇ ಇರುತ್ತಾನೆ. ಮಾತ್ರವಲ್ಲದೆ, ಬೇರೆ ದೇಹಧಾರಣೆಗೋಸುಗ ಹಳೆಯ ದೇಹವನ್ನು ಬಿಡುವಾಗಲೂ ಇರುವನು. ಎಂದಮೇಲೆ ಅವನು ದೇಹದಲ್ಲಿದ್ದರೂ ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ, ಎಂದು ಸ್ಪಷ್ಟವಾಗುತ್ತದೆ. 'ನಾನು' ಎಂಬ ಆತ್ಮಸ್ಮೃತಿಯು ಈ ದೇಹದಲ್ಲಿ ಇರುವತನಕ ಆ ದೇಹದಲ್ಲಿ ನಮಗೆ ಪ್ರೇಮವಿರುತ್ತದೆ. ಆ ಸ್ಮೃತಿ ನಷ್ಟವಾಯಿತೆಂದರೆ ದೇಹದ ಮಮತೆಯು ನಷ್ಟವಾಗಿ ಅದೇ ದೇಹವನ್ನು ಸುಡುವುದಕ್ಕೋಸ್ಕರ ಸಿದ್ಧರಾಗುವೆವು. ಆಳವಾಗಿ ವಿಚಾರಮಾಡಿದರೆ ಕೇವಲ ಒಂದು ದೇಹದಮೇಲೆ ಯಾರಿಗೂ ಪ್ರೇಮವಿರುವದಿಲ್ಲವೆಂಬದು ಸುಸ್ಪಷ್ಟವಾಗುತ್ತದೆ. ಪ್ರೇಮಕ್ಕಾಸ್ಪದವಾದ ಆ ಆತ್ಮಸ್ವರೂಪವು ಎಂದೂ ನಾಶಹೊಂದುವದಿಲ್ಲ. ಎಂದ ಮೇಲೆ ಯಾರು ಮೃತಪಟ್ಟರೆಂದು ವ್ಯಥೆಪಡಬೇಕು? ಆತ್ಮವು ಅವಿನಾಶಿಯೆಂದು ಅರಿತುಕೊಂಡವರು ಜನನಮರಣರಹಿತರಾಗುವರು. ಮತ್ತು ಆತ್ಮರೂಪದ ಅಜ್ಞಾನದಿಂದ ಜನನಮರಣಗಳು ಪ್ರಾಪ್ತವಾಗುತ್ತವೆ. ನೀನು, ಯಾರಿಗೂ ಜನನಮರಣಗಳೇ ಇಲ್ಲವೆಂದೂ, ಸ್ವತಃ ನೀನೂ ಜನನಮರಣ ರಹಿತಳೆಂದೂ ತಿಳಿ. ಅವಿನಾಶಿಯಾದ ಆತ್ಮಸ್ವರೂಪವು ಸತ್ಯವಾಗಿರುವದು. ಆದರೂ ಜನನಮರಣಗಳೆಂಬ ಮಾಯೆಯ ಜಾಲದಲ್ಲಿ ಭ್ರಮೆಗೊಳ್ಳುತ್ತೀಯೆ ಏಕೆ? ಆ ಅಜ್ಞಾನವನ್ನು ತೊರೆದು ಶಾಂತಚಿತ್ತಳಾಗು" ಎಂದು ಸಂತೈಸಿದನು. ಶ್ರೀಧರನ ಹೃದಯದಿಂದ ಉಕ್ಕುವ ವಿವೇಕದ ನುಡಿಗಳಿಂದ ಕಮಲಾಬಾಯಿಯವರ ಮೇಲೆ ಇಷ್ಟ ಪರಿಣಾಮವಾಯಿತು. ಅವರ ಮನಸ್ಸು ಧೀರವಾಯಿತು. ಅಳುವದನ್ನು ನಿಲ್ಲಿಸಿಬಿಟ್ಟರು.

ಅನಂತರ ಮೂರು ವರ್ಷಗಳ ಮೇಲೆ ಕಮಲಾಬಾಯಿಯವರೂ ದೇಹವನ್ನು ಬಿಟ್ಟು ಸಚ್ಚಿದಾನಂದ ಸ್ವರೂಪದಲ್ಲಿ ಲೀನವಾದರು. ಈಗ ಶ್ರೀಧರನಿಗೆ ಮಮತೆಯ ಸಹೋದರನಿಲ್ಲ, ಮೆಚ್ಚಿನ ಸಹೋದರಿಯಿಲ್ಲ. ಸ್ನೇಹಮಯಿಯಾದ ತಾಯಿಯವರೂ ತೊಲಗಿದರು. ಆದರೂ ಆತನ ಚಿತ್ತಸ್ಥೈರ್ಯಕ್ಕೆ ಕೊರತೆ ಬರಲಿಲ್ಲ. ಮನೆಯಲ್ಲಿ ಇದ್ದ ಸಾಮಾನುಗಳನ್ನೆಲ್ಲ ಕಂಡಕಂಡವರಿಗೆ

ಹಂಚಿಕೊಟ್ಟು ತನ್ನ ದೊಡ್ಡಮ್ಮ ತ್ರಿವೇಣೀಬಾಯಿಯವರ ಮನೆಗೆ ಹೋಗಿ ಇರಹತ್ತಿದನು. ತ್ರಿವೇಣಿ ಬಾಯಿಗೆ 'ಅಂಬಾ' ಎಂಬ ಮಗಳಿದ್ದಳು. ಅವಳು ಬಾಲವಿಧವೆ. ಇಬ್ಬರೂ ನಾರಾಯಣ ಮಹಾರಾಜರಿಂದ ಅನುಗ್ರಹಪಡೆ ದವರು. ಅವರಲ್ಲಿ ಇರುವಾಗ ಶ್ರೀಧರನು ಉರ್ದುಭಾಷೆಯನ್ನು ಕಲಿತನು. ಕ್ರಮೇಣ ಅಂಬಾಬಾಯಿಗೆ ಜ್ವರಬಂದಿತು. ಶ್ರೀಧರನಿಗೆ ಅವಳಲ್ಲಿ ತುಂಬ ವಾತ್ಸಲ್ಯ; ಅವಳಿಗೆ ಔಷಧೋಪಚಾರಗಳನ್ನು ಕೆಲಕಾಲಮಾಡಿ ಕಾರಣಾಂತರದಿಂದ ಗುಲ್ಬುರ್ಗಿಗೆ ಬಂದನು.ಆಗಲೆ ಅಂಬಾಬಾಯಿಯೂ ಮೃತಪಟ್ಟಳು.

ತಾನು ಹೋದ ಹೋದಲ್ಲೆಲ್ಲ ವಿಧಿ ಬೆನ್ನಟ್ಟಬರುವದೆನ್ನಿಸಿತು, ಬಾಲಕ ಶ್ರೀಧರನಿಗೆ. ಆದರೂ ಪೂರ್ವಜನ್ಮದ ಸಂಸ್ಕಾರ ಬಲದಿಂದ ಅವನು ಆ ವಿಧಿಯ ಹೋರಾಟದಲ್ಲಿ ಹಿಂದೆಬೀಳಲಿಲ್ಲ; ಕಂಗೆಟ್ಟು ದಾರಿತಪ್ಪಲಿಲ್ಲ.

ಗುಲಬುರ್ಗಿಯಲ್ಲಿ ಶ್ರೀಧರನ ಚಿಕ್ಕಮ್ಮನ ಮನೆಯಿದೆ. ಎಲ್ಲಿಗೆ ಹೋಗುವೆನೆಂಬ ಪರಿವೆಯಿಲ್ಲದೆ ನಿರಾಶ್ರಿತ ಶ್ರೀಧರನು ಗುಲಬುರ್ಗಿಗೆ ಹೋದನು. ಚಿಕ್ಕಮ್ಮನ ಆಗ್ರಹದಿಂದ ಅಲ್ಲಿಯೇ ನಿಂತು ಪುನಃ ವಿದ್ಯಾಭ್ಯಾಸವನ್ನು ಆರಂಭಿಸಬೇಕಾಯಿತು. ಶ್ರೀಧರನು ಬರುವಾಗ ಊರಿನಿಂದ ತಂದ ಹಣದಿಂದ ಅನುಕೂಲಪಡಿಸಿಕೊಂಡು ನಾಲ್ಕನೆಯ ತರಗತಿಯವರೆಗೆ ಓದಿದನು. ಆ ಊರಿನಲ್ಲಿ ಮಾಧ್ವಜಯಂತಿ ಶಂಕರಜಯಂತಿ ಉತ್ಸವಗಳು ನಡೆಯುತ್ತಿದ್ದವು. ಅವುಗಳಲ್ಲೆಲ್ಲ ಶ್ರೀಧರನು ಗಣ್ಯವಾದ ಭಾಗವಹಿಸಿ ಸ್ವಯಂಸೇವಕನಂತೆ ಚೆನ್ನಾಗಿ ದುಡಿಯುತ್ತಿದ್ದನು. ಹೀಗಾಗಿ ಮಾಧ್ವ ಜಯಂತಿಗೆ ಪುಣೆಯಿಂದ ಬಂದ ಶ್ರೀ ಅಗ್ನಿಹೋತ್ರಿ ರಾಶವಡೆ ಮತ್ತು ಶ್ರೀ ಪಾಂಗಾರಕರ ಎಂಬ ವಿದ್ವಾಂಸರ ಪ್ರವಚನಗಳನ್ನೂ ಶಂಕರ ಜಯಂತಿಗೆ ಬಂದ ಶ್ರೀ ನಾರಾಯಣ ಶಾಸ್ತ್ರಿಗಳ ಗೀತಾಭಾಷ್ಯದ ಮೇಲಿನ ಪ್ರವಚನಗಳನ್ನೂ ಕೇಳುವ ಯೋಗವು ವಿದ್ಯಾರ್ಥಿ ಶ್ರೀಧರನಿಗುಂಟಾಯಿತು. ಆಗಲೇ ಗುಲ್ಬುರ್ಗಿಯಲ್ಲಿ ಒಂದು ಧರ್ಮ ಪರಿಷತ್ತು ಬ್ಯಾರಿಸ್ಟರ್ ಜಯಕರರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕೇಶವರಾಮ ದಾಸೀ ಎಂಬ ಮಾನ್ಯ ಸಜ್ಜನರೂ ಈ ಪರಿಷತ್ತಿಗೆ ಬಂದಿದ್ದರು. ಶ್ರೀಧರನು ಸ್ವಯಂ ಸೇವಕನಾಗಿ ಈ ಪರಿಷತ್ತಿನಲ್ಲಿ ಬಹಳ ಪರಿಶ್ರಮ ಮಾಡಿದನು.ಅವರೆಲ್ಲರ ಪ್ರವಚನಗಳನ್ನು ಆದರದಿಂದ ಕೇಳಿದನು. ಇದರಿಂದ ಶ್ರೀಧರನಿಗೆ ತಾನು ಗುಲಬುರ್ಗಿಗೆ ಬಂದುದು ಒಳ್ಳೆಯದೇ ಆಯಿತೆನ್ನಿಸಿತು.

೫. ವಿದ್ಯಾರ್ಥಿ ಶ್ರೀಧರ-ಪುಣೆಯಲ್ಲಿ

ಶ್ರೀಧರನಿಗೆ ಚಿಕ್ಕಂದಿನಿಂದಲೂ ತಪಸ್ಸುಮಾಡಬೇಕೆಂಬ ಆವಲವಿಕೆ ಬಹಳ. ತಾನು ಎಲ್ಲರಿಗಿಂತ ಶ್ರೇಷ್ಠನೆಂಬ ಒಂದು ಆಂತರಿಕ ವಿಶ್ವಾಸವೂ ಈತನಲ್ಲಿ ನೆಲೆಸಿತ್ತು. ತಾನು ಅಸಂಗನೆಂಬ ಅತ್ಯುಚ್ಚ ಆಧ್ಯಾತ್ಮಿಕ ಭಾವನೆಯು ಈತನ ಹೃದಯದಲ್ಲಿ ತುಂಬಿತ್ತು. ಇಂಥ ಸ್ಥಿತಿಯಲ್ಲಿ ಗುಲಬುರ್ಗಿಯಲ್ಲಿಯೇ ಉಳಿದು ಸ್ವಜನರ ಜಂಜಾಟದಲ್ಲಿ ಸುತ್ತಿ ಸುಳಿಯುತ್ತಿದ್ದರೆ ಮುಂದಿನ ಸಾಧನೆಗೂ ತನ್ನತಪಸ್ಸಿಗೂ ಅನುಕೂಲವಾಗದೆಂದು ಅವನಿಗೆ ಅನಿಸಿದ್ದರಲ್ಲಿ ಆಶ್ಚರ್ಯವೇನು? ಆದ್ದರಿಂದ ಚಿಕ್ಕಮ್ಮನ ಅಪ್ಪಣೆಪಡೆದು ಮುಂದಿನ ವಿದ್ಯಾಭ್ಯಾಸಕ್ಕೆಂದು ಪುಣೆಗೆ ಹೋಗಲು ಶ್ರೀಧರನು ಅಣಿಯಾದನು. ಪುಣೆಯ ಚಿತವಳೆ ಎಂಬವರು ಗುಲಬುರ್ಗಿಯಲ್ಲಿದ್ದರು. ಅವರು ತಮ್ಮ ಭಾವನಾದ ಕೇತಕರ ಎಂಬವರಿಗೆ ಒಂದು ಪತ್ರಕೊಟ್ಟರು. ಕೇತಕರರು ಪುಣೆಯಲ್ಲಿ ಒಂದು ವಿದ್ಯಾರ್ಥಿಗೃಹದ ಸಂಚಾಲಕರು. ಶ್ರೀಧರನು ಪುಣೆಗೆ ಹೋಗಿ ಅವರಿಗೆ ಚಿತವಳೆಯವರ ಪತ್ರವನ್ನು ಕೊಟ್ಟನು. ಒಡನೆಯೆ ಆ ವಿದ್ಯಾರ್ಥಿಗೃಹದಲ್ಲಿ ಶ್ರೀಧರನಿಗೆ ಪ್ರವೇಶದೊರೆಯಿತು. ಲೋಕಮಾನ್ಯ ಟಿಲಕರು ಆ ಸಂಸ್ಥೆಯ ಮುಖ್ಯ ಸ್ಥಳದಲ್ಲಿ "**ಈ ಸಂಸ್ಥೆಯ ಉದ್ದೇಶಕ್ಕೆ ಅನುರೂಪವಾಗಿ ಸಜ್ಜುಗೊಂಡ ಒಬ್ಬ ವಿದ್ಯಾರ್ಥಿಯು ಹೊರಟನೆಂದರೆ ಇಡಿ ಜಗತ್ತಿನ ನೇತೃತ್ವನ್ನೇ ವಹಿಸಿಯಾನು**" ಎಂಬ ವಾಕ್ಯವನ್ನು ದೊಡ್ಡ ದೊಡ್ಡ ಅಕ್ಷರಗಳಿಂದ ಬರೆಯಿಸಿದ್ದರು. ಶ್ರೀಧರನು ಅಲ್ಲಿ ಸೇರಿದ ಮೊದಲ ದಿನವೇ ಈ ವಾಕ್ಯವು ಆತನ ಕಣ್ಣಿಗೆ ಬಿದ್ದಿತು. ಅಲ್ಲಿಯ ವಿದ್ಯಾರ್ಥಿಗಳ ಕಾರ್ಯಕ್ರಮ ಶಿಕ್ಷಣಕ್ರಮ ಆಚರಣೆಗಳನ್ನೆಲ್ಲ ನೋಡಿ ಶ್ರೀಧರನಿಗೆ ಸಮಾಧಾನವೆನಿಸಿತು. ಅವನು ಅಲ್ಲಿ ಒಂದು ವರ್ಷ ಉಳಿದು ತನ್ನ ಉಚ್ಚಭೂಮಿಕೆಯನ್ನು ತೋರ್ಪಡಿಸಿದನು. ಸಂಜೆಯ ವ್ಯಾಯಾಮದ ಕಾಲದಲ್ಲಿ ಹುಡುಗರನ್ನೆಲ್ಲ ಶಿಸ್ತಿನಿಂದಿಡುವುದು ಶ್ರೀಧರನ ಒಂದು ಕೆಲಸ. ಬೇನೆ ಬಿದ್ದವರಿಗೆ ಹಗಲು ರಾತ್ರಿ ನಿದ್ದೆ ನೀರಡಿಕೆಗಳನ್ನು ಎಣಿಸದೆ ಉಪಚರಿಸುವ ಸ್ವಯಂಸೇವಕನೆಂದರೆ ಶ್ರೀಧರನೇ. ಎಲ್ಲರೊಡನೆಯೂ ನಯವಿನಯ ಪ್ರೀತಿಗಳಿಂದ ಸೇರಿ ಬೆರೆಯುವದೂ ಎಲ್ಲರನ್ನೂ ತನ್ನ ಸ್ನೇಹದ ಅಳವಿನಲ್ಲಿ ಸಂಗ್ರಹಿಸುವದೂ

ಶ್ರೀಧರನ ಸೊಗಸಾದ ಇನ್ನೊಂದು ವೈಶಿಷ್ಟ್ಯ. ಈತನ ನಡತೆಯನ್ನು ಕಂಡು ಎಲ್ಲರೂ ಈತನಿಗೆ 'ಸ್ವಾಮಿ' ಎಂದು ಸಂಬೋಧಿಸಹತ್ತಿದರು. ರೋಗ ಪೀಡಿತರನ್ನು ಉಪಚರಿಸುತ್ತ ಯಾವಾಗಲೂ ಪರೋಪಕಾರ ಮಾಡುತ್ತ ಸಾಮೂಹಿಕ ಕಾರ್ಯಗಳಲ್ಲಿ ನಿರತನಾದುದರಿಂದ ಅಭ್ಯಾಸವು ಪೂರ್ಣವಾಗಿ ಸಾಗದ ಮೂಲಕ ಮುಂದಿನ ಪರೀಕ್ಷೆಯಲ್ಲಿ ವಿದ್ಯಾರ್ಥಿಗೃಹದ ನಿಯಮಗಳಿಗೆ ಅವಶ್ಯವಿದ್ದಷ್ಟು ಗುಣಗಳನ್ನು ಪಡೆಯುವದು ಶ್ರೀಧರನಿಗೆ ಸಾಧ್ಯವಾಗಲಿಲ್ಲ. ಸಂಸ್ಥೆಯ ನಿಯಮಕ್ಕೆ ತಪ್ಪಿ ಅಲ್ಲಿರುವುದೂ ಶ್ರೀಧರನ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಸದಾಶಿವಪೇಟೆಯ ನರಸಿಂಹ ದೇವಾಲಯದಲ್ಲಿ ಒಂದು ಕೋಣೆಯನ್ನು ತೆಗೆದುಕೊಂಡು ವಿದ್ಯಾರ್ಥಿ ಶ್ರೀಧರನು ಅಲ್ಲಿ ಹೋಗಿ ಇರಹತ್ತಿದನು.

ಮುಂದೆ ವಿದ್ಯಾರ್ಥಿ ಶ್ರೀಧರನು ಭಾವೇ ಪಾಠಶಾಲೆಯನ್ನು ಸೇರಿ ಇಂಗ್ಲಿಷ ಆರನೆಯ ಇಯತ್ತೆಯಲ್ಲಿ ಹೆಸರು ಹಚ್ಚಿಸಿಕೊಂಡನು. ಆಗ ಅವನ ಕಾರ್ಯಕ್ರಮಗಳು ಬಹುನಿಯಮಿತವಾಗಿ ಸಾಗಿದ್ದುವು. ಪ್ರಭಾತದಲ್ಲಿ ಏಳುವುದು, ಗೋಮಯ–ಮೃತ್ತಿಕೆಗಳಿಂದ ಕೈಕಾಲು ತಿಕ್ಕಿಕೊಂಡು ಮೂರು ಹೊತ್ತು ಸ್ನಾನಮಾಡುವದು, ಸಂಧ್ಯಾವಂದನಮಾಡಿ ಸೂರ್ಯ ನಮಸ್ಕಾರ ಹಾಕುವದು, ಮುಂತಾದುವನ್ನು ಅವನು ಎಂದೂ ತಪ್ಪಿಸುತ್ತಿರಲಿಲ್ಲ. ಆ ಬಳಿಕ ಅಭ್ಯಾಸಕ್ಕೆ ಕುಳಿತುಕೊಳ್ಳುವನು. ಕೆಲದಿನ ಊಟಕ್ಕಾಗಿ ಭೋಜನಾಲಯಕ್ಕೆ ಹೋಗುತ್ತಿದ್ದನು. ಊಟಮಾಡುವಾಗ ಮಡಿಯನ್ನು ಉಟ್ಟುಕೊಳ್ಳುತ್ತಿದ್ದನು. ಅಲ್ಲಿ ಬಂದ ಕೆಲವರು 'ಹಾಗೇಕೆ' ಎಂದು ಪ್ರಶ್ನಿಸಲು ಶ್ರೀಧರನು ಅಡಿಗೆ ಎಂಥದೇ ಆದರೂ ಊಟಮಾಡುವವನು ಮಡಿಯುಟ್ಟುಕೊಳ್ಳುವದರಿಂದ ಮನಸ್ಸು ಪರಿಶುದ್ಧವಾಗಿರುತ್ತದೆ, ಎಂದು ಉತ್ತರ ಕೊಡುವನು. ಕ್ರಮೇಣ, ಭೋಜನ ಗೃಹದ ಊಟವೂ ಶುಚಿಗೆ ಬಾಧಕವೆಂದು ಮನಗಂಡು, ಮಧುಕರಿಯು ಸರ್ವಶ್ರೇಷ್ಠವೆಂಬ ವಿಚಾರದಿಂದ ಶ್ರೀಧರನು ತನ್ನ ಜೀವನಕ್ಕೆ ಅದನ್ನೇ ಅವಲಂಬಿಸಬೇಕಾಯಿತು. ಆಗ ಜೋಗಳೇಕರರೆಂಬ ಒಬ್ಬ ಸದ್ಗೃಹಸ್ಥರು ಶ್ರೀಧರನ ಮೇಲಿನ ಪ್ರೀತಿಯಿಂದ ಪ್ರತಿದಿನ ತಮ್ಮಲ್ಲಿಗೆ ಊಟಕ್ಕೆ ಬರಲು ಆಗ್ರಹಮಾಡಹತ್ತಿದರು. ಆಗ ಶ್ರೀಧರನು "ಭಿಕ್ಷೌಷಧಂ ಭುಜ್ಯತಾಂ" ಎಂದು ಶ್ರೀ ಶಂಕರಾಚಾರ್ಯರ ಆಜ್ಞೆಯಿದೆ. "ಓಂ ಭವತಿ" ಎಂಬ ವಾಕ್ಯವನ್ನು ರಕ್ಷಿಸಬೇಕು. ಎಂದು ಉತ್ತರ ಕೊಟ್ಟನು.

ಜೋಗಳೇಕರರು ಅನುಕೂಲವಿದ್ದಾಗ ಭೀಕ್ಷೆಬೇಡುವದೇಕೆಂದು ಕೇಳಲು, ಅನುಕೂಲತೆಯಿದ್ದಾಗಲೂ ಅನುಕೂಲತೆಯನ್ನು ಅಪೇಕ್ಷಿಸದಿರುವದೇ ನಿಜವಾದ ವಿರಕ್ತಿಯ ಲಕ್ಷಣ ಎಂದು ಉತ್ತರಿಸಿದನು. ಜೋಗಳೇಕರರು ನಿರುಪಾಯರಾದರು. ವಿದ್ಯಾರ್ಥಿ ಶ್ರೀಧರನು ಅತ್ಯಂತ ದಯಾಳುವಾದ ಅಂತಃಕರಣಿ. ಅವನು ಯಾರ ದುಃಖವನ್ನೂ ಸಹಿಸಲಾರನು. ತನ್ನಲ್ಲಿದ್ದ ಅಲ್ಪಸ್ವಲ್ಪ ಹಣದಿಂದ ಪುಸ್ತಕವಿಲ್ಲದ ಬಡವಿದ್ಯಾರ್ಥಿಗಳಿಗೆ ಪುಸ್ತಕವನ್ನು ಕೊಡಿಸುವನು; ಬೇನೆಬಿದ್ದವರಿಗೆ ಔಷಧೋಪಚಾರಮಾಡುವನು; ಬಟ್ಟೆಯಿಲ್ಲದವರಿಗೆ ಸಾಧ್ಯವಾದಷ್ಟು ಬಟ್ಟೆ ತೆಗೆಸಿಕೊಡುವನು. ಇದಕ್ಕಾಗಿ ಹೆಚ್ಚು ಹಣದ ಅವಶ್ಯಕತೆಯುಂಟಾಗಲು ಶ್ರೀಧರನು ಶ್ರೀ. ಜೋಶಿ ಎಂಬವರ ಅಂಗಡಿಯಲ್ಲಿ ಕೆಲಸಕ್ಕೆ ನಿಂತು ತನ್ನ ಅಭ್ಯಾಸವನ್ನು ಮುಂದುವರಿಸಿದನು. ಒಂದು ಬಾರಿ ಕುಲಕರ್ಣಿಯೆಂಬ ಒಬ್ಬ ವಿದ್ಯಾರ್ಥಿಯು ಶ್ರೀಧರನ ಬಳಿಗೆ ಬಂದು "ನನಗೆ ನಿಮ್ಮ ಸಹಾಯವಾಗುವಂತಿದ್ದರೆ ಮಾತ್ರ ಈಸಲ ಪರೀಕ್ಷೆಯಲ್ಲಿ ಭಾಗವಹಿಸುತ್ತೇನೆ" ಎಂದನು. ಶ್ರೀಧರನು ಅಗತ್ಯವಾಗಿ ಸಹಾಯಮಾಡುತ್ತೇನೆ, ನಾನು ಮುಂದಿನ ವರ್ಷ ಪರೀಕ್ಷೆಗೆ ಕುಳಿತುಕೊಳ್ಳುವೆನು, ಎಂದು ತನ್ನ ಪುಸ್ತಕಗಳನ್ನೆಲ್ಲ ಅವನಿಗೆ ಕೊಟ್ಟುಬಿಟ್ಟನು. ಮುಂದೆ ಅವರಿಬ್ಬರೂ ಮಧುಕರಿಯನ್ನು ಅವಲಂಬಿಸಿದರು. ಕುಲಕರ್ಣಿಯ ಫೀಯನ್ನೂ ಶ್ರೀಧರನೇ ಕಟ್ಟಿದನು. ಕುಲಕರ್ಣಿಯು ಪರೀಕ್ಷೆಯಲ್ಲಿ ಯೋಗ್ಯರೀತಿಯಿಂದ ಉತ್ತೀರ್ಣನಾದನು. ಪರೋಪಕಾರಿಯಾದ ಶ್ರಿಧರನ ಲೌಕಿಕ ಪರೀಕ್ಷೆ ಹಿಂದೆ ತಡೆದು ನಿಂತಿತು; ಪರಮಾತ್ಮನ ಪರೀಕ್ಷೆಯ ಸಿದ್ಧತೆ ಮುಂದುವರಿಯಿತು.

ಆಗ ಪುಣೆಯಲ್ಲಿ ವಿದ್ಯಾರ್ಥಿಗಳನೇಕರು ಮಧುಕರಿಯಿಂದಲೇ ಜೀವಿಸುತ್ತಿದ್ದರು. ಆದ್ದರಿಂದ ಎಲ್ಲರಿಗೂ ಸಾಕಷ್ಟು ಮಧುಕರಿಯು ಸಿಗುತ್ತಿರಲಿಲ್ಲ. ಅದನ್ನು ಕಂಡು ಶ್ರೀಧರನ ಕೋಮಲಾಂತಃಕರಣವು ಕರಗುತ್ತಿದ್ದದರಿಂದ ಸ್ವತಃ ಊರೆಲ್ಲ ತಿರುಗಿ ತಂದ ಮಧುಕರಿಯನ್ನು ಅಂಥವರಲ್ಲಿ ಕೆಲವರಿಗೆ ಹಂಚಿಕೊಡುತ್ತಿದ್ದನು. ಮೂರು ನಾಲ್ಕು ಜನ ವಿದ್ಯಾರ್ಥಿಗಳು ಬಂದು ಶ್ರೀಧರನನ್ನು ಸೇರಿದರು. ಅವರ ಊಟ ಉಪಚಾರಗಳ ಕಡೆಗೆ ಹೆಚ್ಚು ಲಕ್ಷ್ಯಕೊಟ್ಟುದರಿಂದ ಶ್ರೀಧರನ ಅಭ್ಯಾಸವು ಮತ್ತಿಷ್ಟು ಹಿಂದೆ ಬಿದ್ದಿತು. ಈ ಮಾತು ಶ್ರೀಧರನ ಲಕ್ಷ್ಯಕ್ಕೆ ಬರಲಿಲ್ಲವೆಂತಲ್ಲ. ತನ್ನ ಪ್ರಗತಿ ಕುಂಠಿತ

ವಾದರೂ ಮಿತ್ರರ ಹಿತವನ್ನು ಬಯಸಿ ಸಂತೋಷದಿಂದ ತನ್ನ ಆ ಕಾರ್ಯ ಮುಂದುವರಿಸಿದನು.

ಯಾರಲ್ಲಾದರೂ ದುರ್ಗುಣಗಳು ಕಂಡುಬಂದರೆ, ಪ್ರಯತ್ನಪಟ್ಟು ವಿವೇಕದಿಂದ ಅವರನ್ನು ತಿದ್ದಬೇಕೆಂಬದು ಶ್ರೀಧರನ ಮತವಾಗಿದ್ದಿತು. ಎಷ್ಟೇ ಕೆಟ್ಟವರಾದರೂ ಅವರಿಂದ ತನಗೆ ಎಷ್ಟೇ ಕಷ್ಟವಾದರೂ ಅದನ್ನು ಲಕ್ಷ್ಯಕ್ಕೆ ತಾರದಿರುವದು ಶ್ರೀಧರನ ಸ್ವಾಭಾವ. ಮನುಷ್ಯನ ಅಂತರಂಗದ ದುರ್ಗುಣಗಳನ್ನು ಶಾಂತಿಸೌಜನ್ಯಗಳಿಂದ ದೂರವಾಡುವದೇ ಅವನಿಗೆ ನಾವು ಕೊಡುವ ಶಿಕ್ಷೆಯೆಂದು ಶ್ರೀಧರನ ಮತ. ಅವನ ಆದರ್ಶವೇ ಅಂತಹದು. ಅಪಾರ ಶಾಂತಿ ಸೌಜನ್ಯಗಳನ್ನು ಕಂಡು ದುರ್ಗಣಿಗಳಿಗೆ ತನ್ನಿಂದ ತಾನೇ ಲಜ್ಜೆಯುಂಟಾಗುವದು. ಮಧುಕರಿಗಾಗಿ ಮನೆಮನೆಗೆ ಹೋದಾಗ ಅನೇಕರು ತಮ್ಮ ಮನಸ್ಸಿಗೆ ಕಂಡಂತೆ ಎಷ್ಟೋ ತುಚ್ಛ ಮಾತುಗಳನ್ನಾಡುತ್ತಿದ್ದರು. “ಇವನು ಇಷ್ಟು ಧಾಂಡಿಗನಾಗಿದ್ದರೂ ಸುಮ್ಮನೆ ಮಧುಕರಿಗೆ ಬರುವನು. ಏನಾದರೂ ಉದ್ಯೋಗ ಮಾಡಬಾರದೆ?” ಎನ್ನುವರು ಕೆಲವರು.

ಶ್ರೀಧರನು ಪ್ರತಿದಿನವೂ ಒಬ್ಬ ಗೃಹಸ್ಥನ ಮನೆಯ ಮುಂದೆ ನಿಂತು “ಓಂ ಭವತಿ” ಎಂದು ಮುಂದೆ ಹೋಗುತ್ತಿದ್ದರು. ಆ ಮನೆಯ ಹೆಂಗಸು ತುಂಬ ಕರ್ಕಶೆ; ಶ್ರೀಧರನನ್ನು ಕಂಡೊಡನೆಯೆ ಆಕೆಯ ರಾಗ ಆರಂಭವಾಗುತ್ತಿದ್ದಿತು. ಆದರೂ ಅವನು ತನ್ನ ದಿನದ ಕೆಲಸವನ್ನು ನಿಲ್ಲಿಸಲಿಲ್ಲ. ಶಾಂತತೆಯಿಂದ ಅವಳ ಮಾತನ್ನು ಕೇಳಿ ಮುಂದರಿಯುತ್ತಿದ್ದನು. ಒಂದು ದಿನ ಮನೆಯ ಗೃಹಸ್ಥನು ತನ್ನ ಪತ್ನಿಯನ್ನು ಕುರಿತು “ನೀನು ಆ ಬಡ ವಿದ್ಯಾರ್ಥಿಯ ಮೇಲೆ ಸುಮ್ಮನೇಕೆ ರೇಗುವೆ? ನಿನ್ನ ಮಾತಿಗೆ ಅವನು ಒಂದು ದಿನವಾದರೂ ಪ್ರತ್ಯುತ್ತರವನ್ನು ಕೊಡಲಿಲ್ಲ. ಅವನ ಶಾಂತತೆಯ ಆಳವನ್ನೇನಾದರೂ ನೀನು ತಿಳಿದೆಯಾ? ಅವನಿಗೆ ಸಾಕಷ್ಟು ಮಧುಕರಿಯನ್ನು ಕೊಟ್ಟು ಕಳುಹಿಸು” ಎಂದು ಹೇಳಿದನು. ಹೆಂಗುಸಿನ ಬುದ್ಧಿಯಲ್ಲಿ ಬೆಳಕುಬಿದ್ದಿತು. ಶ್ರೀಧರನ ಸೌಜನ್ಯಪೂರ್ಣಮುಖವನ್ನು ನೆನೆದು, ಪತಿಯ ಮಾತು ನಿಜವೆಂದು ಆಕೆಗೆ ಅನಿಸಿತು. ಮಾರನೆಯ ದಿನದಿಂದ ಸಾಕಾಗುವಷ್ಟು ಮಧುಕರಿಯನ್ನು ನೀಡಲು ಆರಂಭಮಾಡಿದಳು. ಅಲ್ಲದೆ, “ನೀನು ಪ್ರತಿದಿನವೂ ಬರಬೇಕು. ನಿನಗೆ ಮಧುಕರಿಯನ್ನು ನೀಡದೆ ನಾನು

ಆಹಾರವನ್ನು ಸೇವಿಸುವುದಿಲ್ಲ.'' ಎಂದು ಆಗ್ರಹಮಾಡಿ ಅವನನ್ನು ಆದರದಿಂದ ಕಾಣಹತ್ತಿದಳು. ಸತ್ವಶಾಲಿಗಳ ದರ್ಶನಸಂಪರ್ಕಗಳಿಂದ ಆಗಬಹುದಾದ ಸತ್ಪರಿಣಾಮಕ್ಕೆ ಇದೊಂದು ನಿದರ್ಶನ.

ಶ್ರೀಧರನು ಬಾಲ್ಯದಿಂದಲೂ ವ್ಯಾಯಾಮಮಾಡುತ್ತಿದ್ದದರಿಂದ ಅವನ ದೇಹವು ಸದೃಢವಾಗಿದ್ದಿತು. ಒಮ್ಮೆ ದಾರಿಯಲ್ಲಿ ಅಕಾರಣವಾಗಿ ಸುಮಾರು ಹತ್ತು ಹನ್ನೆರಡು ಜನ ಪುಂಡರು ಇವನ ಮೇಲೆ ಬಿದ್ದು ಮನಸ್ಸಿಗೆ ತೋಚಿದಂತೆ ಮಾತನಾಡಲು ಆರಂಭಿಸಿದರು. ಶ್ರೀಧರನು ಗಾಬರಿಯಾಗಲಿಲ್ಲ. ಇದೇನೋ ದೈವಿಕವಿಚಿತ್ರವೆಂದು ಮಾತ್ರ ಭಾವಿಸಿಕೊಂಡನು;ಮತ್ತು ಅವರಿಗೆ "ನಾನು ಒಬ್ಬನೇ ಇದ್ದೇನೆ, ನೀವು ಹತ್ತು ಹನ್ನೆರಡು ಜನರು. ನೀವು ಇಬ್ಬಿಬ್ಬರಾಗಿ ಬಂದರೂ ನಿಮ್ಮೊಡನೆ ಕುಸ್ತಿಯಾಡಲು ಸಿದ್ಧನಿದ್ದೇನೆ'' ಎಂದು ಆಹ್ವಾನವಿತ್ತನು. ಆದರೆ ಅವರೆಲ್ಲಿ ಕೇಳಬೇಕು? ಮೇಲೆ ಬಿದ್ದು ಜಗಳತೆಗೆದು ಹೊಡೆಯುಹತ್ತಿದರು. ಅಷ್ಟರಲ್ಲಿ ಫೌಜದಾರನು ಬಂದು ಕಾರ್ಯಕಾರಣ ವಿಚಾರನಡಿಸಿ, ಪುಂಡರನ್ನೆಲ್ಲ ಶಿಕ್ಷಿಸಿ, ಶ್ರೀಧರನನ್ನು ಕಳುಹಿಕೊಟ್ಟನು.

ಶ್ರೀಧರನಿಗೆ ಧರ್ಮದಲ್ಲಿ ಆದರ ಬಹಳ.ಯಾವದಾದರೂ ಕಾರ್ಯದಲ್ಲಿ ನಿಯಮಿಸಿದರೆ, ಉಚ್ಚನೀಚಭಾವವೆಣಿಸದೆ, ಎಲ್ಲರೂ ಸರಿಸಮಾನವಾಗಿ ನಡೆಯಬೇಕು ಎಂದು ಅವನ ಮತ. ಉಚ್ಚನೀಚಭಾವದ ನಿಯಮವನ್ನೆಲ್ಲಿಯಾದರೂ ಕಲ್ಪಿಸಿದರೆ ಅದು ಇವನಿಗೆ ಅಸಹ್ಯವೆನಿಸುತ್ತಿದ್ದಿತು. ಒಮ್ಮೆ ಶ್ರೀಧರನು ಪುಣೆಯ ಪಶ್ಚಿಮಭಾಗದಲ್ಲಿರುವ ಪರ್ವತಿ ಎಂಬಲ್ಲಿಗೆ ತಿರುಗಾಡಲು ಹೋಗಿದ್ದನು. ಅಲ್ಲಿ ಒಬ್ಬ ಪಾರ್ಸಿಯು ಪಾದರಕ್ಷೆಯನ್ನು ತೆಗೆಯದೆ ದೇವರ ಬಳಿಯಲ್ಲೆಲ್ಲಾ ಹೋಗುತ್ತಿರುವದನ್ನು ನೋಡಿದನು. ಅದು ಸಹನವಾಗದೆ ಶ್ರೀಧರನು ಪಾರ್ಸಿಯನ್ನು ದೃಷ್ಟಿಸಿ ನೋಡಿ Get your self down, ಎಂದು ಗರ್ಜಿಸಿ, ಕೆಳಗಿಳಿಯಲು ಸೂಚಿಸಿದನು. ಪಾರ್ಸಿಯು ಗಾಬರಿಗೊಂಡು ಕೂಡಲೆ ಕೆಳಗಿಳಿದನು. ಅಷ್ಟರಲ್ಲಿ ಒಬ್ಬ ಮನುಷ್ಯನು ಮುಂದೆ ಬಂದು "ಚಿಂತೆಯಿಲ್ಲ, ಒಳಗಡೆ ಬರಬಹುದು." ಎಂದು ಪಾರ್ಸಿಯನ್ನು ಕರೆದನು. ಆ ಮಾತು ಶ್ರೀಧರನಿಗೆ ಕೇಳಿಸಿತು. "ಈಗ ನನ್ನ ಕೈಲಿ ಖಡ್ಗವಿರುತ್ತಿದ್ದರೆ ಮೊದಲು ನಿನ್ನ ಶಿರಚ್ಛೇದ ಮಾಡಿ ಬಳಿಕ ಬೇರೆಕೆಲಸಮಾಡುತ್ತಿದ್ದೆ. ಕೇವಲ ಹಣದ ವ್ಯಾಮೋಹಕ್ಕೆ ಬಲಿಯಾಗಿ ದೇವ-ಧರ್ಮಗಳನ್ನು ಅಲ್ಲಗಳೆಯುವ ನಿಮ್ಮ ಈ

ಜೀವನವು ಪಶುಸಮಾನವು. ನಿಮ್ಮಂತಹ ಸ್ವಾರ್ಥಿ ಅನಾಚಾರಿಗಳಿದ್ದುದರಿಂದಲೇ ಧರ್ಮಕ್ಕೆ ಇಷ್ಟು ಅವನತಿ ಪ್ರಾಪ್ತವಾಗಿರುವದು. ದೇವರ ಬಳಿ ಪಾದರಕ್ಷೆಯನ್ನು ಹಾಕಿಕೊಂಡು ಬರಕೂಡದೆಂಬ ನಿಯಮವನ್ನು ಮಾಡಿದವರೂ ನೀವೇ ಈಗ ಹಣದ ದುರಾಶೆಯಿಂದ ಅದಕ್ಕೆ ಆಸ್ಪದಕೊಡುತ್ತಿರುವವರೂ ನೀವೇ. ಇದಕ್ಕೆ ಬದಲು ಧರ್ಮದ ಅಭಿಮಾನವನ್ನು ಹಿಡಿದು ಪ್ರಾಣಬಿಟ್ಟರೆ ಪರಮೇಶ್ವರನಾದರೂ ಪ್ರಸನ್ನನಾಗುತ್ತಿದ್ದನು. " ಎಂದು ಅವರ ಮೇಲೆ ರೇಗಿದನು. ಆಗ ಪಾರ್ಸಿಯು ಪಾದರಕ್ಷೆಯನ್ನು ತೆಗೆದಿಟ್ಟು ಒಳಕ್ಕೆ ಹೋದನು.

ಧರ್ಮದ ಅವನತಿಯನ್ನು ಕಂಡು ಶ್ರೀಧರನ ಮನಸ್ಸು ಬಹಳ ಕಳವಳಗೊಳ್ಳುತ್ತಿದ್ದಿತು. ಅವನು ಅದಕ್ಕಾಗಿ ತುಂಬ ವ್ಯಥೆಪಡುತ್ತಿದ್ದನು. ಧರ್ಮೋತ್ಕರ್ಷಕ್ಕೆ ಹವಣಿಸದೆ ಇನ್ನೆಷ್ಟುದಿನ ಈ 'ರಟಪಟ' ವಿದ್ಯೆ ಕಲಿಯುವದು? ಎಂದು ಆಗಾಗ ಅವನ ಅಂತರ್ಮನವು ಪ್ರಶ್ನಿಸುತ್ತಿದ್ದಿತು. ಇಂತಿರುವಾಗ ತಪಸ್ಸಿಗೆ ಹೊರಡುವ ವಿಚಾರವು ಮನಸ್ಸಿನಲ್ಲೆಲ್ಲ ತುಂಬಿ ಲೌಕಿಕ ಓದಿನ ಕಡೆಗೆ ಲಕ್ಷ್ಯವೇ ಹೋಗುತ್ತಿರಲಿಲ್ಲ. ಅವನು ಯಾವಾಗಲೂ ಪರಮಾರ್ಥವಿಚಾರದಲ್ಲಿ ಮಗ್ನನಾಗಿರುತ್ತಿದ್ದನು. ತನ್ನ ಸ್ನೇಹಿತರಿಗೂ ಇತರ ಹುಡುಗರಿಗೂ ಧರ್ಮಸಾರಗಳನ್ನು ಬೋಧಿಸುತ್ತಿದ್ದನು. ನಿಜವಾದ ಸ್ಥಿತಿ ಹೀಗಿರುವಾಗ ಯಾರೋ ಇಬ್ಬರು ವಿದ್ಯಾರ್ಥಿಗಳು " ಶ್ರೀಧರನು ನೀತಿಭ್ರಷ್ಟನಾಗಿದ್ದು ತನ್ನ ನಡತೆಯನ್ನು ಮರೆಮಾಡುವದಕ್ಕೋಸ್ಕರ ಈ ತರಹದ ಬೂಟಾಟಿಕೆ ಮಾಡುತ್ತಿರುವನು. ತಾನು ಮಹಾಜ್ಞಾನಿಯೆಂಬಂತೆ ನಮಗೆ ಉಪದೇಶಿಸುವನು." ಎಂದು ಶಿಕ್ಷಕರಿಗೂ ತಿಳಿಯುವಹಾಗೆ ಸುಳ್ಳುಸುದ್ದಿಯನ್ನು ಹಬ್ಬಿಸಿದರು. ಈ ವಿಷಯವು ಒಬ್ಬ ಮಿತ್ರನ ಮುಖಾಂತರ ಶ್ರೀಧರನಿಗೆ ತಿಳಿಯಿತು. " ಆಗ ಅವನು ನನ್ನ ಅಂತಃಕರಣವು ಸಂಪೂರ್ಣ ಶುದ್ಧವಾಗಿದ್ದು ಲೋಕಕಲ್ಯಾಣಕ್ಕೋಸುಗ ಜೀವನವನ್ನು ಮೀಸಲಾಗಿಟ್ಟಿದ್ದರೂ ಈ ರೀತಿ ಅಪಪ್ರಚಾರವಾಗಲು ಕಾರಣವೇನಿರಬಹುದೆಂದು ಯೋಚಿಸುತ್ತ ನನ್ನಲ್ಲಿ ಯಾವದೋಷವಿರಬಹುದು, ಇಲ್ಲವಾದರೆ ಇಂತಹ ದುರ್ಘಟನೆಯೇಕೆ ಸಂಭವಿಸುತ್ತಿತ್ತು ? ಎಂದು ತನ್ನನ್ನೇ ತಾನು ಶೋಧಿಸಿಕೊಳ್ಳಹತ್ತಿದನು. ಆತ್ಮಸಂಶೋಧನೆ ಬೇಕು.

೬. ವಿದ್ಯಾರ್ಥಿ ಶ್ರೀಧರರು-ಪಾರಮಾರ್ಥ ಪಥದಲ್ಲಿ

ಶ್ರೀಧರರು ಈ ರೀತಿ ವಿವೇಚನೆಯಲ್ಲಿ ತೊಡಗಿದಾಗ—

'ಸಾಮರ್ಥ್ಯ ಆಹೇ ಚಳವಳೀಚೇ । ಜೋ ಜೋ ಕರೀಲ ತಯಾಚೇ
ಪರೀ ತೇಥೇ ಭಗವಂತಾಚೇ । ಅಧಿಷ್ಠಾನ ಪಾಹಿಜೇ'

ಎಂಬ ಸಮರ್ಥರ ವಚನವೊಂದು ಸಹಜವಾಗಿ ಅವರ ಲಕ್ಷ್ಯದಲ್ಲಿ ಬಂದಿತು. ಎಷ್ಟೇ ಬಲಿಷ್ಠನಾದರೂ ಭಗವಂತನ ಅಧಿಷ್ಠಾನವನ್ನು ಪಡೆಯದೆ, ಏನು ಮಾಡಲೂ ಸಾಧ್ಯವಿಲ್ಲವೆಂದು ಇದರ ತಾತ್ಪರ್ಯವು. ಈ ವಾಕ್ಯವು ಅಕಸ್ಮಾತ್ ಸ್ಮರಣೆಗೆ ಬಂದಕಾರಣ ತನಗೆ ಭಗವಂತನ ಅನುಗ್ರಹವಾಗಲು ಶ್ರೀಸಮರ್ಥರೇ ದಾರಿತೋರಿಸಬೇಕೆಂದು ನಿರ್ಧರಿಸಿದರು. ಕಠಿಣತರ ತಪಸ್ಸನ್ನಾಚರಿಸಿ ಪ್ರತ್ಯಕ್ಷ ಭಗವಂತನನ್ನು ಕಂಡು ಆತನನ್ನೇ ವಿಚಾರಿಸಿ, ಸತ್ಯಧರ್ಮದ ಪ್ರಭೆಯನ್ನು ಸರ್ವತ್ರ ಬೀರಬೇಕು. ಎಂದು ಕೊಂಡರು. ತಪಸ್ಸಿಗೆ ಹೋದಲ್ಲಿ ನಾನಾತರಹದ ಕಷ್ಟಗಳನ್ನು ಸಹಿಸಬೇಕಾಗುವದೆಂಬುದನ್ನರಿತು ಅವನ್ನೆದುರಿಸಲು ಮೊದಲಿನಿಂದಲೇ ಶ್ರೀಧರರ ಸಿದ್ಧತೆಯು ನಡೆದಿದ್ದಿತು. ಇಷ್ಟುದಿನ ಲೌಕಿಕ ವಿದ್ಯಾರ್ಥಿಯಾಗಿ ಅಲೆಯುತ್ತಿದ್ದ ಶ್ರೀಧರರ ಮನಸ್ಸು ಪರಮಾರ್ಥದ ಕಡೆಗೆ ತಿರುಗಿ ಅಂತರ್ಮುಖವಾಯಿತು. ಒಳಗಿನ ಆತ್ಮವು ಬೆಳಗಿ ಬೆಳಕು ಬಿದ್ದಿತು. ಆದ್ದರಿಂದ ನಾವು 'ಶ್ರೀಧರರು' ಎಂಬ ಗೌರವ ಸೂಚಕವಾಗಿಯೇ ಅವರನ್ನು ಸಂಬೋಧಿಸತೊಡಗಿದೆವು

ಶ್ರೀಧರರಿಗೆ ಪೇಡೆಯನ್ನು ತಿನ್ನುವ ಆಶೆ ಬಹಳ. ಒಂದೊಂದು ಸಲ ಒಂದು ಸೇರು (೮೦ ತೊಲ) ಪೇಡೆಯನ್ನಾದರೂ ಕೊಂಡುಕೊಂಡು ತಿಂದು ಬಿಡುತ್ತಿದ್ದರು. ಒಂದು ದಿನ ಅದೇನೋ ಕಾರಣದಿಂದ ಶ್ರೀಧರರು ಆ ಜಿಹ್ವಾಚಾಪಲ್ಯವನ್ನು ತೊಡೆದುಹಾಕಲು ನಿಶ್ಚಯಿಸಿದರು. ಆಗ ಅವರು ಒಂದು ಸೇರು ಪೇಡೆಯನ್ನುತಂದು ದೇವರಿಗೆ ನೈವೇದ್ಯಮಾಡಿ ಅದರಲ್ಲಿ ಅಷ್ಟೇ ಗೋಮಯವನ್ನು ಸೇರಿಸಿ ತಿನ್ನಲು ಆರಂಭಿಸಿದರು. ಅಂದಿನಿಂದ ಪೇಡೆಯನ್ನು ತಿನ್ನುವ ಆಶೆಯು ಸಂಪೂರ್ಣವಾಗಿ ತೊಲಗಿ ಹೋಯಿತು. ಹೀಗೆಯೇ ಹಣದ ವಿಷಯದಲ್ಲಿಯೂ ಮೋಹವುಂಟಾಗಕೂಡದೆಂದು ಶ್ರೀಧರರು ತಮ್ಮಲ್ಲಿದ್ದ ಅಲ್ಪಸ್ವಲ್ಪ ಹಣವನ್ನುಎಲ್ಲಿಯಾದರೂ ಇಟ್ಟು ಬಿಡಹತ್ತಿದರು. ಕೆಲವುಸಾರೆ

ಶ್ರೀ ರಾಮಕೃಷ್ಣ ಪರಮಹಂಸರು, ಹಣದ ಹೊನ್ನು
ಮಣ್ಣು ಒಂದೇ ಎಂದು ಗಂಗಾನದಿಗೆ ಬಿಸಾಡಿದ್ದರು

* ಮಣ್ಣು ಮತ್ತು ಹೊನ್ನು ಎರಡೂ ಒಂದೇ' ಎಂದು ಕೈಯೊಳಗಿನ ಹಣದ ಸಂಗಡ ಹಿಡಿತುಂಬ ಮಣ್ಣು ಕೂಡಿಸಿ ಎಲ್ಲಾದರೂ ಎಸೆದುಬಿಡುತ್ತಿದ್ದರು. ಶ್ರೀಧರರು ಮೆಟ್ರಿಕ್ ತರಗತಿಯಲ್ಲಿ ಓದುತ್ತಿರುವಾಗ ಒಂದು ಸಲ ಮಾಸಿಕ ಪರೀಕ್ಷೆಯಲ್ಲಿ "ವರ್ಣಾಶ್ರಮ ವಿಭಾಗಗಳು ಹೇಗೆ ನಿರ್ಮಿತವಾದವು ?" ಎಂದು ಪ್ರಶ್ನೆ ಕೇಳಲಾಗಿದ್ದಿತು. ಆಗ ಶ್ರೀಧರರು "ಚಾತುರ್ವರ್ಣ್ಯಂ ಮಯಾ ಸೃಷ್ಟಂ" "ಬ್ರಾಹ್ಮಣೋಸ್ಯ ಮುಖ ಮಾಸೀತ್" ಎಂಬ ಆಧಾರಗಳನ್ನು ತೆಗೆದುಕೊಂಡು ಒಂದು ಪ್ರಬಂಧವನ್ನೇ ಬರೆದರು. ಶಿಕ್ಷಕರಿಗೆ ಬಹಳ ಸಂತೋಷವಾಯಿತು. ಆದರೆ "ಇದು ಆಧುನಿಕ ಶಿಕ್ಷಣಪ್ರಣಾಲಿಯ ವಿಚಾರವಲ್ಲ. ಈ ರೀತಿ ಬರೆದರೆ ನೀನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಾರೆ" ಎಂದು ಸೂಚಿಸಿದರು. ಇವರ ಶಾಲೆಗೆ ಆಗಾಗ ಓರ್ವ ಪ್ರೊಫೆಸರರು ಬರುತ್ತಿದ್ದರು. ಅವರು ಬಹಳ ವಿದ್ವಾಂಸರು. ಅವರು ಶ್ರೀಧರರಿಗೆ "ಸಾಧ್ಯವಿದ್ದಮಟ್ಟಿಗೆ ಉಚ್ಚ ಧ್ಯೇಯವನ್ನಿಟ್ಟುಕೊಂಡು ಮುನ್ನಡೆಯಬೇಕು. ಒಂದುವೇಳೆ ಗುರಿಯು ಸಂಪೂರ್ಣಸಾಧಿಸದಿದ್ದರೂ ಸಾಮಾನ್ಯರಿಗಿಂತ ಶ್ರೇಷ್ಠನೆನಿಸಿಕೊಳ್ಳಬಹುದು." ಎಂದು ಉಪದೇಶಮಾಡಿದ್ದರು. ತಮ್ಮ ಶಿಕ್ಷಣಕಾಲದಲ್ಲೆಲ್ಲಾ ಆದೊಂದು ವಾಕ್ಯವು ಶ್ರೀಧರರಿಗೆ ಚೆನ್ನಾಗಿ ಮನದಟ್ಟಾಗಿದ್ದಿತು. ಆದರೆ ಆ ಪ್ರೊಫೆಸರರು ಜಾತಿನೀತಿಗಳನ್ನು ಮಾತ್ರ ಮನ್ನಿಸುತ್ತಿರಲಿಲ್ಲ. ಧರ್ಮವೆಂದರೆ ಅವರಿಗೆ ಆಗದ ಮಾತು. ಅವರ ಜಾತಿನೀತಿಗಳ ಭ್ರಷ್ಟತೆಯ ಮಾತು ಶ್ರೀಧರರ ಕಿವಿಗೆ ಬಿದ್ದಂದಿನಿಂದ ಅವರ ಮನಸ್ಸು ಮುರಿದಿತ್ತು. ಒಮ್ಮೆ ಶಾಲೆಯಲ್ಲಿ ನಡೆದ ಭಾಷಣದಲ್ಲಿ ಅವರು ಬ್ರಾಹ್ಮಣರ ನಿಂದೆಮಾಡಲು ಆರಭಿಸಿದರು. "ಬ್ರಾಹ್ಮಣರಿಂದಲೇ ಸಮಾಜದ ಅಧೋಗತಿಯಾಯಿತು. ಪೂರ್ವದಿಂದಲೂ ಅವರು ಸಂಕುಚಿತ ಬುದ್ಧಿಯು ಸ್ವಾರ್ಥಿಗಳಾಗಿದ್ದರು." ಎಂದು ಆಕ್ಷೇಪವೆತ್ತಿದರು. ಅಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳನೇಕರು ಇದ್ದರೂ ಅವರಿಗೇನೂ ಆ ಮಾತು ವಿಶೇಷವಾಗಿ ತೋರಲಿಲ್ಲ. ಆದರೆ ಶ್ರೀಧರರು ಅದು ತಮ್ಮ ವೈಯಕ್ತಿಕ ಅಪಮಾನವೆಂದು ಭಾವಿಸದೆ ಮುನಿಋಷಿಗಳೂ ಆರ್ಯ ವಂಶೀಯರೂ ಆದ ಶ್ರೇಷ್ಠಪುರುಷರ ಅಪಮಾನವಾಯಿತೆಂದು ತಿಳಿದು ಪ್ರೊಫೆಸರರ ಅಪ್ಪಣೆ ಪಡೆದು ಸಭೆಯಲ್ಲಿ ಮಾತನಾಡಲಾರಂಭಿಸಿದರು.

"ಪರಧರ್ಮೀಯರ ರಾಜಕೀಯ ವಾತಾವರಣದಿಂದ ಬ್ರಾಹ್ಮಣರ ವೇದ ವಿದ್ಯೆಗಳಿಗೆ ಪ್ರಾಶಸ್ತ್ಯ ಸಿಗದೆ, ಆಂಗ್ಲೇಯ ವಿದ್ಯಾಪ್ರವೀಣರಾಗಿ ನೀತಿಭ್ರಷ್ಟರಾದ ನಿಮಿತ್ತ ಧರ್ಮಾಭಿಮಾನ ಶೂನ್ಯರಾಗಿ, ಕೆಲವರು ಇಂತಹ ನಿಂದೆಗೆ ಪಾತ್ರರಾಗಿದ್ದಾರೆ. ಇನ್ನೂ ಕೆಲವರು ಬ್ರಾಹ್ಮಣರು ವೈಶ್ಯವೃತ್ತಿಯಿಂದ ಜೀವಿಸುತ್ತ ದ್ರವ್ಯಲೋಭಿಗಳಾಗಿ ನಿಮ್ಮಂತಹರ ಆಕ್ಷೇಪಕ್ಕೆ ಗುರಿಯಾಗಿದ್ದಾರೆ. ಈ ಮಾತು ಸತ್ಯ. ಬ್ರಾಹ್ಮಣಧರ್ಮದ ಮಹತ್ವವನ್ನು ಅರಿಯದ ಅಜ್ಞ ಜನರ ಉದಾಹರಣೆಯನ್ನು ಮುಂದೆ ಇಟ್ಟುಕೊಂಡು ಇಡಿ ಬ್ರಾಹ್ಮಣವರ್ಗವನ್ನೇ ನಿಂದಿಸುವದು ನಿರಾಧಾರದ ಮಾತು. ಬ್ರಾಹ್ಮಣರ ಪಾವಿತ್ರ್ಯವನ್ನರಿಯದೆ ಅನೇಕರು ಜಮೀನದಾರ ಜಹಗೀರದಾರರಾಗಿ ನಿಮ್ಮ ತಿರಸ್ಕಾರಕ್ಕೆ ಅವಕಾಶಕೊಟ್ಟಿರುವರು. ಇಷ್ಟರಿಂದಲೆ ಪವಿತ್ರ-ಪಾವನ ಋಷಿಮುನಿಗಳ ನಿಂದೆ ಮಾಡುವುದನ್ನು ಎಂದೂ ಸಹಿಸಲಾಗದು. ಸರ್ವಧರ್ಮ–ಸಮ್ಮೇಲನದಲ್ಲಿಯೂ ಕೂಡ ಸ್ವಾಮಿ ವಿವೇಕಾನಂದರು ಋಷಿಮುನಿಗಳ ಜಯಜಯಕಾರ ಮಾಡಿದರು. ಆ ಋಷಿ ಮುನಿಗಳು ಬ್ರಾಹ್ಮಣರಲ್ಲದೆ ಮತ್ತಾರೂ ಅಲ್ಲ. ಹಿಂದೂ ಎನ್ನಿಸಿಕೊಳ್ಳುವವರಿಗೆ ವೇದವು ಪ್ರಮಾಣವು. "ವೇದೋಽಖಿಲೋ ಖಿಲೋ ಧರ್ಮಮೂಲಂ" ನಮ್ಮ ಧರ್ಮಕ್ಕೆ ವೇದಧರ್ಮವೆನ್ನುವರು. ಯಾವುದರ ಮಹತ್ವವನ್ನರಿತು, ಅದರ ಪ್ರಭಾವವನ್ನು ಅಖಿಲ ವಿಶ್ವಕ್ಕೂ ಬೀರಬೇಕೆಂಬ ಉದ್ದೇಶದಿಂದ ಪರಧರ್ಮೀಯರೂ ಕೂಡ ಸಂಸ್ಕೃತ ಭಾಷೆಯಲ್ಲಿ ಪ್ರವೀಣತೆಯನ್ನು ಪಡೆದು ಅನೇಕ ಗ್ರಂಥಗಳನ್ನು ತಮ್ಮ ತಮ್ಮ ದೇಶೀಯ ಭಾಷೆಗಳಿಗೆ ಪರಿವರ್ತನ ಮಾಡುತ್ತಾರೆಯೋ ಆ ವೇದವನ್ನು ಈ ಬ್ರಾಹ್ಮಣ ಜಾತಿಯು ಇಂದಿನವರೆಗೂ ಕಾಪಾಡಿಕೊಂಡು ಬಂದಿರುವದು. ಭಾರತವು ಈ ಕಾಲದಲ್ಲಿಯೂ ಕೂಡ ಅದರ ಧನ್ಯತೆಗೋಸುಗ ಅಖಿಲ ವಿಶ್ವದಲ್ಲಿ ಹೆಸರು ಪಡೆದಿದೆ. ಭಾರತದ ಹೊರಗಿನ ಅಖಿಲ ಮಾನವರಿಗೆ ಅದರ ಯೋಗದಿಂದ ನಿಜವಾದ ಜೀವನಧ್ಯೇಯವು ದೊರಕಿತು. ಬ್ರಾಹ್ಮಣರಿಗೆ "ತಪೋಧನಾಃ" ಎಂಬ ವಿಶೇಷಣವಿರುವುದು. ತಪವೇ ಅವರ ಸಂಪತ್ತು. ಕಂದಮೂಲ ಫಲದ ಮೇಲೆಯೇ ಅವರ ಜೀವನವು ಸಾಗುತ್ತಿತ್ತು. ಅರಣ್ಯದ ಮಧ್ಯದಲ್ಲಿ ಪರ್ಣಕುಟೀರಗಳನ್ನು ಕಟ್ಟಿಕೊಂಡು ಜೀವನ ಮಾಡುತ್ತಿದ್ದರು. ಅವರ ಆಶ್ರಮಗಳಿಗೆ ಇರುವ "ಮಹಾಶಾಲಾಃ" ಎಂಬ ಬಿರುದನ್ನು ನೋಡಿ

ದರೆ ಅವುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಕಲಿಯು ಬರುತ್ತಿದ್ದರೆಂಬುದು ತಿಳಿದು ಬರುತ್ತದೆ. ವಿರಕ್ತಿ, ಪವಿತ್ರತೆ ಮತ್ತು ತಮ್ಮ ತಪಃಸಾಮರ್ಥ್ಯಗಳಿಂದ ಅವರು ಮದೋನ್ಮತ್ತ ಕ್ಷತ್ರಿಯರಿಗೂ ಕೂಡ ಪೂಜ್ಯರೆನಿಸಿಕೊಂಡಿದ್ದರು. ಅವರ ಸಾಮರ್ಥ್ಯದಿಂದ ಯಾರಿಗೂ ಏನೂ ಕಡಿಮೆಯಾಗುತ್ತಿರಲಿಲ್ಲ. ಬ್ರಾಹ್ಮಣರು ತ್ಯಾಗಮೂಲ ಧರ್ಮಶೀಲ ಪವಿತ್ರ ಆಚರಣೆಯಿಂದಲೂ ಯೋಗಾಭ್ಯಾಸ ಉಪಾಸನೆಗಳಿಂದಲೂ ಅಲೌಕಿಕ ಸಾಮರ್ಥ್ಯವನ್ನು ಪಡೆಯುತ್ತಿದ್ದರು. ಈ ಬ್ರಾಹ್ಮಣ ಸಮಾಜವು ಮಿಕ್ಕುಳಿದ ತ್ರಿವರ್ಣದವರನ್ನೂ ಇಹಪರಜೀವನಗಳ ಸಂಕಟಗಳಿಂದ ಪಾರುಮಾಡುತ್ತಿದ್ದಿತು. ಈ ವಿಷಯವಾಗಿ ಅನೇಕ ಉದಾಹರಣೆಗಳು ತೋರಿಬರುವವು. ಐಹಿಕ ಸುಖೋಪಭೋಗಕ್ಕೆ ತಿಲಾಂಜಲಿಕೊಟ್ಟು ಪರಾರ್ಥವೇ ಸ್ವಾರ್ಥವೆಂದುಕೊಂಡು ಮಹತ್ತರ ತಪಸ್ಸನ್ನಾಚರಿಸಿ ಸಂಪಾದಿಸಿದ ಸಾಮರ್ಥ್ಯದಿಂದ ಅಖಿಲ ಮಾನವ ಜನಾಂಗವನ್ನು ಉದ್ಧಾರಮಾಡುವ ಈ ಬ್ರಾಹ್ಮಣ ಜನಾಂಗವು ಸ್ವಾರ್ಥಯುತವಾಗಿರುವದು ಹೇಗೆ ತಾನೇ ಸಾಧ್ಯ?

“ಶಮೋದಮಃ ತಪಃ ಶೌಚಂ ಶಾಂತಿರಾರ್ಜವ ಮೇವ ಚ ||
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಕರ್ಮ ಸ್ವಭಾವಜಂ||

ಎಂಬ ಶ್ಲೋಕದಲ್ಲಿ ಬ್ರಾಹ್ಮಣರ ಯಾವ ಸ್ವಾರ್ಥಪರಾಯಣತೆಯು ಕಂಡು ಬರುತ್ತದೆ? ಈ ಬ್ರಾಹ್ಮಣರ ಗುಣಗಳಲ್ಲಿ ಸಮಾಜಕ್ಕೆ ಹಾನಿಯಾಗುವ ಯಾವ ವಿಚಾರವಿದೆ? “ಸ್ವೇ ಸ್ವೇ ಕರ್ಮಣ್ಯಭಿರತಃ” ಎಂಬಂತೆ ಆಗಿನ ಸಮಾಜ ಸ್ಥಿತಿಯಿದ್ದಿತು. ಬ್ರಾಹ್ಮಣರು ತನ್ನ ಕರ್ಮವನ್ನೇ ನಡೆಸುತ್ತಿದ್ದರು. ಎಂದ ಮೇಲೆ ಅದರಲ್ಲಿ ಅವರ ಸ್ವಾರ್ಥವೇನಿದೆ?

“ಬ್ರಾಹ್ಮಣ ಕ್ಷತ್ರಿಯ ವೈಶ್ಯಾಂ ಚ ಶೂದ್ರಾಣಾಂ ಚ ಪರಂತಪ
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವ ಪ್ರಭವೈ ಗುಣೈಃ”

ಸ್ವಾಭಾವಿಕವಾಗಿರುವ ಜಾತಿಗುಣಗಳ ಪ್ರಮಾಣದಿಂದ ಕರ್ಮದ ವಿಭಾಗವು ಪರಮಾತ್ಮನಿಂದಲೇ ಆಯಿತು. “ಚಾತುರ್ವರ್ಣ್ಯಂ ಮಯಾಸೃಷ್ಟಂ” ಎಂದು ಪರಮಾತ್ಮನೇ ಹೇಳಿರುವನು. ಬ್ರಾಹ್ಮಣರ ಉತ್ಪತ್ತಿಯು ಪರಮಾತ್ಮನ ಮುಖದಿಂದಲೇ ಆಗಿದೆಯೆಂಬುದರಿಂದ ಅವರ ವಾಣಿಯು ಶುದ್ಧವಾಗಿರುವದು. ಆದ್ದರಿಂದಲೇ ಅಧ್ಯಾಪನದ ಕೆಲಸವು ಬ್ರಾಹ್ಮಣರ ಕಡೆಗೆ ಬಂದಿತು.

ಉಪದೇಶವನ್ನು ಮುಖದಿಂದಲೇ ಮಾಡಬೇಕಾಗುತ್ತದೆ. ಭಗವಂತನ ಮೂಲಕಹೀಗೆ ಉಪದೇಶಮಾಡುವ ಪಾತ್ರತೆಯು ಸಹಜವಾಗಿ ಬ್ರಾಹ್ಮಣರ ಪಾಲಿಗೆ ಬಂದಿರುವದು. ಆದ್ದರಿಂದಲೇ "ವರ್ಣಾನಾಂ ಬ್ರಾಹ್ಮಣೋ ಗುರುಃ" ಎಂಬ ನಿಷ್ಕರ್ಷೆ ಸಮಾಜದಲ್ಲಿ ರೂಢವಾಯಿತು. ಅದಕ್ಕೆ ಬ್ರಾಹ್ಮಣರು ಏನು ಮಾಡಿಯಾರು? ದೊಡ್ಡ ಹೊಣೆಗಾರಿಕೆ ಹೊರುವುದು ಕಠಿಣ. "ಜಯಾ ಅಂಗೀ ಮೋಕ್ಷೇಪಣ, ತಯಾ ಯಾತನಾ ಕಠಿಣ" ಎಂಬಂತೆ ಹೊಣೆಗಾರಿಕೆಯನ್ನು ಹೊರುವುದು ಸಾಮಾನ್ಯದ ಮಾತಲ್ಲ. ಬ್ರಾಹ್ಮಣನಾಗುವುದಕ್ಕೋಸುಗ ವಿಶ್ವಾಮಿತ್ರನು ಎಷ್ಟು ಕಷ್ಟಪಟ್ಟು ಎಷ್ಟುಕಠೋರ ತಪಸ್ಸನ್ನಾಚರಿಸಿದನೆಂಬುದು ಪ್ರಸಿದ್ಧವಿದೆ. ಆ ಕಾಲದಲ್ಲಿ ಬ್ರಾಹ್ಮಣನಾಗುವುದೂ ಬ್ರಾಹ್ಮಣ್ಯವನ್ನು ಕಾದುಕೊಳ್ಳುವುದೂ ಸುಲಭವಾಗಿದ್ದಿದ್ದರೆ, 'ವರ್ಣಾನಾಂ ಬ್ರಾಹ್ಮಣೋಗುರು:' ಎಂಬ ಮಾತನ್ನು ಸಹಿಸಲಾರದವರೆಲ್ಲರೂ ಬ್ರಾಹ್ಮಣರಾಗುತ್ತಿದ್ದರು. ಬ್ರಾಹ್ಮಣರ ಆ ತಪಸ್ಸು ಇತರರಿಗೆ ದೊಡ್ಡ ಯಾತನೆಯೆಂದು ತೋರಿದ ಕಾರಣ ವಿಶ್ವಾಮಿತ್ರನ ಹೊರತು ಯಾರೂ ಬ್ರಾಹ್ಮಣರಾಗಲು ಧೈರ್ಯಪಡಲಿಲ್ಲ; ಸಾಹಸಮಾಡಲಿಲ್ಲ. ಆದ್ದರಿಂದ ಬ್ರಾಹ್ಮಣರು ಭೋಗಿಗಳೆಂದು ಸಿದ್ಧವಾಗಲಾರದು. "ಬ್ರಾಹ್ಮಣಸ್ಯ ಚ ದೇಹೋಯಂ ಕ್ಷುದ್ರಕಾಮಾಯ ನೇಷ್ಯತೇ" ಎಂಬ ಪ್ರಸಿದ್ಧ ವಚನವಿರುವದು. ಐಹಿಕ ಸುಖಕ್ಕೆ ಇವರು ಎಳಸುತ್ತಿರಲಿಲ್ಲ. ವಿಶ್ವಾಮಿತ್ರನು ತಪಸ್ಸಿನಿಂದಲೇ ಬ್ರಾಹ್ಮಣನಾದನೆಂದ ಮೇಲೆ ಬ್ರಾಹ್ಮಣ ಜನ್ಮವು ಬಂದು ಅದನ್ನು ಕಾಪಾಡಿಕೊಳ್ಳುವದು ಎಷ್ಟು ಕಠಿಣವೆಂದು ಗೊತ್ತಾಗುವದು. ಆ ಕಾಲದಲ್ಲಿ ಅಲೌಕಿಕ ಸಾಮರ್ಥ್ಯದಿಂದ ಜಗತ್ತನ್ನು ಸುರಕ್ಷಿತಗೊಳಿಸುವದು ಈ ಜಾತಿಯ ಕಾರ್ಯವಾಗಿದ್ದಿತು. ಎಂದ ಮೇಲೆ ಈ ಜಾತಿಯಿಂದ ಸಮಾಜವು ಹೇಗೆ ತೊಂದರೆಗೊಳಗಾದೀತು? ಇವರು ಅರಣ್ಯದಲ್ಲಿ ವಾಸಿಸುತ್ತಿದ್ದರಿಂದ ನಿಮ್ಮ ಪೂರ್ವಜರು ಮೂರ್ಖರಾಗಿದ್ದರೆಂಬ ಪಾಶ್ಚಿಮಾತ್ಯರ ಮಾತನ್ನು ನಂಬುವದು ಸ್ವಯಂ ಮೂರ್ಖತನದ್ದೇ ಆಗಿರುವುದು. ಶಿವಾಜಿಯು ಲೂಟಿಗಾರನಾಗಿದ್ದನೆಂದು ಹೇಳಿ ಪಾಶ್ಚಿಮಾತ್ಯರು ನಮ್ಮ ಜನರನ್ನು ಕೂಡ ತಮ್ಮ ಕಡೆಗೆ ಎಳೆದುಕೊಂಡಿದ್ದುದು ಆಶ್ಚರ್ಯವೇ ಸರಿ. ಅವರನ್ನೇ ದೇವರೆಂದು ಮನ್ನಿಸಿ ಅವರ ವಿಧಾನಗಳನ್ನೆಲ್ಲ ವಿಧಿವಾಕ್ಯಗಳೆಂದು ನಂಬಿ, ಇಂದಿನ ನಮ್ಮ ಸಮಾ

ಜವು ಸ್ವಾಭಿಮಾನಶೂನ್ಯವಾಗಿದೆ. ಆದರೂ ಇದನ್ನರಿತ ಮುಂದಿನ ಜನರು ಕೂಡ ಅವರ ವಿಚಾರ ಸರಣಿಯನ್ನು ಮನ್ನಿಸಿ ಅವರನ್ನೇ ಅನುಕರಣಮಾಡಲು ಉದ್ಯುಕ್ತರಾದರೆ ಭಾರತದ ಸಂಸ್ಕೃತಿಯು ಮುಂದೇನಾಗಬಹುದು ?" ಎಂದು ಶ್ರೀಧರರ ಭಾಷಣ ಪ್ರಾರಂಭವಾಗಿದ್ದಿತು. 'ಏನು ಹೇಳುತ್ತಾನೆ ನೋಡೋಣ' ಎಂದು ಪ್ರೊಫೆಸರರು ಮೊದಲು ಸುಮ್ಮನಿದ್ದರು. ಭಾಷಣವು ಮುಂದೆ ಸಾಗಿರುವಾಗ ಮಾತ್ರ ಶ್ರೀಧರರ ಮಾತುಗಳ ಬಿರುಗಾಳಿಯನ್ನು ತಾಳಲಾರದೆ ಅವರು ನೀನು ಬ್ರಾಹ್ಮಣನಾದುದರಿಂದಲೇ ನಿನಗೆ ಆ ಜಾತಿಯ ಅಭಿಮಾನ ವಿರಲು ಸಾಧ್ಯವಾಯಿತು ಎಂದರು.

ಆಗ ಶ್ರೀಧರನು " ಶುದ್ಧ ಬೀಜಾ ಪೋಟಿ। ಫಳ ರಸಾಳ ಗೋಮಟೀ " ಎಂಬ ಸಂತತುಕಾರಾಮರ ವಾಕ್ಯದಂತೆ ಬ್ರಾಹ್ಮಣ ಬಾಲಕನಿಗೆ ಅದರ ಅಭಿಮಾನವಿರಲೇಬೇಕು. ಯಾರ ಕ್ಷೇತ್ರ ಮತ್ತು ಬೀಜ ಉತ್ತಮವಾಗಿರುವದಿಲ್ಲವೋ ಅವರಿಗೆ ಮಾತ್ರ ತನ್ನ ಜಾತಿಯ ಅಭಿಮಾನವಿರಲು ಸಾಧ್ಯವಿಲ್ಲ, ಎಂದು ಶ್ರೀಧರರ ಉತ್ತರ ಬಂದಿತು ಪ್ರೊಫೆಸರರು ಬ್ರಾಹ್ಮಣರಾದುದದಿಂದ ಇವರ ಉತ್ತರವು ಚನ್ನಾಗಿ ನಾಟಿತು. ಶಿಕ್ಷಕರ ಎದುರಿಗೆ ಈ ರೀತಿ ವಾದಿಸುವದು ಯೋಗ್ಯವಲ್ಲವೆಂದು ಪ್ರೊಫೆಸರರು ಕೋಪಿಸಿದರು. ಆಗ ಶ್ರೀಧರರು ಶಿಕ್ಷಕರೆಂದು ಅವರ ಅಯೋಗ್ಯವರ್ತನವನ್ನು ಕಲಿಯುವದು ಮತ್ತು ಅವರು ಮಾಡುವ ನಿರಾಧಾರ ವಿಧಾನಗಳನ್ನು ಮನ್ನಿಸುವದು ಎಲ್ಲಿಯೂ ಇರುವದಿಲ್ಲ.

ವೇದಾಂತದಲ್ಲಿಕೂಡ– **" ಯಾನ್ಯಸ್ಮಾಕಂ ಸುಚರಿತಾನಿ ತಾನಿತ್ವಯೋ ಪಾಸ್ಯಾನಿ। ನೋ ಇತರಾಣಿ।** " ಎಂದು ಉಪಾಧ್ಯಾಯರು ಶಿಷ್ಯರಿಗೆ ಹೇಳುತ್ತಿದ್ದರು. **" ಯೋವೈ ಯುವಾಪ್ಯಧೀಯಾನಃ ತಂ ದೇವಾಃ ಸ್ಥವಿರಂ ವಿದುಃ " "ಗುಣಾಃ ಪೂಜಾಸ್ಥಾನಂ.... "** ಎಂದೂ ಅವರು ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದರು. ಆ ಕಾಲದಲ್ಲಿ ಕೂಡ ಸುಮ್ಮನೆ ಅಧಿಕಾರಕ್ಕೋಸ್ಕರ ಶ್ರೇಷ್ಠತೆಯನ್ನು ಕೊಡಲು ಯಾರೂ ಹೇಳಿರುವದಿಲ್ಲ. " ಶತ್ರೋರಪಿ ಗುಣಾ ವಾಚ್ಯಾ ದೋಷಾ ವಾಚ್ಯಾ ಗುರೋರಪಿ ॥ ಯುಕ್ತಿ ಯುಕ್ತವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ ॥ ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ॥ ಅಪಾರ್ಥ ಪ್ರತಿಪನ್ನಸ್ಯ ನ್ಯಾಯ್ಯಂ ಭವತಿ

* "ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವ

ಅಲ್ಲಿಯ ವಾತಾವರಣಕ್ಕನುಗುಣವಾಗಿ ಅಲ್ಲಿಯೂ ಜನರಿರುವರು. ಪಾಶ್ಚಿಮಾತ್ಯರನ್ನೂ ನಿಗ್ರೋಗಳನ್ನೂ ಹೋಲಿಸಿ ನೋಡಿದರೆ ನಮಗೆ ಈ ಮಾತು ಗೊತ್ತಾಗುವುದು. ಯಾಜ್ಞವಲ್ಕ್ಯನಿಗೆ ಸೂರ್ಯನಾರಾಯಣನಿಂದಲೇ ವೇದವು ದೊರಕಿತು. ಅದಕ್ಕೆ ಶುಕ್ಲಯಜುರ್ವೇದವೆನ್ನುವರು. ನಮ್ಮವರು ಚಂದ್ರನನ್ನು ಸಹ ದೇವತೆಯೆಂದು ಮನ್ನಿಸುತ್ತಾರೆ ಆಯಾ ದೇವತೆಯ ಉಪಾಸನೆಯಿಂದ ಆಯಾದೇವತೆ ಪ್ರತ್ಯಕ್ಷವಾಗುವ ಉದಾಹರಣೆಯು ಅನೇಕ ಕಡೆಗಳಲ್ಲಿ ಕಂಡುಬರುವದು. ಮನುಷ್ಯನು ಇಚ್ಛೆಗೆ ಅನುಸಾರವಾಗಿ ಕರ್ಮ ಮಾಡಿದರೆ ಅದಕ್ಕೆ ಪ್ರತಿಫಲ ಪಡೆಯುತ್ತಾನೆ. ನಿರ್ವಿಷಯದಲ್ಲಿ ಮನಸ್ಸುಳ್ಳವನಾದರೆ ನಿಷ್ಕಾಮನಾಗಿ ಪರಮಾತ್ಮನ ನಿಜರೂಪದಲ್ಲಿ ಲೀನನಾಗುವನು. ಅವನಿಗೆ ಪುನಃ ಜನನ ಮರಣಗಳಾಗುವದಿಲ್ಲ.

ನಿಜವಾದ ವಿಚಾರವನ್ನು ತಿಳಿದುಕೊಳ್ಳದೆ ಪಾರ್ಶಿಗಳು ವಾನರರು ಎಂದು ಹೇಳಿದರ್ಸುಮ್ಮನಾಗುವರು. ಮತ್ತು ತಮ್ಮ ಅವಿವೇಕದಿಂದ ಅವರ ನೀತಿಯನ್ನೇ ಅನುಸರಿಸಿ ನಡೆದು ಅವಿವೇಕಿಗಳೇ ಆಗುವರು. ವಿಷಯೋಪಭೋಗ ರಚನೆಯಲ್ಲಿಯೇ ಕಾಲವನ್ನು ತಳ್ಳುವರು. ಅದಕ್ಕೆ ತಕ್ಕರೀತಿಯಲ್ಲಿಯೇ ಪರಮಾತ್ಮನು ಅವರನ್ನು ಶಿಕ್ಷಿಸುವನು. ಆದ್ದರಿಂದಲೇ ಶಾಸ್ತ್ರವಿಧಿಗಳನ್ನು ಪಾಲಿಸಬೇಕೆಂದು ಹಿರಿಯರು ಹೇಳಿರುವರು. ಅದನ್ನು ಮೀರಿದರೆ ಅದಕ್ಕೆ ತಕ್ಕ ಶಿಕ್ಷೆ ದೊರಕುವದು. "ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ । ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ" ಎಂದು ಗೀತಾಭಿಪ್ರಾಯವಿದೆ. ಶಾಸ್ತ್ರಾಧಾರದಂತೆ ಸಪ್ತಪಾತಾಳ ಸ್ವರ್ಗಲೋಕ ನಾಗಲೋಕಗಳೆಲ್ಲವೂ ಇರುವವು. ನಾಗಲೋಕದಲ್ಲಿ ಸರ್ಪಗಳು ಮಾತ್ರ ವಾಸಿಸುವವು.

ರಾಮಾವತಾರವಾಗಲಿಲ್ಲವೆನ್ನುವದು ಮೂರ್ಖತನದ ಮಾತು. ನಮ್ಮ ತಾತ ಮುತ್ತಾತಂದಿರು ಈಗ ಜೀವದಿಂದ ಇಲ್ಲವೆಂಬ ಕಾರಣದಿಂದ ಅವರು ಹುಟ್ಟಲೇ ಇಲ್ಲವೆನ್ನುವದು ಸಾಧ್ಯವಲ್ಲ. ಆದ್ದರಿಂದ ಪುರಾಣ ಇತಿಹಾಸಗಳಲ್ಲಿ ವರ್ಣಿಸಿರುವ ವಿಷಯವು ಸತ್ಯವಾಗಿದೆ. ಶ್ರೀರಾಮನು ತಾನು ಹೋದ ಸ್ಥಳಗಳಲ್ಲೆಲ್ಲಾ ಲಿಂಗಗಳನ್ನು ಸ್ಥಾಪಿಸಿರುವನು. ಅವುಗಳನ್ನು ರಾಮಲಿಂಗಗಳೆಂದು ಹೇಳುವರು. ಅಯೋಧ್ಯಾ, ಪಂಚವಟೀ, ಪಂಪಾ, ರಾಮೇಶ್ವರ, ಸೇತು ಮುಂತಾದ ಸ್ಥಳಗಳಲ್ಲೆಲ್ಲಾ ಈ ರಾಮಲಿಂಗಗಳಿರುವುವು. ತೀರ್ಥಾಟನ

ನೋಡಿದ ಯಾತ್ರಿಕರಿಗೆ ಈ ಮಾತು ಗೊತ್ತಾಗುವುದು. ಇವೆಲ್ಲವೂ ಗ್ರೀಕ ರಾಜನ ಸ್ಮಾರಕಗಳೆನ್ನಬೇಕೆ ? ಎಂದು ಪ್ರಶ್ನಿಸಬೇಕಾಗುತ್ತದೆ. ಆಗಿನ ಕಾಲ ದಲ್ಲಿದ್ದ ವಶಿಷ್ಠ ವಿಶ್ವಾಮಿತ್ರ ಮೊದಲಾದವರನ್ನು ಯಾರೆಂದು ಹೇಳಬೇಕು ? ಮಾರುತಿಯೆಲ್ಲಿಂದ ಬಂದನು ? ಎಂಬ ವಿಷಯಗಳನ್ನೆಲ್ಲ ಯೋಚಿಸಬೇಕಾಗುತ್ತದೆ. ಅವರೆಲ್ಲರೂ ನಮ್ಮ ಪುಣ್ಯಶೀಲ ಭಾರತಭೂಮಿಯಲ್ಲಿ ಜನಿಸಿದವರೇ ಆಗಿದ್ದರು. ದೇವ, ಗಂಧರ್ವ, ಸೂರ್ಯ, ಚಂದ್ರ, ರಾಹು,ಕೇತು, ಪಿಶಾಚ, ರಾಕ್ಷಸ ಇವರೆಲ್ಲರೂ ಇರುವರು. ದೇವತೆಗಳಿಗೂ ರಾಕ್ಷಸರಿಗೂ ಯುದ್ಧ ವಾಗುತ್ತಲೇ ಇರುತ್ತಿದ್ದಿತು. ಸತ್ಯದ ಬಲದಿಂದ ದೇವತೆಗಳು ಗೆಲ್ಲುತ್ತಿದ್ದರು. ಈಯೆಲ್ಲಾ ಕಾರಣಗಳಿಂದಲೂ ಪೂರ್ವಜರು ಹೇಳಿದ ಯಾವ ವಿಚಾರದ ಲ್ಲಿಯೂ ಸಂಶಯವಿರಕೂಡದು" ಎಂದು ಹೇಳಿ ಸ್ನೇಹಿತನನ್ನು ಶ್ರೀಧರರು ಸಮಾಧಾನ ಪಡಿಸಿದರು.

ಒಂದು ಸಾರೆ ಕೆಲವು ಮಿತ್ರರು ಸೇರಿ "ನೀನು ವೇದಾಂತ ವಿಚಾರ ವನ್ನೇ ಮಾತನಾಡುವಾಗ ತಕ್ಷಣ ಸನಾತನಧರ್ಮದಲ್ಲಿ ಅಭಿಮಾನ ಹೊಂದಲು ಕಾರಣವೇನು ?" ಎಂದು ಕೇಳಿದರು. ಆಗ ಶ್ರೀಧರರು ನನಗೆ ಸನಾತನಧರ್ಮದಲ್ಲಿ ಅಭಿಮಾನವಿದೆಯೆನ್ನುವ ಬದಲು ವಿಶ್ವವ್ಯಾಪಿ ಸತ್ಯ ಮಾರ್ಗದ ಅಭಿಮಾನವಿದೆಯೆಂದರೆ ತಪ್ಪಾಗಲಾರದು. ವಿಶ್ವಕಲ್ಯಾಣದ ಧರ್ಮವಿನ್ನಾವುದಾದರೂ ಇದ್ದರೆ ಖಂಡಿತ ಅದನ್ನುನಾನು ಸ್ವೀಕರಿಸಬಲ್ಲೆನು. ಆದರೆ ಜಗತ್ತನ್ನು ಉದ್ಧರಿಸುವ ಪೂರ್ಣ ತತ್ವಗಳಿಂದ ಕೂಡಿದ ಧರ್ಮ ವೆಂದರೆ ಸನಾತನಧರ್ಮವು; ಆದ್ದರಿಂದಲೆ ನನಗೆ ಅದರಲ್ಲಿ ಅಷ್ಟು ಅಭಿ ಮಾನವು,ಎಂದು ಉತ್ತರಕೊಟ್ಟರು. ಆಗ ಶಾಲೆಗೆ ಬಿಡುವಿದ್ದಿತು.ಗೋಮಯ ಮೃತ್ತಿಕೆಗಳಿಂದ ವೈತಿಕ್ಕಿ ಶ್ರೀಧರರು ತ್ರಿಕಾಲಸ್ನಾನ ನಡೆಸಿದ್ದರು. ಅವರು ಯಾವಾಗಲೂ ಮಡಿಯಲ್ಲಿಯೇ ಇರುತ್ತಿದ್ದರು. ಯಾರೊಡನೆಯೂ ವಿಶೇಷವಾಗಿ ಮಾತನಾಡುತ್ತಿರಲಿಲ್ಲ. ಕಾಲವನ್ನೆಲ್ಲ ಅನುಷ್ಠಾನದಲ್ಲಿಯೇ ಕಳೆಯುತ್ತಿದ್ದರು.

ಇವರ ಈ ಆಚರಣೆಯು ಪಳ್ಣಿಟಕರ್ ಎಂಬವರನ್ನು ಆಕರ್ಷಿಸಿತು. ಶ್ರೀ ಪಳ್ಣಿಟಕರರು ನೈಷ್ಠಿಕ ಬ್ರಹ್ಮಚಾರಿಯಾಗಿದ್ದು ಮಹತ್ವಾಕಾಂಕ್ಷೆಯುಳ್ಳ ವರು. ಅವರು ಧರ್ಮದ ಮೇಲೆ ಉಜ್ವಲ ಅಭಿಮಾನವುಳ್ಳವರು. ಅವರು

ಬಡವಿದ್ಯಾರ್ಥಿಗಳನೇಕರಿಗೆ ಆಶ್ರಯಕೊಟ್ಟು ಅನುಕೂಲತೆ ಮಾಡಿಕೊಡುತ್ತಿದ್ದರು. ಅವರು ವ್ಯಾಯಾಮ ಶಾಲೆಯ ಶಿಕ್ಷಕರೂ ಆಗಿದ್ದರು. ಒಂದು ದಿನ ಮಧ್ಯಾಹ್ನ ಶ್ರೀಧರರು ನದಿಯ ಬುಡದಲ್ಲಿ ಸ್ನಾನಮಾಡುತ್ತಿರುವಾಗ "ಇಷ್ಟೊಂದು ಧರ್ಮಾಚರಣೆಯ ವಿದ್ಯಾರ್ಥಿಯನ್ನು ಈ ದಿನವೇ ನಾನು ನೋಡುತ್ತಿದ್ದೇನೆ; ನಾನು ನಿಮ್ಮ ಕೋಣೆಗೆ ಬರುವೆನು. ನಿಮ್ಮಲ್ಲಿ ಸ್ವಲ್ಪ ಮಾತಾಡಬೇಕು." ಎಂದು ಶ್ರೀಧರರಿಗೆ ಹೇಳಿದರು. ಹಾಗೆಯೇ ಒಂದು ದಿನ ಶ್ರೀಧರರ ಬಳಿಗೆ ಬಂದರು. ಮತ್ತು ಆಪ್ತಬಂಧುವಿನಂತೆ ಪ್ರೇಮಲವಾಗಿ ಮಾತನಾಡಿ ಶ್ರೀಧರರ ಅಂತರಂಗವನ್ನು ತಿಳಿದುಕೊಂಡರು. ಶ್ರೀಧರರಿಗೆ ದೇವರ ಮೇಲಿರುವ ವಿಶ್ವಾಸ,ಧರ್ಮದ ಮೇಲಿನನಿಷ್ಠೆ, ಇತ್ತೀಚೆ ಆದ ಧರ್ಮಗ್ಲಾನಿಯ ವಿಷಯದಲ್ಲಿ ತಳಮಳ ಇವೆಲ್ಲವನ್ನು ನೋಡಿ ಪಳ್ಣಿಟಕರರಿಗೆ ತುಂಬ ಆನಂದವಾಯಿತು. ಅನಂತರ ತಪಶ್ಚರ್ಯದ ವಿಷಯವಾಗಿ ಮಾತನಾಡುತ್ತ, ನಿಮಗೆ ಈ ಕಡೆಗೆ ಎಲ್ಲಿಯಾದರೂ ತಪಸ್ಸಿಗನುಕೂಲವಾದ ಸ್ಥಳವು ಕಂಡುಬರುತ್ತಿದೆಯೆ ? ಎಂದು ಶ್ರೀಧರರು ಪಳ್ಣಿಟಕರರನ್ನು ಕೇಳಿದರು.ಅವರು "ಬೇಕಾದಷ್ಟು ಸ್ಥಳಗಳಿವೆ.ಅವುಗಳಲ್ಲಿ ಶ್ರೀ ಸಮರ್ಥರ ಸನ್ನಿಧಿಯಾದ ಸಜ್ಜನಗಡವು ಉತ್ಕೃಷ್ಟವಾಗಿರುವುದು" ಎಂದರು. ಮುಂಚಿನಿಂದಲೂ ಶ್ರೀ ಸಮರ್ಥರಲ್ಲಿ ಆದರ ಭಾವವುಳ್ಳ ಶ್ರೀಧರರಿಗೆ ಆ ಸ್ಥಳದ ಹೆಸರನ್ನು ಕೇಳಿದ ಕ್ಷಣವೆ ಆಕರ್ಷಣವು ಅಧಿಕವಾಗಿ ಪರೀಕ್ಷೆಯನಂತರ ಸಜ್ಜನಗಡದ ದಾರಿಯನ್ನು ಹಿಡಿಯಬೇಕೆಂದು ನಿಶ್ಚಯಿಸಿದರು. ಮತ್ತು ಶ್ರೀ ಪಳ್ಣಿಟಕರರಿಗೂ ಅದನ್ನು ತಿಳಿಸಿದರು. "ತಪಸ್ಸಿಗೆ ಹೋಗುವದಾದರೆ, ಪರೀಕ್ಷೆಯಿಂದಾಗುವ ಪ್ರಯೋಜನವೇನು ? ನೌಕರಿಮಾಡುವ ಇಚ್ಛೆಯಿಲ್ಲದಿರುವಾಗ ವಿನಾಕಾರಣ ವೇಳೆಗಳೆಯುವುದು ಉಚಿತವಲ್ಲ. ಹೋಗುವದಾದರೆ ಈಗಲೇ ಹೊರಡುವುದು ವಿಹಿತ" ಎಂದರು, ಪಳ್ಣಿಟಕರರು. ಶ್ರೀಧರರಿಗೆ ಆ ಮಾತು ರುಚಿಸಿತು. ಅದಷ್ಟು ಬೇಗಹೊರಡುವ ಸಿದ್ಧತೆಯಲ್ಲಿ ಮಗ್ನರಾದರು.

---

೭. ಪಾರಮಾರ್ಥಿಕ ಪಥದಲ್ಲಿ ಮುನ್ನಡೆ

ಆಶ್ವಿನಮಾಸ ಪ್ರಾರಂಭವಾಯಿತು. ತಪಸ್ಸಿಗೆ ಹೊರಡುವ ಉತ್ಕಟೇಚ್ಛೆಯು ಶ್ರೀಧರರ ಹೃದಯದಲ್ಲಿ ತುಂಬಿತು. ತಮ್ಮ ಸೊತ್ತಿಗೆ ಸಂಬಂಧಿಸಿದ ಕೆಲವು ಕಾಗದಪತ್ರಗಳನ್ನು ಶ್ರೀಧರರು ಪಣ್ಣಿಟಕರಿಗೆ ತೋರಿಸಿ, "ಇವುಗಳನ್ನು ನೀವು ವಹಿಸಿಕೊಂಡು ಇವುಗಳಿಂದ ಬರುವ ಹಣವನ್ನು ಬಡವಿದ್ಯಾರ್ಥಿಗಳಿಗೆ ವಿನಿಯೋಗಿಸಿರಿ" ಎಂದರು. ಆಗ ಪಣ್ಣಿಟಕರರು "ನೀವು ತಪಸ್ಸಿಗೆ ಹೊರಡಲು ನಿಶ್ಚಯಿಸಿರುವಾಗ ಹಣದ ವಿಚಾರವೇಕೆ? ಪಾರಮಾರ್ಥಿಕರಿಗೆ ಹಣದ ವಿಷಯದಲ್ಲಿ ಆಸಕ್ತಿಯಿರಕೂಡದು." ಎಂದು ವಿನೋದ ಮಾಡಿದರು. ಹಾಗಾದರೆ ಏನು ಮಾಡಬೇಕೆಂದು ಶ್ರೀಧರರು ಕೇಳಲು ಪಣ್ಣಿಟಕರರು ಅವರ ನಿಶ್ಚಯವನ್ನು ಒರೆಗೆ ಹಚ್ಚುವುದಕ್ಕಾಗಿ "ಈ ಕಾಲುವೆಯಲ್ಲಿ ಎಸೆದುಬಿಡಿ" ಎಂದು ಹೇಳಿದರು. ಶ್ರೀಧರರು ಹಿಂದೆಮುಂದೆ ನೋಡಲೇ ಇಲ್ಲ. ಕಾಗದ ಪತ್ರಗಳನ್ನೆಲ್ಲ ಕಾಲುವೆಯಲ್ಲಿ ಎಸೆದೇಬಿಟ್ಟರು. ಅವರ ಸ್ಥೈರ್ಯವನ್ನು ಕಂಡು ಪಣ್ಣಿಟಕರಿಗೆ ಅತ್ಯಾನಂದವಾಯಿತು.

ಶ್ರೀಧರರು ತಪಸ್ಸಿಗೆ ಹೊರಡುವ ತಮ್ಮ ವಿಚಾರವನ್ನು ಗೆಳೆಯರಿಗೆಲ್ಲ ತಿಳಿಸಿದರು. ಅವರಿಗೆಲ್ಲ ವಿರೋಧಾಭಾಸವೆನಿಸಿ "ಶ್ರೀಧರ, ನೀವು ದೊಡ್ಡ ತಪಸ್ವಿಗಳಾಗಿ ಪರಮಹಂಸರಾಗುವವರಿದ್ದೀರಿ. ಆ ಮೇಲೆ ನಮ್ಮನ್ನು ಮಾತಾಡಿಸುತ್ತೀರೋ ಇಲ್ಲವೋ! ಆಗ ನಮ್ಮ ಜ್ಞಾಪಕವಾದರೂ ನಿಮಗೆ ಆಗುವದೋ ಇಲ್ಲವೋ ತಿಳಿಯದು." ಎಂದು ಪರಿಹಾಸಗೈದರು. ಶ್ರೀಧರರು ನಸುನಗುತ್ತ "ನನ್ನ ಸಾವಿರ ಭಾವಚಿತ್ರಗಳನ್ನು ತೆಗೆದು ಎದುರುಗಡೆ ಇಟ್ಟರೆ ಆ ಚಿತ್ರವು ನನಗಿಂತ ಬೇರೆಯಾಗಿ ಕಾಣಬರದೆ, ನನ್ನದೇ ಛಾಯೆಯೆಂದೂ ಅವುಗಳೊಳಗೆ ಉಚ್ಚನೀಚಭಾವನೆಯು ಬರಲುಸಾಧ್ಯವಿಲ್ಲವೆಂದೂ ನನಗೆ ತೋರುವದು. ಆದ್ದರಿಂದ ಆಗ ನೀವೆಲ್ಲರೂ ನನ್ನದೇ ಬೇರೆಬೇರೆ ರೂಪಗಳಾಗಿ ತೋರಬಹುದು; ನನಗೆ ಯಾವುದರಲ್ಲಿಯೂ ಭಿನ್ನ ಭಾವನೆತೋರಲಾರದು. ವಿಷಮ ಭಾವನೆಯಿಲ್ಲದೆ ಸರ್ವರಲ್ಲಿಯೂ ಸಮದೃಷ್ಟಿಯುಳ್ಳವರೇ ಸಿದ್ಧರು. ಇದನ್ನು ತಪಸ್ಸಿನಿಂದಲೇ ದೊರಕಿಸಿಕೊಳ್ಳುವ ಇಚ್ಛೆಯು ನನಗೆ ಇದೆ, ಎಂದು ಹೇಳಿದರು. ಜನ್ಮಜನ್ಮಾಂತರದಲ್ಲಿಯೂ ಅಸಾಧ್ಯವಾದ ಈ ತರಹೆಯ ಮನೋನಿಶ್ಚಯವು ಶ್ರೀಧರರಲ್ಲಿ ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ

ಸಿದ್ಧವಾದುದನ್ನು ನೋಡಿದರೆ ಆಶ್ಚರ್ಯವೆನಿಸುವುದು. “ಅನೇಕ ಜನ್ಮ ಸಂಸಿದ್ಧಃ ತತೋ ಯಾತಿ ಪರಾಂ ಗತಿಂ” ಎಂಬ ಗೀತಾವಾಕ್ಯವು ಈ ಮಾತನ್ನೆ ಸಮರ್ಥಿಸುವದು.

ಆನಂತರ ಕೆಲವು ದಿನಗಳ ಮೇಲೆ ಶ್ರೀಧರರ ಕೋಣೆಯಲ್ಲಿದ್ದ ಇಬ್ಬರು ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಗೆ ಹೊರಟುಹೋದರು. ಪಳ್ಣಿಟಕರರು ಶ್ರೀಧರರಿಗೆ ತಮ್ಮ ಕೋಣೆಯಲ್ಲಿಯೇ ಬಂದು ಇರಲು ಹೇಳಿದರು. ಆಮೇಲೆ ಒಂದೆರಡು ಮನೆಗಳಲ್ಲಿ ಮಧುಕರಿಬೇಡುತ್ತ ಒಪ್ಪೊತ್ತು ಊಟ ಮಾಡಿ ಸದಾ ಜಪಾದಿನಿತ್ಯಾನುಷ್ಠಾನದಲ್ಲಿ ನಿರತರಾಗಿರುತ್ತಿದ್ದರು. ರಾತ್ರಿಯ ಸಮಯ ಇಬ್ಬರೂ ದಾಸಬೋಧದ ವಿಷಯದಲ್ಲಿ ಚರ್ಚೆನಡೆಸುತ್ತಿದ್ದರು. ಶ್ರೀಧರರ ಜ್ಞಾನಭೂಮಿಕೆಯನ್ನು ನೋಡಿ ಪಳ್ಣಿಟಕರರಿಗೆ ಬಹಳ ಸಂತೋಷ. ಅಲ್ಲದೆ ಇವರಿಂದ ಯೋಗ್ಯಕಾರ್ಯವಾಗಬಹುದೆಂಬ ಮನೋಭಾವ ಅವರಲ್ಲಿದ್ದಿತು. ಪಳ್ಣಿಟಕರರು ಹಸ್ತಸಾಮುದ್ರಿಕ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದರು. ಒಂದುದಿನ ಶ್ರೀಧರರ ಹಸ್ತವನ್ನು ನೋಡಿ ಅವರಿಗೆ ಪರಮಾಶ್ಚರ್ಯವಾಯಿತು. ಒಂದು ಚಮತ್ಕಾರಿಕವಾದ ರೇಖೆಯು ಕಾಣಿಸಿತು. ಅದರ ಮೇಲಿಂದ ಇವರು ಪ್ರವೃತ್ತಿಮಾರ್ಗದ ಮುಂದಾಳುವಾಗುವರೆಂಬ ಭಾವನೆಯಾಗುತ್ತಿತ್ತು. ಅದಕ್ಕಿಂತಲೂ ಸ್ಪಷ್ಟವಾಗಿ ಇನ್ನೊಂದು ನಿವೃತ್ತಿಮಾರ್ಗ ಸೂಚಕವಾದ ರೇಖೆಯು ಕಾಣಿಸಿತು. ಅದರಲ್ಲಿ ಪಾರಮಾರ್ಥದ ಕಡೆಗೆ ಲಕ್ಷ್ಯಕೊಟ್ಟಲ್ಲಿ ಅತ್ಯುಚ್ಚಪದವಿಯನ್ನು ಪಡೆಯುವರೆಂದು ನಂಬಿಗೆಯಾಯಿತು. ಶ್ರೀಧರರ ಒಲವು ಕೂಡ ಪರಮಾರ್ಥದ ಕಡೆಗೇ ಇದ್ದುದರಿಂದ ತಪಶ್ಚರ್ಯೆಗೆ ಹೋಗಲು ಪಳ್ಣಿಟಕರರು ಶ್ರೀಧರರಿಗೆ ಪ್ರೋತ್ಸಾಹಕೊಟ್ಟರು. ಈ ಎಲ್ಲ ವಿಚಾರಗಳು ನಮಗೆ ಶ್ರೀ. ಪಳ್ಣಿಟಕರರಿಂದ ತಿಳಿದುಬಂದಿದೆ.

ಶ್ರೀಧರರು ತಪಸ್ಸಿಗೆ ಹೋಗುವರೆಂಬುದನ್ನು ಕೇಳಿ ಅವರ ಸ್ನೇಹಿತರಲ್ಲಿ ಕೆಲವರು ಹೊಗಳಿದರು; ಕೆಲವರು ತಮಗೆ ಈ ವಿಷಯದಲ್ಲಿ ಅಷ್ಟು ಅಧಿಕಾರವಿಲ್ಲವೆಂದು ನಮ್ರರಾದರು; ಇನ್ನು ಕೆಲವರು ಹೆದರಿಕೆ ಹಾಕಹತ್ತಿದರು. ಯಾರು ಏನೇ ಎಂದರೂ ಶ್ರೀಧರರ ಧ್ಯೇಯನಿಷ್ಠೆಯು ಸ್ವಲ್ಪವೂ ಕದಲಲಿಲ್ಲ. ಶ್ರೀಧರರು ಎಲ್ಲರಿಗೂ ನಾನು ಯಶಸ್ವಿಯಾಗುವದು ತೀರಖಂಡಿತ! ಖಂಡಿತ! ಎಂದು ಧೈರ್ಯದಿಂದ ಉತ್ತರ ಕೊಡುತ್ತಿದ್ದರು.

ಪುಣೆಯಲ್ಲಿ - ಆ ಪುಣ್ಯನಗರಿಯಲ್ಲಿ-ಶ್ರೀಧರರು ಇರುವಾಗ ಅವರಲ್ಲಿ ಅನೇಕ ವಿಚಾರ ತರಂಗಗಳು ಉದ್ಭವಿಸುತ್ತಿದ್ದವು. ಈ ಕಾಲದ ವಿಶ್ವವಿದ್ಯಾನಿಲಯದ ಶಿಕ್ಷಣವು ನಿರುಪಯೋಗಿಯೆಂದು ಅವರು ನಿರ್ಣಯಕ್ಕೆ ಬಂದಿದ್ದರು. ವಿದ್ಯಾರ್ಥಿವೇತನ ಪಡೆದಿದ್ದ ಉಚ್ಚತರಗತಿಯ ಅನೇಕ ವಿದ್ಯಾರ್ಥಿಗಳ ವರ್ತನವನ್ನೂ ಕಂಡು ಅವರು ಈ ನಿರ್ಧಾರಕ್ಕೆ ಬಂದಿದ್ದರು. ಶಿಕ್ಷಕರ ಸಾಮಾನ್ಯವರ್ತನವೂ ಕೂಡ ಅವರ ಹೃದಯವನ್ನು ನೋಯಿಸಿದ್ದಿತು. ಭಾರತೀಯರ ಧರ್ಮಾಭಿಮಾನವನ್ನು ಲೋಪಮಾಡಿ, ಅವರ ಉಜ್ವಲ ಸಂಸ್ಕೃತಿಯನ್ನು ಮರೆಯಿಸಿ, ಶ್ರೇಷ್ಠಪೂರ್ವಜರ ವಿಷಯದಲ್ಲಿರುವ ಶ್ರದ್ಧೆಯನ್ನು ಹಾಳುಗೈದು, ವಿಶ್ವಮಾನ್ಯ ವೇದಶಾಸ್ತ್ರಗಳಲ್ಲಿಯ ಆಸಕ್ತಿಯನ್ನು ತೊಲಗಿಸಿ, ಅವುಗಳಲ್ಲಿರುವ ಸಿದ್ಧಾಂತವು ಮೂರ್ಖತನದಿಂದ ಸ್ಥಾಪಿಸಲ್ಪಟ್ಟ ಸಂಕುಚಿತ ಭಾವನೆಗಳಿಂದ ಕೂಡಿದೆಯೆಂಬ ಭಾವನೆಯನ್ನು ನಿರ್ಮಿಸಿ, ಭಾರತೀಯರು ತಮ್ಮ ಪಾದಸೇವಕರಾಗಿ ಹೇಗೆ ಕ್ರೈಸ್ತರಾಗಬಹುದೆಂಬ ವಿಚಾರದಿಂದ ಪರಕೀಯರು ಆಂಗ್ಲೇಯ ವಿದ್ಯಾಭ್ಯಾಸವನ್ನು ಭಾರತದಲ್ಲಿ ಬಳಕೆಗೆ ತಂದರೆಂದು ಶ್ರೀಧರರ ಅಭಿಪ್ರಾಯವಾಗಿದ್ದಿತು. ಈ ಮಾತು ಮೆಕಾಲೆಯ ಪತ್ರದಿಂದ ಅಂಶತಃ ಸ್ಪಷ್ಟವಾಗುತ್ತಿರುವದರಿಂದ ಈ ಆಂಗ್ಲೇಯ ವ್ಯಾಸಂಗವು ವೃದ್ಧಿಯಾದಹಾಗೆಲ್ಲ ಸನಾತನಧರ್ಮವು ಅಳಿದುಹೋಗಿ ಭಾರತೀಯರು ಕ್ರೈಸ್ತರಾಗಲು ಯೋಗ್ಯರಾಗಬಹುದು. ಧರ್ಮಾಂತರಿಸುವ ಅವರ ಬುದ್ಧಿಯು ಜ್ಞಾನ-ವೈರಾಗ್ಯ ಮುಂತಾದ ದೈವಿಕಸಂಪತ್ತು ಮಿಥ್ಯೆಯೆಂದು ನಿರ್ಧರಿಸಿಕೊಂಡಿದೆ. ವಿಷಯಗಳ ಸೇವನೆಯ ಹುಳವಾಗಿ ನೀತಿಭ್ರಷ್ಟವಾದ ಅವರ ಸಮಾಜದಲ್ಲಿ ಮಿಲನಹೊಂದಲು ಪಾಶವೀದೇಹವು ಮಾತ್ರ ಅರ್ಹವಾಗಬಹುದು, ಎಂದು ಶ್ರೀಧರರು ನಿರ್ದೇಶಿಸಿಕೊಂಡರು. ಇಂತಹ ಶಿಕ್ಷಣವನ್ನು ಮುಂದುವರಿಸಿ ತಮ್ಮ ಭೂಮಿಕೆಯನ್ನು ವ್ಯರ್ಥಗೊಳಿಸಲು ಅವರ ಮನಸ್ಸೊಪ್ಪಲಿಲ್ಲ. ನಮ್ಮ ಉಜ್ವಲ ಸಂಸ್ಕೃತಿಯಲ್ಲಿ ಅಡಕವಾದ ಸತ್ಯತತ್ವಗಳನ್ನು ನಿದರ್ಶನಕ್ಕೆ ತಂದುಕೊಡಬೇಕು, ಧರ್ಮದ ತಿರುಳನ್ನು ಸ್ವತಃ ಅನುಭವಿಸಿ ಅನಂತರ ವಿಶ್ವ ಹಿತಕ್ಕೋಸ್ಕರ ಪ್ರಚಾರ ಮಾಡಬೇಕು; ವಿಶ್ವದಲ್ಲಿಯ ಸತ್ಯದ ಶೋಧಮಾಡಿ ಅದರ ಪ್ರಭಾವವನ್ನು ಜಗತ್ತಿಗೆ ತೋರಿಸಿಕೊಡಬೇಕು. ಎಂದು ಅವರ ಮನಸ್ಸಿಗೆ ಪುನಃ ಪುನಃ ಹೊಳೆಯುತ್ತಿದ್ದಿತು. ಈ ಕಾರ್ಯವು ತಮ್ಮಿಂದ

ಹೇಗೆ ನಡೆದೀತು ಎಂಬ ವಿವಂಚನೆಯಲ್ಲಿಯೇ ಶ್ರೀಧರರು ಸದಾ ತೊಡಗಿಕೊಂಡು ಇರುತ್ತಿದ್ದರು. ಪ್ರಚಲಿತ ಶಿಕ್ಷಣಕ್ರಮದಿಂದಲೂ ಆಧುನಿಕ ಲೋಕಸ್ಥಿತಿಯಿಂದಲೂ ಅವರ ಮನಸ್ಸು ಮರುಕಗೊಂಡಿದ್ದು ಧರ್ಮವಿಚ್ಛೇದನದ ಅನನ್ವಿತ ಶಬ್ದಗಳು ಕಿವಿಗೆಬೀಳುತ್ತಿದ್ದದರಿಂದ ಹೃದಯವು ತಳಮಳಗೊಂಡು ಇದನ್ನೆಲ್ಲ ನಿಲ್ಲಿಸುವ ಬಗೆ ಯಾವುದೆಂಬ ವಿಚಾರದಲ್ಲಿಯೇ ಶ್ರೀಧರರು ಯಾವಾಗಲೂ ಮಗ್ನರಾಗಿರುತ್ತಿದ್ದರು. ದಿನೇ ದಿನೇ ಹೆಚ್ಚುತ್ತಿರುವ ಸಮಾಜದ ನೀತಿ ಭ್ರಷ್ಟತೆ, ನಾಸ್ತಿಕತೆ, ಪರಧರ್ಮೀಯರ ಅಮಾನುಷಕೃತ್ಯ ಇವೆಲ್ಲವೂ ಅವರ ಅಂತಃಕರಣವನ್ನು ಕೆರಳಿಸಿದ್ದವು. 'ಲಾಲ್ ಬಾವುಟ' ಎಂಬುದಾಗಿ ಪ್ರಸಿದ್ಧಿಸಲ್ಪಟ್ಟ ಒಂದು ಪುಸ್ತಕದ ವಿಚಾರವನ್ನು ಅವರ ಒಬ್ಬ ಮಿತ್ರನು ಹೇಳಿದನು. ಅದರಲ್ಲಿ ಸ್ತ್ರೀಯರನ್ನು ಹೊತ್ತುಕೊಂಡು ಹೋಗಿ ಪಶುಗಳಂತೆ ಮಾರುತ್ತಿರುವದನ್ನು, ಧರ್ಮಾಂತರ ಪಡಿಸುತ್ತಿದ್ದುದನ್ನು, ಮತ್ತು ಈ ಕೃಷ್ಣ ಕಾರ್ಯಕ್ಕಾಗಿಯೇ ನಿಧಿಸಂಗ್ರಹಮಾಡಿ ಅನೇಕ 'ಗುಂಡಾ' ಗಳನ್ನು ಸಾಕುತ್ತಿದ್ದುದನ್ನೂ ವರ್ಣಿಸಿದ್ದಿತು. ಈ ಪುಸ್ತಕವನ್ನು ಓದಿಯಂತೂ ಶ್ರೀಧರರ ಮನಸ್ಸು ಇನ್ನಷ್ಟು ಮರುಕಗೊಂಡಿತು. ಈ ರಾಕ್ಷಸೀವೃತ್ತಿಯ ಅಮಾನುಷ ಕೃತ್ಯವನ್ನು ನಿಲ್ಲಿಸಲು ಹೇಗೆ ಸಾಧ್ಯವಾದೀತು? ಇದರ ನಿಶ್ಚಿತ ಮಾರ್ಗವಾವುದು ? " ಅದಕ್ಕೆ ನಾನು ಹೇಗೆ ಪೂರ್ಣ ಸಮರ್ಥನಾದೇನು ? ಎಂಬ ವಿಚಾರವು ಸದೋದಿತವಾಗಿ ಶ್ರಿಧರರ ಹೃದಯದಲ್ಲಿ ಘೂರ್ಣಿಸಹತ್ತಿತು. ಧರ್ಮವು ವಿಜಯಿಯಾಗುವದೆಂತು ? ಜಗತ್ಕಲ್ಯಾಣವು ಸಾಧಿಸುವ ಬಗೆ ಹೇಗೆ? ವಿಶ್ವದ ಅವನತಿಯು ನಿಂತು ಅದಕ್ಕೆ ಆಧ್ಯಾತ್ಮಭೂಮಿಕೆಯು ಎಂದು ಎಂತು ಪ್ರಾಪ್ತವಾದೀತು ? ಜಗತ್ತಿನಲ್ಲಿ ಸುಶಾಂತ ಪರಮಮಂಗಲಕರ ವಾತಾವರಣವು ಹೇಗೆ ಹುಟ್ಟಿಹಬ್ಬೀತು ? ಎಂಬುದನ್ನೆಲ್ಲ ಚಿಂತಿಸುತ್ತ ಚಿಂತೆಗೊಳಗಾಗುತ್ತಿದ್ದರು.

ಪುಣೆಯೊಳಗೆ ಕಳೆದ ಕಾಲದಲ್ಲಿ, ಶ್ರೀಧರರು ತಮ್ಮ ಭಾವೀಧ್ಯೇಯ ಪೂರ್ಣತೆಗೆ ಅನುರೂಪವಾದ ಶಿಕ್ಷಣವನ್ನು ವ್ಯಾಪಕದೃಷ್ಟಿಯಿಂದ ಪಡೆದುಕೊಳ್ಳುತ್ತಿದ್ದರು. ದೊಡ್ಡವರೆನಿಸಿಕೊಳ್ಳುವ ಪ್ರತಿಯೊಬ್ಬರ ಆಚರಣೆಯನ್ನೂ ಸೂಕ್ಷ್ಮವಾಗಿ ಗ್ರಹಿಸಿ ಅವರ ವಿದ್ಯೆ ಹಾಗು ಮನೋಭೂಮಿಕೆಗಳ ವಿವೇಚನೆ ಮಾಡಿಕೊಳ್ಳುತ್ತಿದ್ದರು. ಪುಣೆಗೆ ಬಂದುಹೋಗುವ ಗಣ್ಯ ವಿದ್ವಾಂಸರೆಂದು ಕರೆಯಿಸಿಕೊಳ್ಳುವವರನ್ನೆಲ್ಲ ಒರೆಗೆ ಹಚ್ಚಿ ಅವರೊಳಗೆ ಕೆಲವರಂತೂ ತೀರ

ನಿಷ್ಪ್ರಯೋಜಕರೆಂದು ಮನಗಂಡಿದ್ದರು. ಮತ್ತು ನಿಜವಾಗಿ ಯೋಗ್ಯರೆಂದು ಕಂಡುಬಂದ ದೊಡ್ಡಮನುಷ್ಯರ ವರ್ತನವನ್ನೆಲ್ಲ ಗ್ರಹಿಸಿ ಪಾಲಿಸಿ ಅದಕ್ಕೆ ಸ್ವಾನುಭವದ ನೀರೆರೆದು ಬಳಸಿ ಬೆಳೆಯಿಸಿಕೊಂಡು ತಮ್ಮ ನಿರ್ದುಷ್ಟ ಭೂಮಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಮನುಷ್ಯನಿಗೆ ಪೂರ್ಣತ್ವವೆಂತ ದೊರೆತೀತು? ಎಂಬುದೊಂದೇ ಅವರ ಎಲ್ಲ ವಿಚಾರಗಳ ಸಾರವು. ಹೆಂಡಿರು ಮಕ್ಕಳ ಸಂಸಾರವನ್ನು ಸುತ್ತಿಕೊಂಡು ಲೋಕಹಿತಕ್ಕಾಗಿ ಎಷ್ಟು ಹೆಣಗಿದರೂ ಅಂಥವರ ಕಾರ್ಯ ಕ್ಷೇತ್ರವು ಸಂಕುಚಿತವಾಗಿರುತ್ತದೆ. ಪೂರ್ಣ ನಿಸ್ವಾರ್ಥಿಗಳಾಗುವ ಆಶೆಯಿದ್ದರೂ ಸಂಸಾರದ ಮೋಹವು ಒಳಗೆ ಹುದುಗಿಕೊಂಡು ಅವರ ಸರ್ವಶಕ್ತಿಯನ್ನೂ ಸ್ವಾರ್ಥದಲ್ಲಿಯೇ ವಿನಿಯೋಗಿಸುವಂತೆ ಪ್ರೇರಿಸುವದು. ಆದ್ದರಿಂದ ಪೂರ್ಣ ತ್ಯಾಗಿಯಾದ ಹೊರತು ಯಾವುದೊಂದು ಕೆಲಸವನ್ನು ಪೂರ್ಣಗೊಳಿಸಲು ಯಾರಿಗೂ ಸಾಧ್ಯವಾಗುವದಿಲ್ಲವೆಂದು ಶ್ರೀಧರರು ನಿರ್ಧರಿಸಿಕೊಂಡಿದ್ದರು.

ತಮ್ಮ ಮುಂದಿನ ಕರ್ತವ್ಯವೇನು? ಎಂಬ ಚಿಂತೆ ಶ್ರೀಧರರ ಹೃದಯದಲ್ಲಿ ಸದಾ ಘೂರ್ಣಿಸುತ್ತಿದ್ದಿತು. ಪ್ರಕೃತ ಪರಿಸ್ಥಿತಿಯಲ್ಲಿ ಒಂದೇ ಒಂದು ಭಾಷೆಯ ಪ್ರಭುತ್ವವನ್ನು ಪಡೆಯುವುದು ಕೂಡ ಪ್ರಾಯಃ ಕಠಿಣ. ತೀವ್ರ ಪ್ರಯತ್ನದಿಂದ ಸರ್ವಭಾಷೆಗಳನ್ನೂ ಕಲಿತರೂ ಅವುಗಳಲ್ಲಿಯ ಪಾರಿಭಾಷಿಕ ಶಬ್ದಗಳನ್ನೆಲ್ಲ ಅಭ್ಯಾಸಮಾಡಿದ ಹೊರತು ಜ್ಞಾನವು ಪೂರ್ಣವೆನಿಸಿಕೊಳ್ಳಲಾರದು. "ಏಕಸ್ಮಿನ್ ಜನ್ಮನಿ ಏಕ ಮೇವ ಶಾಸ್ತ್ರಂ" ಎಂದು ಮಹಾಜನರ ಉಕ್ತಿಯಿರುವುದು. ಯಾವುದಾದರೊಂದು ಶಾಸ್ತ್ರದ ಪರಿಜ್ಞಾನವನ್ನು ಪೂರ್ಣವಾಗಿ ಪಡೆಯುವುದರಲ್ಲಿಯೇ ಆಯುಷ್ಯ ಮುಗಿದು ಹೋಗುವುದು, ಎಂದ ಮೇಲೆ ಸರ್ವಶಾಸ್ತ್ರಗಳ ಜ್ಞಾನವನ್ನು ಸಂಪಾದಿಸುವುದೆಂತು? ಎಲ್ಲ ಭಾಷೆ ಶಾಸ್ತ್ರಗಳು ಸಹ ಅವಗಾಹನೆಗೆ ಬಂದು ಸ್ವಲ್ಪ ಅಧ್ಯಯನ ಮಾತ್ರದಿಂದಲೇ ಮನೋಭೂಮಿಕೆಯು ಉಚ್ಚಮಟ್ಟವನ್ನು ಪಡೆಯಬಹುದು ಎನ್ನಲು ಸಾಧ್ಯವಿಲ್ಲ. "ಸ್ವೋದರ ಪೂರಣಾರ್ಥಂ ಭ್ರಮಂತಿ ಕಾಶಂ ಇವ ಸೂರಯೋಽಪಿ" ಎಂಬಂತೆ ಮಹಾವಿದ್ವಾಂಸರು ಕೂಡ ಸಂಸಾರದ ಬೆನ್ನು ಹಿಡಿದು ಹೆಂಡಿರು ಮಕ್ಕಳ ಅಪೇಕ್ಷೆಯನ್ನು ಪೂರೈಸುವುದಕ್ಕೋಸ್ಕರವೇ ತಮ್ಮ ಜೀವನವನ್ನು ಮೀಸಲಾಗಿಟ್ಟಿರುವದುಂಟು. "ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣ

ಕಾರಕಂ" ಎಂಬ ಶಂಕರಾಚಾರ್ಯರ ವಚನದಂತೆ, ಶಬ್ದಾತ್ಮಕ ಭಾಷಾ-ಜ್ಞಾನ ಹಾಗು ಶಾಸ್ತ್ರಜ್ಞಾನವೆಂದರೆ, ಮನಸ್ಸನ್ನು ಕೆರಳಿಸುವ ಮಹಾರಣ್ಯವೇ ಸರಿ. ವಿಶ್ವವು ಅನಂತ ವನಸ್ಪತಿಗಳಿಂದಲೂ ಅನಂತ ಪ್ರಾಣಿ ವರ್ಗಗಳಿಂದಲೂ ಅನಂತ ಸುಖಕಾರಕ ಪದಾರ್ಥಗಳಿಂದಲೂ ಒಡಗೂಡಿದೆಯೆಂದಮೇಲೆ, ಪ್ರತಿಯೊಂದರ ಪರಿಜ್ಞಾನವನ್ನು ಪಡೆದು ಸರ್ವಜ್ಞನಾಗುವದು ಎಂದಿಗೂ ಸಾಧ್ಯವಾಗಲಾರದ ಮಾತು. ಇಷ್ಟೊಂದು ವಿಶಾಲ ಪ್ರಪಂಚದಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಸಂಚರಿಸಿ ಅದರ ಸಮಗ್ರ ಅನುಭವವನ್ನು ಪಡೆದುಕೊಂಡು ಅನಂತರ ಅದರ ಪ್ರಚಾರಮಾಡುವುದೆಂದರೆ ಅತ್ಯಂತ ಅಗಾಧವಾದ ಕೆಲಸವೇ ಸರಿ. ಇಂದಿನವರೆಗೆ ಯಾರೂ ಈ ಮಾರ್ಗದಲ್ಲಿ ಯಶಸ್ಸುಪಡೆದಿಲ್ಲ. ಜಗತ್ತಿನ ಎಲ್ಲ ಪದಾರ್ಥಗಳು ನಾಶವಂತವಿದ್ದು, ಒಂದರಿಂದಲೂ ಪೂರ್ಣ ತೃಪ್ತಿಯಾಗಲು ಶಕ್ಯವಿಲ್ಲ. ಆದಾಗ್ಯೂ ಜನರು ತಮ್ಮ ಆಯುಷ್ಯವನ್ನು ಅದರಲ್ಲಿಯೇ ಕಳೆಯುತ್ತಿರುವರು. ಎಂದಮೇಲೆ ಅನೇಕ ಭಾಷೆಗಳನ್ನು ಕಲಿತರೂ ಅನೇಕ ವಿದ್ಯಾಪಾರಂಗತನಾದರೂ, ತರತರದಿಂದ ಇಂದ್ರಿಯ ತೃಪ್ತಿಮಾಡಿಕೊಂಡರೂ, ಎಷ್ಟೇ ದೀರ್ಘಾಯುಷಿಯಾದರೂ ಅವರಿಗೆ ಪೂರ್ಣತ್ವವು ಲಭಿಸದು. ಜಗತ್ತಿನ ಸೇವಾಕಾರ್ಯವು ಹಾಗೇ ಉಳಿದು ಬಿಡುವುದು ಎಂದಮೇಲೆ ಆಜನ್ಮವೂ ಅವಿಶ್ರಾಂತವಾಗಿ ಪರಿಶ್ರಮಪಟ್ಟುದರ ಫಲವೇನು? ಯಾವುದೊಂದು ಉಪಭೋಗವನ್ನು ಸಂಪಾದಿಸಿದರೂ ಅದು ಆಯುಷ್ಯವಿರುವ ವರೆಗೆ ಮಾತ್ರ ಸಹಾಯಕವಾಗಿ ನಡೆಯಬಹುದು; ಮುಂದಿನ ಜೀವನದ ಉದ್ಧಾರಕ್ಕೆ ಅದರಿಂದ ಏನೂ ಪ್ರಯೋಜನವಾಗದು. ತಮ್ಮ ಕರ್ತೃತ್ವ ಶಕ್ತಿಯಿಂದ ಚಕ್ರಾಧಿಪತಿಯಾಗಿ ಕುಳಿತರೂ, ಎಷ್ಟೊಂದು ಓದಿ ವಿದ್ವಾಂಸನಾದರೂ ಪೂರ್ಣ ಸುಖಶಾಂತಿಗಳನ್ನು ಹೊಂದಲು ಖಂಡಿತ ಸಾಧ್ಯವಿಲ್ಲ. ಅಸಾಧ್ಯವನ್ನು ಸಾಧ್ಯಮಾಡಿಕೊಂಡರೂ ಸರ್ವಕಾರ್ಯವೂ ಶಕ್ಯವಾದರೂ ಅಂತ್ಯದಲ್ಲಿ ಆಯುಷ್ಯವು ಕೊನೆಗಂಡು ಎಲ್ಲವೂ ತೊಲಗಿ ಹೋಗುವುದು. ಇರುವೆಯು ಸಣ್ಣಾಗಿ ದುಡಿದು ಹುತ್ತವ ರಚಿಸಿದೊಡನೆ ಹಾವುಸೇರಿಕೊಳ್ಳುವಂತೆ ಮೃತ್ಯುವು ಸರ್ವಸ್ವವನ್ನೂ ನುಂಗಿ ನೀರು ಕುಡಿದು ಬಿಡುವುದು. ಅನಂತರವೂ ತನ್ನ ಮುಂದಿನ ಅಸ್ತಿತ್ವದ ಪ್ರಶ್ನೆಯು ಹಾಗೇ ಉಳಿಯುವುದು, ಇತ್ಯಾದಿ ಅನೇಕ ವಿಚಾರಗಳ ತಾಕಲಾಟವು ಶ್ರೀಧರರ

ಮನಸ್ಸಿನಲ್ಲಿ ಸದಾ ನಡೆದಿದ್ದಿತು. ಅನಂತರ ಈ ಜಗತ್ತಿನ ಮೂಲದಲ್ಲಿ ಯಾವುದೋ ಒಂದು ಅವಿನಾಶಿಯಾದ ತತ್ತ್ವವಿದ್ದು ಅದರ ಸಾಕ್ಷಾತ್ಕಾರ ಪಡೆದ ಹೊರತು ತಮಗೆ ಪೂರ್ಣತ್ವವು ಸಿಗಲಾರದೆಂದು ನಿಷ್ಕರ್ಷೆಮಾಡಿದರು. ತಪಸ್ಸಿನಿಂದಲೇ ಆ ತತ್ತ್ವದ ಆಕಲನಮಾಡುವುದು ವಿಹಿತವೆಂದೂ ಭಾವಿಸಿ ಕೊಂಡರು. ಹಾಗೆ ವಿಶ್ವವ್ಯಾಪಿಯಾದ ತತ್ತ್ವದಲ್ಲಿ ಬೆರೆದ ಬಳಿಕ ಈ ಜಗತ್ತಿನ ಮೂಲ ಆಧಾರವು ನಾನೇ ಆಗಿ ಜಗತ್ತು ನನ್ನ ಸ್ವಾಧೀನಕ್ಕೆ ಬರುವುದು, ಜಗತ್ತಿನಲ್ಲಿ ನನ್ನ ಪ್ರತಿಸ್ಪರ್ಧಿಗಳು ಯಾರೂ ಉಳಿಯಲಾರರು. ಈ ವಿಶ್ವದ ನಿರಂಕುಶ ಕಲ್ಯಾಣ ಮಾರ್ಗವನ್ನು ನಾನು ತೋರಿಸ ಬಲ್ಲೆನು, ಎಂಬ ನಿರ್ಧಾರವು ಶ್ರೀಧರರ ಮನಸ್ಸಿನಲ್ಲಿ ದೃಢವಾಯಿತು.

ವಿಜಯದಶಮಿ ಸಮೀಪಿಸಿದಂತೆಲ್ಲಾ ಶ್ರೀಧರರಿಗೆ ತಪಶ್ಚರ್ಯೆಗೆ ಹೊರಡುವ ಉತ್ಸಾಹವು ಪ್ರಬಲವಾಯಿತು. ಜಗತ್ತಿನ ಕಂಟಕಗಳನ್ನು ನಿವಾರಿಸಿ ಅದನ್ನು ಸುಖಮಯ ಮಾಡಬೇಕು. ಅದಕ್ಕೋಸ್ಕರ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು ಎಂಬುದೇ ಶ್ರೀಧರರ ಅನುದಿನದ ಚಿಂತನೆಯಾಗಿದ್ದಿತು. ಒಂದು ದಿನ ಊಟ ಮುಗಿಸಿ ಪಳಣೀಟಕರರ ಮನೆಗೆ ಹೋಗಿ 'ಯಾವಾಗ ಹೊರಡಲಿ' ಎಂದು ಅವರನ್ನು ಕೇಳಿದರು. ಪಳಣೀಟಕರರು ಬುಧವಾರ ಹೊರಟರೆ ಒಳ್ಳೆಯದು ಎಂದು ಸಮ್ಮತಿಯಿತ್ತರು ಆ ವರುಷ ಬುಧವಾರ ಮತ್ತು ಗುರುವಾರ ಎರಡು ದಿನವೂ ವಿಜಯದಶಮಿ ಬಂದಿದ್ದಿತು. ಶ್ರೀಧರರು ಬುಧವಾರ ನಿತ್ಯದಂತೆ ಪ್ರಾತಃಕಾಲದಲ್ಲಿಯೇ ಎದ್ದು, ಅನುಷ್ಠಾನ ಮುಗಿಸಿ, ಏಕಾಗ್ರಮನಸ್ಕರಾಗಿ ಸ್ವಲ್ಪ ಹೊತ್ತು ಭಗವಂತನನ್ನು ಧ್ಯಾನಿಸಿದರು. ಈ ದಿನ ನನ್ನ ದೇಹವು ಭಗವಂತನಿಗೆ ಅರ್ಪಿತವಾಗಲಿ ಎಂದುಕೊಂಡು ಕಾಗದ ಲೆಕ್ಕಣಿಕೆಗಳನ್ನು ತೆಗೆದು ಅದರಲ್ಲಿ ಹೀಗೆ ಬರೆದರು:—

(೧) "ಆಮರಣ ಪರ್ಯಂತ ಅಖಂಡ ಬ್ರಹ್ಮಚರ್ಯವನ್ನು ಪಾಲಿಸುತ್ತೇನೆ.

(೨) ಇನ್ನು ಮೇಲೆ ದ್ರವ್ಯವನ್ನು ಮುಟ್ಟುವುದಿಲ್ಲ. ಒಂದು ವೇಳೆ ಆಗ್ರಹದಿಂದ ಯಾರಾದರೂ ಕೊಟ್ಟರೆ ಅದನ್ನು ಪರೋಪಕಾರಕ್ಕಾಗಿಯೇ ವಿನಿಯೋಗಿಸುವೆನು.

(೩) ಎಲ್ಲಿಯೂ ಮಠಾಧಿಪತಿಯಾಗಿ ಕುಳಿತುಕೊಳ್ಳಲಿಕ್ಕಿಲ್ಲ.

(೪) ದಟ್ಟದರಿದ್ರರನ್ನೂ, ನಿರ್ಗತಿಕರನ್ನೂ, ಕಷ್ಟದಲ್ಲಿದ್ದವರನ್ನೂ ಸಾಧ್ಯವಾದಷ್ಟುಮಟ್ಟಿಗೆ ಕಾಪಾಡುವೆನು.

(೫) ಸ್ತ್ರೀಪುರುಷರನ್ನು ಸಮದೃಷ್ಟಿಯಿಂದನೋಡಿ ಬೋಧಿಸುವೆನು.

(೬) ಅಖಿಲ ಸ್ತ್ರೀಸಮಾಜವನ್ನು ಮಾತೃಸಮಾನ ಭಾವಿಸುವೆನು.

(೭) ದೇಹನಿರ್ವಹಣದ ಆವಶ್ಯಕತೆಯನ್ನು ಕಡಿಮೆಮಾಡಿ ಸಾಧ್ಯವಾದಷ್ಟು ಮಟ್ಟಿಗೆ ಲೋಕ ಕಲ್ಯಾಣಕ್ಕೋಸ್ಕರ ತನು ಮನ ಧನದಿಂದ ಪ್ರಯತ್ನಮಾಡುವೆನು.

(೮) ಸರ್ವಶಕ್ತಿಯಿಂದ ಪ್ರಯತ್ನಿಸಿ ಧರ್ಮದ ಅವನತಿಗೆ ತಡೆ ಹಾಕುವೆನು.

ಈ ಎಲ್ಲ ಉದ್ದೇಶಗಳು ಪೂರ್ಣವಾಗಲು ಈ ದೇಹವನ್ನು 'ಕರ್ತುಮಕರ್ತುಮ್ ಅನ್ಯಥಾ ಕರ್ತುಮ್' ಶಕ್ತಿಯಲ್ಲಿ ಸರ್ವಶ್ರೇಷ್ಠನಾದ ಭಗವಂತನಿಗೆ ಅರ್ಪಣೆಮಾಡಿದ್ದೇನೆ. "ಮೀ ಮುಕ್ತಹೋವೂನ್ ಜಗಾಲಾ ಮುಕ್ತಕರಾವೇ" ಎಂಬ ನನ್ನ ಅಪೇಕ್ಷೆಯು ಪೂರ್ಣವಾಗುವ ಭಾರವು ಭಗವಂತನ ಮೇಲೆಯೇ ಬಿದ್ದಿರುವುದು ಸರ್ವಸ್ವವನ್ನೂ ಭಗವಂತನಲ್ಲಿಯೇ ಅರ್ಪಣಮಾಡಿರುವಾಗ ಇನ್ನುಮೇಲೆ ಈ ದೇಹದಿಂದ ನಡೆಯುವ ಯುಕ್ತಾಯುಕ್ತ ಕರ್ಮದ ಹೊಣೆಗಾರಿಕೆಯು ಅವನ ಮೇಲೆಯೇ ಇರುವುದು. ಈ ಸಂದರ್ಭದಲ್ಲಿ ನಾನು ಮಾಡಿರುವ ಪ್ರತಿಜ್ಞೆಗೆ ಸಕಲ ದೇವತೆ ಋಷಿ ಮುನಿಗಳಾದಿಯಾಗಿ ಪಂಚಭೂತಗಳೂ ಸಾಕ್ಷಿಯಿರುವುವು. ಈ ಪತ್ರದ ಆವಶ್ಯಕತೆ ಕಂಡುಬಂದಲ್ಲಿ ಅದನ್ನು ಇನ್ನು ಮುಂದೆ ತತ್ಕಾಲಕ್ಕೆ ಒದಗಿಸಿ ಕೊಡುವ ಬಗ್ಗೆ ಇದನ್ನು ಅಗ್ನಿನಾರಾಯಣನ ಸ್ವಾಧೀನ ಮಾಡುತ್ತೇನೆ, ಎಂದು ನುಡಿದು ಆ ಪತ್ರವನ್ನು ಅಗ್ನಿನಾರಾಯಣನಿಗೆ ಅರ್ಪಿಸಿ ತಪಶ್ಚರ್ಯಗೆ ಹೊರಡುವ ಮಿಕ್ಕುಳಿದ ಸಿದ್ಧತೆ ಮಾಡತೊಡಗಿದರು.

ಇಂತಿದು ವಿದ್ಯಾರ್ಥಿ ಸಂಪುಟಮ್

ಇತಿ ಶಮ್

೮. ಪ್ರಯಾಣ

ವಿಜಯದಶಮಿಯ ಮುನ್ನಾದಿನ (೧೯೨೭) ಶ್ರೀಧರರು ಸಜ್ಜನಗಡಕ್ಕೆ ಹೊರಡಲನುವಾದರು. ಅಂದು ಶ್ರೀಧರರಿಗೆ ಮತ್ತೊಂದು ವಿಚಾರವು ಸೂಚಿಸಿತು. ನನಗೆ ಗುರುವಾರು? ಗುರುಮುಖದಿಂದ ಉಪದೇಶಹೊಂದಿದಾಗಲೇ ಯಾವುದೊಂದು ವಿದ್ಯೆಯು ಪೂರ್ಣವಾಗುವದು. ಅದರಲ್ಲಿಯೂ ಅಧ್ಯಾತ್ಮ ವಿದ್ಯೆ ತಪಶ್ಚರ್ಯೆ ಮುಂತಾದ ಗೂಢವಿದ್ಯೆಗಳಿಗೆ ಗುರುವಿಲ್ಲದೆ ಹೇಗೆ ನಡೆದೀತು, ಎಂಬ ವಿಚಾರವು ಶ್ರೀಧರರ ಮನಸ್ಸನ್ನು ಆಕ್ರಮಿಸಿತು. ಪಳಣೀಟಕರರು ಈ ಪ್ರಶ್ನೆಯನ್ನು ಬಿಡಿಸಿಕೊಟ್ಟರು. ಸಜ್ಜನಗಡವು ಶ್ರೀರಾಮದಾಸ ಸ್ವಾಮಿಗಳ ದಿವ್ಯ ಸ್ಥಾನ. ಅಲ್ಲಿ ಇನ್ನೊಬ್ಬ ಗುರುವೆಲ್ಲಿಂದ ಬರಬೇಕು? ಶ್ರೀರಾಮದಾಸ ಸ್ವಾಮಿಗಳೇ ನಿಮಗೆ ಗುರು, ಅವರನ್ನೇ ಪರಮಗುರುವೆಂದು ಭಾವಿಸಿ ಮುಂದೆ ಸಾಗಬೇಕು, ಎಂದು ಪಳಣೀಟಕರರು ಅಭಿಪ್ರಾಯಪಟ್ಟರು. ಅವರು ಮತ್ತೂ ಒಂದು ಮಾತು ಸೂಚಿಸಿದರು.

ನಾರಣ್ಯ ವಾಸತಶ್ಚಾಪಿ ನ ಚ ಮೌನಾನ್ಮುನಿರ್ಭವೇತ್ ।
ಸ್ವಲಕ್ಷಣಂ ತು ಯೋವೇದ ಸ ಮುನಿಶ್ರೇಷ್ಠ ಉಚ್ಯತೇ ॥

ಕೇವಲ ಮೌನಾದಿ ತಪೋನುಷ್ಠಾನದಿಂದಲೇ ಆಗಲಿ ಅರಣ್ಯವಾಸಾದಿ ಕಷ್ಟಸಹನೆ ದೇಹದಂಡನೆಗಳಿಂದಲೇ ಆಗಲಿ ಯಾರಿಗೂ ತಪಸ್ಸು ಸಿದ್ಧಿಸುವದಿಲ್ಲ, ಅವರು ಮುನಿಗಳು-ಜ್ಞಾನಿಗಳು-ಎನ್ನಿಸುವದಿಲ್ಲ, ಆತ್ಮಜ್ಞಾನರತರಾದಾಗಲೇ ಅವರಿಗೆ ಜ್ಞಾನೋದಯವಾಗುವದು, ಎಂಬದು ಒಂದು ಸೂತ್ರವಾಕ್ಯ. ಮೊದಲಿನಿಂದ ಈ ಜ್ಞಾನವು ನಿಮ್ಮಲ್ಲಿದೆ. ಜ್ಞಾನದ ಪರಿಪಕ್ವ ಸ್ಥಿತಿಗೆ ಮೂರು ಮಾತು ಅವಶ್ಯ. ಒಂದು ಪಾಂಡಿತ್ಯ, ಎರಡನೆಯದು ಬಾಲ ಭಾವ, ಮೂರನೆಯದು ಮೌನಾದಿ ತಪಶ್ಚರಣ. ಗುರುಮುಖದಿಂದ ವೇದಶಾಸ್ತ್ರಾದಿಗಳನ್ನು ಯಥಾವಿಧಿಯಾಗಿ ಅಭ್ಯಾಸಮಾಡುವದು; ಆಬಳಿಕ ವಿದ್ಯೋಪಾಸನೆಮಾಡಿ ಜ್ಞಾನನಿಷ್ಠೆಯನ್ನು ಹೊಂದಿ ಕೇವಲ ಬಾಲಭಾವವನ್ನು ಆಚರಿಸುವದು ಎಂದರೆ ಚಿಕ್ಕಮಕ್ಕಳು ಹೇಗೆ ನಾನು ತಾನೆಂಬ ಅಭಿಮಾನರಹಿತರಾಗಿ ವಿಶುದ್ಧ ಮನಸ್ಸಿನಿಂದ ಸರ್ವರನ್ನೂ ಪ್ರೀತಿಸಿ ನಿಷ್ಕಲ್ಮಷ ಮನೋಭಾವದಿಂದ ನಡೆಯುವರೋ ಹಾಗೆ ನಡೆಯುವದು. ಮೂರನೆಯದು ಮೌನ. ಇದು

ತಪಸ್ಸಿನ ಮಾರ್ಗದ ಮಹತ್ವದ ಮೆಟ್ಟಿಲು. ಬಾಹ್ಯ ಪ್ರಪಂಚದ ಅನಾತ್ಮ ಚಿಂತನೆಯನ್ನು ಸಂಪೂರ್ಣ ತೊಲಗಿಸಿಕೊಂಡು ಪರಮಾತ್ಮನ ಧ್ಯಾನದಲ್ಲಿಯೇ ಮುಳುಗಿರುವದು ಮೌನದ ಲಕ್ಷಣ. ಕೇವಲ ಬಾಯಿ ಮುಚ್ಚಿ ಮಾತಾಡದೆ ಇದ್ದರೆ ಮೌನವಾಗದು. ಮೌನದಲ್ಲಿ ಆತ್ಮಾನ್ವೇಷಣೆಯ ಗುಟ್ಟು ಅಡಕವಾಗಿದೆ.

ಅಕ್ಷರೋಪಾಸನೆ. ಈ ಮಾರ್ಗದಲ್ಲಿ ಕೆಲವು ಮಹತ್ವದ ಮಾತುಗಳಿವೆ. ಯಾವ ಪ್ರಾಣಿಯನ್ನೂ ದ್ವೇಷಿಸದಿರುವದು, ಸರ್ವರನ್ನೂ ಪ್ರೀತಿಸಿ ಎಲ್ಲರ ಮೈತ್ರಿಯನ್ನೂ ಅಪೇಕ್ಷಿಸಿ ನಡೆಯುವದು. ಭೂತದಯಾಪರನಾಗಿರುವದು. ನಾನು ನನ್ನದು ಎಂಬ ಅಹಂಭಾವವನ್ನು ತೊರೆಯುವದು, ಸುಖದುಃಖಗಳನ್ನು ಸಮಭಾವದಿಂದ ನೋಡಿ ಅನುಭವಿಸುವದು, ಕ್ಷಮೆಯೇ ಮೈವೆತ್ತು ಬಂದಿರುವಂತೆ ವರ್ತಿಸುವದು. ಈ ಎಲ್ಲ ಭಾವನೆಗಳೂ ತಕ್ಕರೀತಿಯ ಆಚಾರಗಳೂ ಇದ್ದಾಗಲೆ ತಪಸ್ಸು ಸಿದ್ಧಿಸುವದು.

ಈ ಎಲ್ಲ ವಿಚಾರಗಳನ್ನು ಪಳಣೀಟಕರರೊಡನೆ ಚರ್ಚಿಸಿ ನಿರ್ಣಯಿಸಿಕೊಂಡಬಳಿಕ ಶ್ರೀಧರರಿಗೆ ಭಗವಾನ್ ರಾಮದಾಸ ಸ್ವಾಮಿಗಳೇ ಗುರುವೆಂಬದನ್ನು ಹೇಗೆ ನಿರ್ಧರಿಸಿಕೊಳ್ಳಬೇಕೆಂಬದನ್ನು ಪಳಣೀಟಕರರು ತಿಳಿಸಿಕೊಟ್ಟರು. ಶ್ರೀ ಸಮರ್ಥರ ಭಾವಚಿತ್ರವನ್ನು ವಿಶುದ್ಧ ಮನೋಭಾವನೆಯಿಂದ ಪೂಜೆ ಮಾಡುವದು, ಒಂದು ಕಾಗದದ ಮೇಲೆ ತ್ರಯೋದಶಾಕ್ಷರಿಯನ್ನು ಬರೆದು ಅದರ ಮುಂದೆ ಇಡುವದು, ಅಲ್ಲಿಯೇ ಕುಳಿತು ಆ ಮಂತ್ರವನ್ನು ಮೂರು ಸಾರೆ ಉಚ್ಚರಿಸುವದು. ಈ ವಿಧಿಯಿಂದ ನಿಮಗೆ ಶ್ರೀ ಸಮರ್ಥರು ಗುರುಗಳಾಗುವರು ಎಂಬದು ಶಾಸ್ತ್ರಸಿದ್ಧವಾದ ಮಾತು. ಎಂದು ಪಳಣೀಟಕರರು ಶ್ರೀಧರರಿಗೆ ವಿವರಿಸಿ ತಿಳಿಸಿದರು. ಮತ್ತು ನಾಳೆ ಪ್ರಾತಃಕಾಲ,ವಿಜಯದಶಮಿಯ ಸುಮುಹೂರ್ತದಲ್ಲಿ ಶ್ರೀ ಬನೇಶ್ವರನ ಸನ್ನಿಧಿಯಲ್ಲಿ ಸ್ನಾನಸಂಧ್ಯಾದಿಗಳನ್ನು ಮುಗಿಸಿ ಮೇಲೆ ಹೇಳಿದಂತೆ ಶ್ರೀಸಮರ್ಥರಿಂದ ಉಪದೇಶವನ್ನು ಪಡೆಯಿರಿ ಎಂದು ಸಲಹೆಯನ್ನು ಕೊಟ್ಟರು.

ಆಶ್ವಿನ ಮಾಸದ ಶುಕ್ಲಪಕ್ಷ ದಶಮಿಯು ನಮ್ಮ ಭಾರತೀಯರ ದೃಷ್ಟಿಯಿಂದ ಒಂದು ಶುಭಮುಹೂರ್ತ. ನಮ್ಮವರು ಶುಕ್ಲಪ್ರತಿಪದೆಯಿಂದ ಒಂಬತ್ತು ದಿವಸ ದುರ್ಗಾದೇವತಾರಾಧನೆ ಮಾಡಿ ಹತ್ತನೆಯ ದಿನ ಪೂಜಾ

ಸಮರ್ಪಣಾದಿಗಳನ್ನು ನೆರವೇರಿಸಿ ಯಾವುದೊಂದು ಮಹತ್ಕಾರ್ಯವನ್ನು ಆರಂಭಿಸುವರು. ಚಿಕ್ಕಮಕ್ಕಳಿಗೆ ಹೊಸಗಾಗಿ ವಿದ್ಯಾಭ್ಯಾಸಮಾಡಿಸುವ ದಶಕ್ಕೂ ಅದೇ ಸುಮುಹೂರ್ತವೆಂದು ನಮ್ಮ ಭಾವನೆ. ಅಂದು ಶ್ರೀಧರರು ಸೂರ್ಯೋದಯಕ್ಕಿಂತ ಮೊದಲೇ ತಮ್ಮ ಎಲ್ಲ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಶ್ರೀಸಮರ್ಥ ಗುರುಪಾದ ವಂದನೆಮಾಡಿದ ಬಳಿಕ ಸಮೀಪವರ್ತಿಗಳಾದ ಹಿರಿಯರನ್ನೂ ಪೂಜ್ಯರನ್ನೂ ವಂದಿಸಿ ಆ ದೇವಾಲಯದಲ್ಲಿದ್ದ ನರಸಿಂಹ ದೇವರನ್ನು ಪ್ರಾರ್ಥಿಸಿದರು; ಪೂರ್ಣನಾಗಿ ಬಂದು ಸೇವೆಸಲ್ಲಿಸುತ್ತೇನೆಂದು ಹರಕೆಹೊತ್ತರು, ಮತ್ತು ಸಜ್ಜನಗಿರಿಗೆ ಪ್ರಯಾಣ ಬೆಳಸಿದರು.

'ಶ್ರೇಯಾಂಸಿ ಬಹು ವಿಘ್ನಾನಿ' 'ಸತ್ಕಾರ್ಯಕ್ಕೆ ಸಾವಿರ ವಿಘ್ನಗಳು' ಎಂಬುದು ನಮ್ಮ ಪ್ರಾಚೀನ ನಂಬುಗೆ. ಅಂತಹ ಎಲ್ಲ ವಿಘ್ನಗಳನ್ನು ದಾಟಿದಾಗಲೆ ಶ್ರೇಯಸ್ಸು ಮೈಗೂಡಿ ಬರುವದು. ವಿಘ್ನಗಳಿಗೆ ಹೆದರುವ ಅಂಜುಬುರುಕರು ಮಹತ್ಕಾರ್ಯಗಳಿಗೆ ಕೈಹಾಕುವದೇ ಇಲ್ಲ. ಹಾಗೆ ಕೈಹಾಕಿದವರೂ ಕೂಡ ಅಲ್ಪ ಬುದ್ಧಿಯುಳ್ಳವರಾದರೆ ವಿಘ್ನಗಳೊದಗಿದೊಡನೆ ಕೈಬಿಟ್ಟು ಅಪಹಾಸ್ಯಕ್ಕೆ ಗುರಿಯಾಗುವರು. ಸ್ಥಿರಬುದ್ಧಿಯ ಧೀರರು ಮಾತ್ರ ಸತ್ಕಾರ್ಯಕ್ಕೆ ತೊಡಗಿದಾಗ ಸಾವಿರ ವಿಘ್ನಗಳೊದಗಿದರೂ ಅವನ್ನು ಗಣಿಸದೆ ಮುಂದೆ ಸಾಗುವರು; ಶ್ರೇಯೋಭಾಗಿಗಳಾಗುವರು. ಹಾಗೆ ಶ್ರೀಧರರಿಗೆ ಸಜ್ಜನಗಿರಿಗೆ ತೆರಳುವಾಗಲೇ ವಿಘ್ನವುಂಟಾಯಿತು. ಅಂದು ಅದೇಕೋ ವಿಪರೀತ ಮಳೆಗೆ ಪ್ರಾರಂಭವಾಗಿತ್ತು. ಮಳೆಗೆ ಹೆದರಿ ಹಿಂದೆ ಉಳಿಯಲು ಸ್ವಲ್ಪವೂ ಮನಸ್ಸು ಆಗಲಿಲ್ಲ. ಮನಸ್ಸು ಮುಂದೆ ಸಾಗಲೇಬೇಕೆಂದು ಹೇಳಿತು. ಪರೀಕ್ಷೆಗೆ ಇಲ್ಲಿಂದಲೇ ಪ್ರಾರಂಭವಾಯಿತೆಂದು ನಿರ್ಧರಿಸಿ ಇಮ್ಮಡಿ ಉತ್ಸಾಹದಿಂದ ಕಾಲು ಮುಂದೆ ಹಾಕಿದರು, ಶ್ರೀಧರರು. ಬಿರುಗಾಳಿ ಜಡಿಮಳೆಗಳ ಭಯಣೆಯಲ್ಲಿಯೇ ಹಾದಿ ಹಿಡಿದರು. ಅವರ ಭವಿಷ್ಯಕಾಲದ ಉಜ್ವಲ ಭವಿತವ್ಯತೆಯು ಅತ್ತ ಇತ್ತ ಎಲ್ಲಿಯೂ ನೋಡಗೊಡದೆ ಮುಂದಿನ ಹಾದಿಯಲ್ಲಿ ವೇಗವಾಗಿ ಎಳೆದುಕೊಂಡು ಹೋಗುತ್ತಿತ್ತು. ಮಳೆಯಿಂದ ಮೈಯೆಲ್ಲ ತೊಯ್ದು ಚಳಿಯಿಂದ ನಡುಕ ಹುಟ್ಟಿತು. ಆದರೂ ಅದನ್ನು ಲೆಕ್ಕಿಸದೆ ಮುಂದೆ ಮುಂದೆಸಾಗಿದರು. ಉಚ್ಚ ಧ್ಯೇಯವನ್ನಿಟ್ಟುಕೊಂಡವರು ಅದರ ಸಿದ್ಧಿಗಾಗಿ ಪ್ರಯತ್ನಿಸುವಾಗ ಒದಗುವ ವಿಘ್ನಗಳಿಂದಲೂ

ಸಂಕಟಗಳಿಂದಲೂ ಎದೆಗೆಡಬಾರದು. ಸೀತಾಮಾತೆಯ ಶೋಧನೆಗಾಗಿ ಲಂಕೆಗೆ ಹೊರಟ ಮಾರುತಿಗೆ ದಾರಿಯಲ್ಲಿ ಎಷ್ಟೆಲ್ಲ ವಿಘ್ನಗಳು ತಡೆಗಟ್ಟಲಿಲ್ಲ? ಮಾರುತಿಯು ಅವಕ್ಕೆ ಅಂಜಿ ಹಿಂಜರಿದನೇ? ಮಳೆಗೆ ಹೆದರಿ ಒಂದು ಮರದ ನೆರಳಲ್ಲಿಯಾದರೂ ತುಸು ಹೊತ್ತು ನಿಲ್ಲು ಎಂದು ಮನಸ್ಸಿನ ಒಂದಂಶವೂ ಹಿಂದೆಳೆಯಲಿಲ್ಲ. ಧೀರನಾದವನು ಎಂದೂ ಅಳಿ ಮನಸ್ಸುಮಾಡಿ ಹಿಂದೆ ಉಳಿಯಲಾಗದು, ಎಂದು ಅವರ ಮನಸ್ಸಿನ ಧೀರೋದಾತ್ತವೃತ್ತಿಯು ಉತ್ಕರ್ಷದ ಮಾರ್ಗದತ್ತ ಬೆರಳೆತ್ತಿ ತೋರಿ ಹೇಳಿತು. ಶ್ರೀಧರರು ಮುಂದು ವರಿದರು. ಸಾಯಂಕಾಲವಾಯಿತು, ಕತ್ತಲಾಯಿತು, ಮಳೆ ಒಂದೇಸವನೆ ಸುರಿಯುತ್ತಲೇ ಇತ್ತು. ವಿಶಾಲವಾದ ರಾಜಮಾರ್ಗವು ದಾರಿ ತೋರಿದಂತೆ ಶ್ರೀಧರರು ಮುಂದುವರಿದರು. ರಾತ್ರಿ ಹನ್ನೆರಡು ಗಂಟೆ ಮೀರಿತ್ತು. ನಡೆದುದು ೨೦-೨೨ ಮೈಲಿಗಿಂತ ಹೆಚ್ಚು ಆದೀತು.

ಶ್ರೀಧರರು ಬನೇಶ್ವರ ದೇವಾಲಯಕ್ಕೆ ಹೋಗಬೇಕಾಗಿತ್ತು. ಅದನ್ನವರು ಹಿಂದೆ ಎಂದೂ ನೋಡಿದವರಲ್ಲ. ಪಳಣೀಟಕರರ ಹೇಳಿಕೆಯ ಮೇರೆಗೆ ಅದರ ದಾರಿ ಹಿಡಿದು ಸಾಗಿದ್ದರು. ಹೋಗಹೋಗುತ್ತ ಅವರ ಹೇಳಿಕೆಯನ್ನು ನೆನಿಸಿಕೊಂಡು ತಾನು ಕ್ರಮಿಸಿರಬಹುದಾದ ಮಾರ್ಗದ ಪ್ರಮಾಣದಿಂದ ನೋಡಿದರೆ ತಾನು ದಾರಿ ತಪ್ಪಿರಬೇಕೆಂದು ಶ್ರೀಧರರಿಗೆ ಭಾಸವಾಯಿತು. ಯಾರನ್ನಾದರೂ ಕೇಳಬೇಕೆಂದರೆ ಯಾರೂ ಭೆಟ್ಟಿಯಾಗಲಿಲ್ಲ. ಮಳೆಗಾಳಿಗಳ ರಭಸ, ಮೇಲೆ ಕಗ್ಗತ್ತಲೆ. ಆದುದರಿಂದ ದಾರಿಕಾರರಾರೂ ಶ್ರೀಧರರಿಗೆ ಕೂಡಲಿಲ್ಲ. ಮತ್ತೆ ತುಸುದೂರ ಹೋದಬಳಿಕ ಕೂಲಿಕಾರರ ನಾಲ್ಕೈದು ಗುಡಿಸಲುಗಳು ಕಾಣಿಸಿದವು. ಅಲ್ಲಿ ಹೋಗಿ ವಿಚಾರಿಸಿದಾಗ ರಾಜಮಾರ್ಗದಿಂದ ತಿರುಗಿ ಬನೇಶ್ವರಕ್ಕೆ ಹೋಗುವ ಕವಲು ದಾರಿಯು ಇಲ್ಲಿಂದ ಮೂರು ನಾಲ್ಕು ಮೈಲು ಹಿಂದೆಯೇ ಉಳಿದುಹೋಯಿತು, ಎಂದು ಗೊತ್ತಾಯಿತು. ಈಗ ಕತ್ತಲೆಯಲ್ಲಿ ಹೋದರೆ ಆ ದಾರಿ ನಿಮಗೆ ಸಿಗಲಾರದು, ಇಲ್ಲಿಯೇ ಉಳಿದು ಬೆಳಿಗ್ಗೆ ಹೋಗಬಹುದು, ಎಂದು ಆ ಜನರು ಹೇಳಿದರು. ಶ್ರೀಧರರಿಗೆ ಸ್ವಲ್ಪವೂ ಬೇಸರವಾಗಲಿಲ್ಲ. ಅವರು ಸ್ವಲ್ಪವೂ ಎದೆಗೆಡಲಿಲ್ಲ. ಆಗಲೇ ತಿರುಗಿ ಹೊರಟರು. ಧ್ಯೇಯವನ್ನು ಸಾಧಿಸಲು ಬಾಣದ

ಗುರಿಯಂತೆ ಸಾಗಬೇಕು ಎಂಬದು ಶ್ರೀಧರರ ಸ್ವಭಾವಗುಣ. ಆದ್ದರಿಂದ ಅವರು ಕೂಡಲೆ ಹಿಂದಿರುಗಿ ಹೊರಟರು.

ಕಗ್ಗತ್ತಲೆ. ತನ್ನ ಮೈ ತನಗೆ ಕಾಣಿಸದಷ್ಟು ಕತ್ತಲೆ. ಶ್ರೀಧರರು ಬಂದ ದಾರಿಯಿಂದಲೇ ಮರಳಿ ಹೊರಟರು. ಇದೇನು ನನ್ನ ಮೈಯೇ ನನಗೆ ಕಾಣಿಸುವದಿಲ್ಲ? ಇದೂ ಒಂದು ಶುಭ ಲಕ್ಷಣವೇ! ನನ್ನ ದೇಹವನ್ನೇ ಮರೆಯಲು ಕಲಿಯಬೇಕೆಂಬ ಭಗವಂತನ ಸೂಚನೆಯಿದಾಗಿರಬೇಕು ಎಂದುಕೊಂಡು ದಾರಿ ನಡೆಯಹತ್ತಿದರು. ನಾನು ಇಂದು ಬನೇಶ್ವರನ ದೇವಸ್ಥಾನದಲ್ಲಿ ನಿಲ್ಲಬೇಕಾಗಿತ್ತು. ಪರಮಾತ್ಮನು ನನ್ನನ್ನು ಇನ್ನೂ ಮುಂದೆ ಸಾಗಿಸಿದನಲ್ಲ! ಆತನು ನನ್ನನ್ನು ಪ್ರಕೃತದ ಧ್ಯೇಯಕ್ಕಿಂತಲೂ ಹೆಚ್ಚಿನ ಮಾರ್ಗಕ್ರಮಣ ಮಾಡಲು ಪ್ರೇರಿಸುತ್ತಿರಬೇಕು ಎಂದು ಸಂತೋಷಪಟ್ಟರು. ಇದೀಗ ಧೀರೋದಾತ್ತರ ಲಕ್ಷಣ. ಆಗುವದೆಲ್ಲ ಒಳ್ಳೆಯದಕ್ಕೇ ಆಗುತ್ತದೆ, ಎಂದು ಆ ಪರಮಾತ್ಮಶಕ್ತಿಯಲ್ಲಿ ವಿಶ್ವಾಸವಿಟ್ಟು ಕಾರ್ಯ ಮುಂದರಿಸುವದು ಆತ್ಮನಿಷ್ಠೆಯ ಕುರುಹು. ದಾರಿ ತಪ್ಪಿತಲ್ಲಾ, ಎಂಥ ಕಷ್ಟಕ್ಕೊಳಗಾದೆ, ಎಂದು ಕಣ್ಗೆಡದೆ ಒದಗಿ ಬಂದ ಸಂಕಟವೇ 'ಉಪಕಾರಿ' ಎಂದು ಅವರು ಭಾವಿಸಿದರು. ಇದು ಧೀರರ ಲಕ್ಷಣ; ಸುವಿಚಾರಿಗಳ ಮನೋಧರ್ಮ.

ಮಳೆಯ ಸೆಳಕು ಕಡಿಮೆಯಾಯಿತು. ತುಸು ವಿಚಾರ ಮಾಡಿದಾಗ ಆ ಗುಡಿಸಲದವರು ಹೇಳಿದಷ್ಟು ದಾರಿ ಸಾಗಿದ್ದೀತು ಎನ್ನಿಸಿ ಅತ್ತಿತ್ತ ನೋಡಲು ರಾಜಮಾರ್ಗದಿಂದ ಹೊರಟ ಕವಲುದಾರಿಯೊಂದು ಕಾಣಿಸಿತು. ನಾನು ಹೋಗಬೇಕಾದುದು ಇದೇ ದಾರಿಯೋ ಹೌದೇ ? ಎಂಬ ಸಂಶಯವು ತಲೆದೋರುತ್ತಿದ್ದಂತೆ ಆ ಸಂಶಯವನ್ನು ಬಿಟ್ಟು ತಮ್ಮ ಭವಿತವ್ಯದ ಪರೀಕ್ಷೆ ಮಾಡಲು ನಿಶ್ಚಯಿಸಿದರು. ಆಗ ಶ್ರೀಧರರು ಅದೇ ಕವಲು ದಾರಿಯಲ್ಲಿ ಮುಂದುವರಿದರು; ಮತ್ತು ಮನಸ್ಸಿನಲ್ಲಿ ನಾನು ಹೊರಟಿರುವ ದಾರಿ ಸಾಮಾನ್ಯ ಜನಜೀವನದ ದಾರಿಯಿಂದ ಬಲು ಉನ್ನತವಾದುವೇನೋ ಸರಿ. ಅದರಲ್ಲಿ ನನಗೆ ಯಶಸ್ಸು ದೊರೆಯುವದು ಎಂದಾದರೆ ನಾನು ಹೊರಟಿರುವ ಈ ಕವಲು ದಾರಿಯು ನನ್ನನ್ನು ಬನೇಶ್ವರಕ್ಕೆ ಒಯ್ದು ಮುಟ್ಟಿಸಲಿ. ಇಲ್ಲವಾದರೆ ನನ್ನನ್ನು ಅಡವಿಯ ಪಾಲು ಮಾಡಲಿ. ಈ ನನ್ನ ಪ್ರಥಮ ಪ್ರಯತ್ನದಿಂದಲೇ

ನನ್ನ ಭವಿಷ್ಯವೆಲ್ಲ ನಿರ್ಣಯವಾಗುವದು. ಭಗವಂತನ ಇಚ್ಛೆ ಹೇಗಿರುವದೋ ನೋಡೋಣ ಎಂದು ಆಲೋಚಿಸುತ್ತ ಮುಂದುವರಿದರು.

ಪರಮಾತ್ಮನು ಮಹಾ ಕರುಣಾಳು. ತನ್ನನ್ನು ಅನುಸರಿಸಿ ಹೊರಟವರಿಗೆ ದಾರಿತೋರಿ ಆವಶ್ಯಕವಿರುವಾಗ ಕೈಹಿಡಿದು ತನ್ನೆಡೆಗೆ ಕರೆದುಕೊಳ್ಳುವನು. ತಾಯಿಯನ್ನು ಕಳೆದುಕೊಂಡು ಅರಸುತ್ತಿರುವ ಮಗುವನ್ನು ತಾಯಿಯೂ ಅರಸುತ್ತ ಬರುವಂತೆ ಭಗವಂತನನ್ನು ಹುಡುಕಲು ಹೊರಟವರ ಬಳಿಗೆ ಭಗವಂತನೂ ಸಾಗಿಬಂದು ಕರೆದೊಯ್ಯುವನು. ಶ್ರೀಧರರು ಹೊರಟದಾರಿಯು ನಿಜವಾಗಿಯೂ ಬನೇಶ್ವರದ ದಾರಿಯಾಗಿತ್ತು. ಊರ ಹೊರಗಣ ಮಾರುತಿಯ ಗುಡಿಯು ಶ್ರೀಧರರಿಗೆ ಮೊದಲು ಕಾಣಿಸಿತು. ತೊಯ್ದ ಬಟ್ಟೆಯನ್ನು ಹಿಂಡಿ ಹೊರಗೆ ಒಣಹಾಕಿ ಕೌಪೀನವೊಂದನ್ನೇ ಧರಿಸಿ ಒಳಗೆ ಗರ್ಭಗುಡಿಯನ್ನು ಪ್ರವೇಶಿಸಿದರು. ಅನನ್ಯ ಭಕ್ತಿಯಿಂದ ಮಾರುತಿಯನ್ನು ಪ್ರಾರ್ಥಿಸಿ ನೀನೇ ನನಗೆ ಮಾರ್ಗದರ್ಶಕನಾಗು ಎಂದು ಬೇಡಿಕೊಂಡು ಹೊರಗೆ ಬಂದರು. ತುಸು ದೂರದಲ್ಲಿಯೇ ಜನವಸತಿಯಿರುವದು ಕಾಣಿಸಿತು. ಶ್ರೀಧರರು ಜನವಸತಿಗೆ ಬಂದು ಒಂದು ಮನೆಯ ಮುಂದೆ ನಿಂತು ಬನೇಶ್ವರ ದೇವಾಲಯಕ್ಕೆ ಹೋಗುವ ದಾರಿಯನ್ನು ವಿಚಾರಿಸಿದರು. ಮನೆಯ ಯಜಮಾನನು 'ನಿಮಗೇನು ಹುಚ್ಚು ಹಿಡಿದಿದೆಯೇ? ಈ ಕತ್ತಲಲ್ಲಿ ಅಲ್ಲಿಗೆ ಹೋಗುವದು ಸಾಧ್ಯವಿಲ್ಲ. ದಾರಿಯಲ್ಲಿ ಅನೇಕ ಸರ್ಪಗಳಿವೆ. ಈಹೊತ್ತಿನಲ್ಲಿ ಅನುಷ್ಠಾನ ಮಾಡುವವರ ಹೊರತು ಇನ್ನಾರೂ ಅಲ್ಲಿಗೆ ಹೋಗುವದಿಲ್ಲ. ನಾಳೆ ಬೆಳಗ್ಗೆ ಹೋಗುವಿರಂತೆ' ಎಂದನು. ಪ್ರಾತಃಕಾಲದ ಒಳಗೆಯೇ ನಾನು ಅಲ್ಲಿಗೆ ಮುಟ್ಟಬೇಕು. ದಯವಿಟ್ಟು ಯನ್ನು ತೋರಿಸಿರಿ, ಎಂದರು, ಶ್ರೀಧರರು. ಅವನು ದಾರಿಯನ್ನು ಹೇಳದೆ ಒಳಗೆ ನಡೆದನು.

ಶ್ರೀಧರರು ಮುಂದೆ ಸಾಗಿ ಮತ್ತೊಂದು ಮನೆಯ ಮುಂದೆ ನಿಂತು ದಾರಿಯನ್ನು ಕೇಳಿದರು. ಅವರೂ ಉತ್ತರ ಕೊಡಲಿಲ್ಲ. 'ಇನ್ನೊಂದು ಕಡೆ ವಿಚಾರಿಸೋಣವೆಂದು ಶ್ರೀಧರರು ಮುಂದೆ ಸಾಗಿದರು. ಮೂರನೆಯ ಮನೆಯ ಎದುರಿಗೆ ಹೋಗಿ 'ಅಪ್ಪಾ, ಬನೇಶ್ವರ ದೇವಾಲಯಕ್ಕೆ ಹೋಗುವ ದಾರಿ ಯಾವದು' ಎಂದು ಒದರಿ ಕೇಳಿದರು. ಮನೆಯ ಯಜಮಾನನು ಸದ್ಗೃಹಸ್ಥನಾಗಿದ್ದನು. ಅವನು ಹೊರಗೆ ಬಂದು 'ಈ ಕತ್ತಲಲ್ಲಿ ಅಲ್ಲಿಗೆ

ಹೋಗುವ ಅವಸರದ ಕೆಲಸವೇನು ? ನಾಳೆ ಮುಂಜಾನೆ ಹೋಗಬಾರದೇ ? ನಿಮಗೆ ಹೋಗಲೇಬೇಕಿದ್ದರೆ ದೇವಾಲಯದಲ್ಲಿ ಅನುಷ್ಠಾನ ಮಾಡುವವರೊಬ್ಬರು ದಿನಾಲು ಇದೇ ಹೊತ್ತಿಗೆ ಅಲ್ಲಿಗೆ ಹೋಗುತ್ತಾರೆ. ಅವರು ಬರುವ ಹೊತ್ತಾಯಿತು. ಅವರು ದೀಪವನ್ನೂ ತಂದಿರುತ್ತಾರೆ....' ಮಾತು ನಡೆದಿರುವಾಗಲೇ ದೂರದಲ್ಲಿ ದೀಪದ ಬೆಳಕು ಕಾಣಿಸಿತು. 'ಆಗೋ ನೋಡಿ, ಅವರು ಹೊರಟಿದ್ದಾರೆ' ಎಂದು ಆ ಬೆಳಕನ್ನು ತೋರಿಸಿದನು. ಶ್ರೀಧರರು ಅವರ ಉಪಕಾರಸ್ಮರಿಸಿ ಕಲ್ಲುಮುಳ್ಳೆನ್ನದೆ ಓಡುತ್ತ ಹೋಗಿ ಆ ತಪಸ್ವಿಯನ್ನು ಸಮೀಪಿಸಿದರು. ಅವನು ಮುಂದೆ, ಶ್ರೀಧರರು ಹಿಂದೆ, ತುಸು ದೂರದಲ್ಲಿ ಸಾಗಿದರು. ಬನೇಶ್ವರ ದೇವಾಲಯವು ಬಂದಿತು; ಆತನು ಗುಡಿಯೊಳಗೆ ಹೋಗುವಾಗ ತಿರುಗಿ ಶ್ರೀಧರರನ್ನು ನೋಡಿದನು.

ತಪಸ್ವಿಯು ತುಸು ಮುಂಗೋಪಿ; ಲೌಕಿಕ ಜೀವನಕ್ಕೆ ಅವಶ್ಯವಿದ್ದಷ್ಟು ವೈದಿಕ ವಿದ್ಯೆಯನ್ನು ಕಲಿತವ; ಸುತ್ತಲಿನ ಆವರಣಕ್ಕೆ ಅನುಗುಣವಾಗಿ ಅಷ್ಟರಿಂದಲೇ ಅವನಿಗೆ ತಾನೊಬ್ಬ ಪಂಡಿತನೆಂಬ ಭಾವನೆಯು ಇದ್ದಿತೇನೋ! ತಪಸ್ವಿಯು ತಿರುಗಿ ನಿಂತು ಶ್ರೀಧರರನ್ನು ಸರಿಯಾಗಿ ನೋಡಿದನು. ಅವನಿಗೆ ಶ್ರೀಧರರು ತನ್ನನ್ನು ಅನುಸರಿಸಿ ಬಂದದ್ದು ತಪ್ಪೆನಿಸಿತು. ಏನೇನೋ ಒದರಾಡಿದನು. ಆ ಮಾತುಗಳ ತಾತ್ಪರ್ಯವಿಷ್ಟೆ:– 'ಬೋಳಿಸ್ಕನೆತ್ತಿ, ಬರಿಗಾಲು, ದಂಡ ಒಟ್ಟಿ ಆಗಿ ತಿರುಗುವವರೆಲ್ಲ ಸಾಧುಗಳೇ! ಮೈಮುರಿದು ದುಡಿಯಬೇಕು. ದುಡಿದು ಪ್ರಪಂಚ ಮಾಡಬೇಕು. ಪ್ರಪಂಚದ ಸುಖದುಃಖಗಳನ್ನೆಲ್ಲ ಅನುಭವಿಸಿ ಮನಸ್ಸು ಪರಿಪಕ್ವವಾದ ಬಳಿಕ ವಾನಪ್ರಸ್ಥ ಅಥವಾ ಸಂನ್ಯಾಸ ಆಶ್ರಮವನ್ನು ಸ್ವೀಕರಿಸಬೇಕು. ಅದೇ ಸರಿಯಾದ ಮಾರ್ಗ. ಅದನ್ನೆಲ್ಲ ಬಿಟ್ಟು ಇಂಥ ಎಳೆವಯಸ್ಸಿನಲ್ಲಿಯೇ ಹೀಗೆ ಅಲೆಯುವದು ಸರಿಯಲ್ಲ. ಇದು ಲೌಕಿಕವೂ ಅಲ್ಲ, ಪಾರಮಾರ್ಥವೂ ಅಲ್ಲ. ಇಂಥವರು ಸಮಾಜದ ಮೇಲೆ ಭಾರಹಾಕಿ ಬಾಳುವ ಪರಪುಷ್ಟಪ್ರಾಣಿಗಳು." ನಡುನಡುವೆ '**ಋಣತ್ರಯಮುಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್**' ಮುಂತಾದ ಆಧಾರ ವಾಕ್ಯಗಳನ್ನೂ ಹೇಳುತ್ತಿದ್ದನು.

ಶ್ರೀಧರರು ಆತನನ್ನು ವಿರೋಧಿಸಲಿಲ್ಲ. ಅವನಿಗೆ ಯಾವ ಮಾರುತ್ತರವನ್ನೂ ಕೊಡಲಿಲ್ಲ. ಸುಮ್ಮನೆ ನಿಂತಿದ್ದರು. ಅವರು ಮನಸ್ಸಿನಲ್ಲಿ– " ಪಾರ

ಮಾರ್ಥ ವಿಚಾರ ಗ್ರಹಣಕ್ಕೆ 'ಹುಟ್ಟಿ ಎಷ್ಟು ವರ್ಷಗಳಾದವು ಎಷ್ಟು ಮಕ್ಕಳ ತಂದೆ ಇವನು' ಎಂಬ ನಿರ್ಬಂಧಗಳೆಲ್ಲಿ ಹೇಳಿವೆ? ಈ ಬ್ರಾಹ್ಮಣನಿಗೆ 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್ ಬ್ರಹ್ಮಚರ್ಯಾದೇವ ಪ್ರವ್ರಜೇತ್ ಗೃಹಾದ್ವಾ ವನಾದ್ವಾ' ಎಂಬ ಶ್ರುತಿ ವಚನವು ಗೊತ್ತಿಲ್ಲವೆಂದು ತೋರುತ್ತದೆ. ವೈರಾಗ್ಯ ಭಾವವು ಮನಸ್ಸಿನಲ್ಲಿ ಉತ್ಪನ್ನವಾದ ತಕ್ಷಣ ಮನೆಯನ್ನು ಬಿಟ್ಟು ಹೋಗಬೇಕು. ಬ್ರಹ್ಮಚರ್ಯಾಶ್ರಮದಲ್ಲಿದ್ದಾಗಲೇ ಹೊರಟರೂ ಯಾವ ಅಭಾವವೂ ಇಲ್ಲ. ಗೃಹಸ್ಥಾಶ್ರಮ ವಾನಪ್ರಸ್ಥಾಶ್ರಮಗಳ ಕಾಲದಲ್ಲಿ ಇಂಥ ವೈರಾಗ್ಯವುಂಟಾದರೂ ಅಡ್ಡಿಯಿಲ್ಲ. ಇದಕ್ಕೆ ಬೇಕಾದಷ್ಟು ಆಧಾರಗಳಿವೆ" ಎಂದು ಭಾವಿಸಿಕೊಳ್ಳುತ್ತಿದ್ದರು. ಕೊನೆಗೆ ಈ ಬ್ರಾಹ್ಮಣನಿಗೆ ಏನಾದರೊಂದು ಉತ್ತರವನ್ನು ಹೇಳಬೇಕಲ್ಲ, ಎಂದು ಭಾವಿಸಿ 'ಹಾಗಲ್ಲ, ಶಾಸ್ತ್ರಿಗಳೇ ನಾನು ವಿದ್ಯಾವ್ಯಾಸಂಗಕ್ಕಾಗಿ ಹೊರಟಿದ್ದೇನೆ, ಕ್ಷಮಿಸಿ' ಎಂದರು. 'ಕ್ಷಮಿಸಿ' ಎಂಬುದನ್ನು ಕೇಳಿದೊಡನೆ ಅವನ ಮನಸ್ಸು ಶಾಂತವಾಯಿತು. ಅವನು ತನ್ನ ಕಾರ್ಯಕ್ಕೆ ನಡೆದನು.

ರಾತ್ರಿಯು ಕಳೆದು ಬೆಳಗು ಸಮೀಪಿಸಿತು. ಶ್ರೀಧರರ ಹೃದಯದ ಬೆಳಕೂ ಬೆಳಗಹತ್ತಿತು. ಶ್ರೀಧರರು ಪ್ರಾತರ್ವಿಧಿಗಳನ್ನು ಮುಗಿಸಿ ಹೂ ತುಳಸಿ ಬಿಲ್ವದಳ ಮುಂತಾದ ಪೂಜಾ ಸಾಮಗ್ರಿಗಳನ್ನೆಲ್ಲ ಒದಗಿಸಿಕೊಂಡು ಸ್ನಾನಸಂಧ್ಯಾದಿಗಳನ್ನು ಪೂರೈಸಿ ಬನೇಶ್ವರನ ಸನ್ನಿಧಿಗೆ ಬಂದು ಮೂರ್ತಿಯ ಬಲಭಾಗದಲ್ಲಿ ಶ್ರೀ ಸಮರ್ಥ ರಾಮದಾಸರ ಭಾವಚಿತ್ರವನ್ನು ಸ್ಥಾಪಿಸಿ ಪಂಚೋಪಚಾರ ಪೂಜೆಯನ್ನು ಪೂರೈಸಿದರು. ಮತ್ತು ಶ್ರೀ ಸಮರ್ಥರನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿ ತನ್ನನ್ನು ಅನುಗ್ರಹಿಸಬೇಕೆಂದು ಬೇಡಿಕೊಂಡರು. ಶ್ರೀಧರರಿಗೆ ಶ್ರೀ ಸಮರ್ಥರು ಹೇಗೆ ಅನುಗ್ರಹ ಮಾಡಿದರೆಂಬುದನ್ನು ಇಲ್ಲಿ ಬರೆದು ಬಣ್ಣಿಸಲು ಸಾಧ್ಯವಿಲ್ಲ. ಓದುಗರು ಓದಿ ತಿಳಿಯುವದೂ ಆಗದ ಮಾತು. ಹೀಗೆ ಶ್ರೀಧರರು ಗುರ್ವನುಗ್ರಹವನ್ನು ಪಡೆದು ಶಂಕರನಿಗೆ ಸಾಷ್ಟಾಂಗವಂದನೆ ಮಾಡಿ ಆತನ ಕರುಣಾದೃಷ್ಟಿಯನ್ನು ಕೋರಿ ಗುಡಿಯ ಆವರಣದಲ್ಲಿಯೇ ಜಪಕ್ಕೆ ಕುಳಿತರು. *ಹಬ್ಬದ ದಿನವಾ

* ಆ ವರುಷ ಬುಧವಾರ, ಗುರುವಾರ ಈ ಎರಡು ದಿನವೂ ವಿಜಯದಶಮಿ ಇದ್ದಿತು.

ದುದರಿಂದ ಕೆಲವರು ಬನೇಶ್ವರನಿಗೆ ಪೂಜೆ ಅರ್ಚನೆ ನೈವೇದ್ಯಗಳನ್ನು ಅರ್ಪಿಸಿ ದರು. ಶ್ರೀಧರರು ಮಧ್ಯಾಹ್ನವು ಸಮೀಪಿಸಿದಾಗ ಊರೊಳಗೆ ಹೋಗಿ ಮಧು ಕರಿ ಮಾಡಿಕೊಂಡುಬಂದು ಈಶ್ವರನಿಗೆ ನೈವೇದ್ಯತೋರಿಸಿ ಊಟಮಾಡಿದರು.

ಶ್ರೀಧರರು ಮಧುಕರಿಗೆ ಹೋದಾಗ ಮಾಮಲೇದಾರರು ಭೆಟ್ಟಿಯಾಗಿ ತಮ್ಮ ಮನೆಗೆ ಊಟಕ್ಕೆಬರಬೇಕೆಂದು ಅವರನ್ನು ಕರೆದರು. ಆಗ ಶ್ರೀಧರರು ಇಲ್ಲ, ನಾನು ಭಿಕ್ಷೆಯಿಂದಲೇ ಜೀವಿಸಬೇಕೆಂದು ನಿರ್ಧರಿಸಿದ್ದೇನೆ ಎಂದರು. ಊಟಕ್ಕೆ ಅನುಕೂಲವಿಲ್ಲದಿದ್ದರೆ ಮಧುಕರಿ ಮಾಡಬಹುದು. ಅನುಕೂಲ ವಿರುವಾಗಲೂ ಭಿಕ್ಷೆಬೇಡುವದೇಕೆ ? ಎನ್ನಲು ಭಿಕ್ಷಾನ್ನವೇ ಪರಮ ಪವಿತ್ರ ವಾದುದು. ಮತ್ತು ಸುಖ ಸೌಕರ್ಯಗಳ ಅನುಕೂಲವಿರುವಾಗಲೂ ಅವನ್ನು ಉಪಯೋಗಿಸಿಕೊಳ್ಳದಿರುವದೇ ವೈರಾಗ್ಯದ ಲಕ್ಷಣ. ಸುಖ ಜೀವನಕ್ಕೆ ಅನು ಕೂಲವಿಲ್ಲದಿರುವಾಗ ಮನಸ್ಸು ವೈರಾಗ್ಯದತ್ತ ಹೊರಳಿದರೆ ಅಷ್ಟೇನೂ ಮಹ ತ್ವದ ಮಾತಲ್ಲ ಎಂದು ನುಡಿದು ಶ್ರೀಧರರು ಮುಂದುವರಿದರು.

ಊಟವಾದ ಬಳಿಕ ಪುಣೆಯಿಂದ ಹೊರಡುವಾಗ ಪಳಣೀಟಕರರು ಕೊಟ್ಟಿದ್ದ ಒಂದು ರೂಪಾಯಿಯನ್ನು ಪೂಜಾರಿಗೆ ಕೊಟ್ಟು ದೇವರಿಗೆ ಕೈಮುಗಿದು ಸಜ್ಜನಗಡದ ದಾರಿಯಿಂದ ಮುಂದೆ ಸಾಗಿದರು.

'ನಡೆವಾಗ ನುಡಿವಾಗ ಹರಿಯೆಂದು ನೆನೆವರ ಬಡವರ ತಂದೆ ತಾನೆಂದ' ಎಂಬ ಭಗವದುಕ್ತಿಯನ್ನು ಸ್ಮರಿಸಿ ರಾಮನಾಮ ಸ್ಮರಣೆಮಾ ಡುತ್ತ ಶ್ರೀಧರರು ಸಜ್ಜನಗಡದ ಮಾರ್ಗದಲ್ಲಿ ಮುಂದುವರಿದರು. ಭಗವ ನ್ನಾಮ ಸ್ಮರಣೆಯಲ್ಲಿ ತನ್ಮಯರಾಗಿದ್ದ ಶ್ರೀಧರರಿಗೆ ದಾರಿ ನಡೆದ ದಣಿವಾ ಗಲಿ ಮಾರ್ಗದಲ್ಲಿಯ ಇನ್ನಾವ ದೃಶ್ಯವೇ ಆಗಲಿ ಗೋಚರವಾಗುತ್ತಿರಲಿಲ್ಲ. ಹಗಲೆಲ್ಲ ಮಾರ್ಗ ಕ್ರಮಣ ನಡೆದೇ ಇರುವದು. ನೀರು ಕಂಡಲ್ಲಿ ನಿಂತು ಸ್ನಾನಾಹ್ನಿಕಗಳನ್ನು ಮುಗಿಸಿ ಮುಂದುವರಿಯುವರು. ರಾತ್ರಿಯಾದಾಗ ವಿಶ್ರಮಿಸುವರು. ಬಹುಶಃ ಊರ ಹೊರಗಿನ ದೇವಾಲಯದಲ್ಲಿ ಮಲಗು ವರು. ಪ್ರಾತಃಕಾಲ ನಾಲ್ಕು ನಾಲ್ಕೂವರೆ ಗಂಟೆಗೆ ಎದ್ದು ಸ್ನಾನಮಾಡಿ ಸೂರ್ಯೋದಯವಾಗುವವರೆಗೂ ಶ್ರೀರಾಮ ಮಂತ್ರವನ್ನು ಜಪಿಸಿ ಬಳಿಕ ಸಂಧ್ಯಾವಂದನೆ ಮಾಡುವರು. ೧೨೦೦ ಗಾಯತ್ರೀ ಜಪ ಪೂರ್ಣವಾದ ಮೇಲೆ ದೇವರ ಪೂಜೆ ಮಾಡಿ ಮುಂದಿನ ದಾರಿಯನ್ನು ಹಿಡಿಯುವರು.

ಮಧ್ಯಾಹ್ನ ೧೨ ಗಂಟೆಯವರೆಗೆ ಮಾರ್ಗ ಕ್ರಮಣಮಾಡಿ ಪುನಃ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಭಿಕ್ಷೆಗೆ ಹೋಗಿ ದೊರೆದ ಭಿಕ್ಷಾನ್ನವನ್ನು ದೇವರಿಗೆ ನೈವೇದ್ಯ ಸಮರ್ಪಿಸಿ ಪ್ರಸಾದ ತೆಗೆದುಕೊಂಡು ಸ್ವಲ್ಪ ವಿಶ್ರಮಿಸಿ ಮತ್ತೆ ಪ್ರಯಾಣ ಹೊಂಡುವರು.

ಈ ರೀತಿ ಮಾರ್ಗಕ್ರಮಣಮಾಡಿ ಸಾತಾರೆಗೆ ತಲುಪಿದರು. ಊರ ಹೊರಗಿನ ಮಾರುತಿಯ ಮಂದಿರವನ್ನು ತಲುಪಿದಾಗ ಸಾಯಂಕಾಲವಾಗುತ್ತ ಬಂದಿತ್ತು. ಅಂದಿನ ಸಾಯಂಕಾಲದ ಆಹ್ನಿಕಗಳನ್ನೆಲ್ಲ ಮುಗಿಸಿ ಶ್ರೀ ಮಾರುತಿಯ ಸನ್ನಿಧಿಯಲ್ಲಿ ವಿಶ್ರಾಂತಿ ಪಡೆದರು. ಮರುದಿನ ಎಂದಿನಂತೆ ಪ್ರಾತಃ ಸಂಧ್ಯಾದಿಗಳನ್ನು ಮುಗಿಸಿ ಸಜ್ಜನಗಿರಿಯ ದಾರಿಯನ್ನು ಹಿಡಿದರು.

ಸಾತಾರೆಯಿಂದ ಪಶ್ಚಿಮಕ್ಕೆ ಆರೇಳು ಮೈಲು ದೂರದಲ್ಲಿ ಶ್ರೀ ಸಜ್ಜನಗಿರಿಯಿರುವದು. ಸಾತಾರೆಯ ಊರನ್ನು ದಾಟಿದಾಗ ಬಲಭಾಗದಲ್ಲಿ ದೂರದಲ್ಲಿ ಸಜ್ಜನಗಿರಿಯ ದರ್ಶನವಾಗುವದು. ಶ್ರೀಧರರು ಸಜ್ಜನಗಿರಿಯ ದರ್ಶನದಿಂದ ಆನಂದ ಪರವಶರಾಗಿ ಅಲ್ಲಿಂದಲೇ ಕೈಮುಗಿದು 'ಜಯ ರಘುವೀರ ಸಮರ್ಥ!' ಎಂದು ಜಯಘೋಷ ಮಾಡಿ ಮುಂದುವರಿದರು.

ತುಸು ದೂರ ಹೋದಬಳಿಕ ದಾರಿಯಲ್ಲಿ ಊರ್ಮಡಿ ನದಿಯು ಹತ್ತುವದು. 'ಊರ್ಮಡಿ' ಎಂಬದು 'ಊರ್ವಶಿ' ಶಬ್ದದ ಅಪ ಭ್ರಂಶರೂಪ. ಶ್ರೀ ಸಮರ್ಥರು ಏಕಾಂತ ಸ್ಥಳದಲ್ಲಿ ಧ್ಯಾನಮಗ್ನರಾಗಿ ಕುಳಿತಾಗ ಅವರ ತಪೋಭಂಗಮಾಡುವದಕ್ಕಾಗಿ ಇಂದ್ರನು ಊರ್ವಶಿಯನ್ನು ಕಳುಹಿಸಿದನು. ಸಮಾಧಿಮಗ್ನರಾದ ಶ್ರೀಸಮರ್ಥರು ಎಷ್ಟೋ ಹೊತ್ತಿನ ತರುವಾಯ ಬಾಹ್ಯ ಸೃಷ್ಟಿಗೆ ಇಳಿದಾಗ ಎದುರುಗಿರುವ ಊರ್ವಶಿಯನ್ನು ನೋಡಿ 'ಇಂದ್ರನು ವಿಘ್ನವನ್ನೊಡ್ಡುವದಕ್ಕಾಗಿ ಕಳುಹಿಸಿರುವನಲ್ಲವೇ?' ಎಂದುಕೊಂಡು ಮಾರುತಿರಾಯನ ಭೀಮಸ್ವರೂಪ ಧಾರಣೆಮಾಡಿ ನಿಂತರು. ಆ ಭೀಕರ ಸ್ವರೂಪವನ್ನು ನೋಡಿ ಊರ್ವಶಿಯು ಕರಗಿಹೋಗಿ ನದಿಯಲ್ಲಿ ಸೇರಿ ಹರಿಯಹತ್ತಿದಳು.

ಶ್ರೀಸಮರ್ಥರ ದರ್ಶನಕ್ಕೆ ಹೋಗುವವರು ದಾರಿಯಲ್ಲಿ ಹರಿದಿರುವ ಈ ನದಿಯಲ್ಲಿ ಸ್ನಾನಮಾಡಿ ಮುಂದುವರಿಯುವರು. ಇದು 'ಕಾಮಜಯ' ತೀರ್ಥವೆಂಬ ಭಾವನೆಯಿದೆ. ಏಕೆಂದರೆ ಈ ನದಿಯಲ್ಲಿ ಶ್ರೀಸಮರ್ಥರ ಬ್ರಹ್ಮಚರ್ಯೆಯ ಪ್ರಭಾವವು ಸಮಾವಿಷ್ಟವಾಗಿದೆ.

ಶ್ರೀಧರರು ಊರ್ಮ್ಡಿನದಿಗೆ ತಲುಪಿದಾಗ ಸುಮಾರು ಒಂಬತ್ತು ಗಂಟೆಯಾಗಿತ್ತು. ಅವರು ಈ ಕಾಮಜಯ ತೀರ್ಥದಲ್ಲಿ ಸ್ನಾನಮಾಡಿ ಸಜ್ಜನಗಿರಿಯ ಎದುರು ನಿಂತು 'ಜಯ ರಘುವೀರ ಸಮರ್ಥ' ಎಂದು ಘೋಷಣೆ ಮಾಡಿ 'ಪ್ರಭೋ, ಇನ್ನು ಮುಂದಿನ ನನ್ನ ಭವಿತವ್ಯವು ನಿನ್ನನ್ನೇ ಕೂಡಿತು. ಈ ದೇಹವೂ ನಿನ್ನದೇ! ಈ ಮನಸ್ಸೂ ನಿನ್ನದೇ! ಈ ದೇಹವನ್ನು ರಕ್ಷಿಸಿ ಮನಸ್ಸನ್ನು ಯೋಗ್ಯಮಾರ್ಗದಲ್ಲಿ ತೊಡಗಿಸಿ ನಿನ್ನ ಸಾಕ್ಷಾದ್ದರ್ಶನಕೊಟ್ಟು ಪಾವನಗೊಳಿಸಿ ಜಗದುದ್ಧಾರವನ್ನು ಮಾಡಿಸುವ ಭಾರವೆಲ್ಲಾ ನಿನ್ನದು' ಎಂದು ಪ್ರಾರ್ಥಿಸಿ ಸಂಗಡ ತಂದ ಸಾಮಗ್ರಿಗಳನ್ನೆಲ್ಲ ಅಲ್ಲಿಯೇ ಬಿಟ್ಟು ಒಂದೇಒಂದು ಪಂಜೆಯನ್ನಷ್ಟೇ ಉಳಿಸಿಕೊಂಡು ಆ ಪುಣ್ಯಗಿರಿಗೆ ಮಂದಿಸಿ ಮಾರ್ಗಕ್ರಮಣಮಾಡಿ ಎರಡು ಎರಡೂವರೆ ಗಂಟೆಯ ಸಮಯಕ್ಕೆ ಶ್ರೀಸಜ್ಜನಗಿರಿಗೆ ಮುಟ್ಟಿದರು.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಭಗವಾನ್ ಶ್ರೀಧರ ಮಹಾಸ್ವಾಮಿಗಳವರ ಸಂಕ್ಷಿಪ್ತ ಚರಿತ್ರೆಯ ವಿದ್ಯಾರ್ಥಿ ಸಂಪುಟವು ಮುಗಿದುದು.

[ಇದು ಭಕ್ತ ಮಹಾಜನರು ಸಂಗ್ರಹಿಸಿ ಪ್ರಕಟಿಸಿದ ಶ್ರೀ ಶ್ರೀಧರ ಗುರುವರೇಣ್ಯರ ಚರಿತ್ರ ಸಂಗ್ರಹ. ಇದನ್ನು ಓದಿಸಿ ಕೇಳಿದಾಗ ಶ್ರೀಗಳವರಿಗೆ ತಕ್ಕಷ್ಟು ಸಮಾಧಾನವಾದಂತೆ ಕಂಡುಬರಲಿಲ್ಲ. ಎಷ್ಟೋ ಮಹತ್ವದ ಮಾತುಗಳು ಉಳಿದು ಹೋದಂತೆ ಅವರ ಅಭಿಪ್ರಾಯವಾಯಿತು. ಆದ್ದರಿಂದ ಮತ್ತೆ ಅಲ್ಲಲ್ಲಿ ಸೇರಿಸಬೇಕಾಗಿರುವ ಕೆಲ ಕೆಲವು ಸಂಗತಿಗಳನ್ನು ಅವರಿಂದ ಕೇಳಿ ಬರೆದುಕೊಂಡು ಪುನಃ ಮುದ್ರಿಸಿ ಇಲ್ಲಿ ಸೇರಿಸಲಾಗಿದೆ. ಮುಂದಿನ ಮುದ್ರಣದಲ್ಲಿ ಇವನ್ನು ಅಲ್ಲಲ್ಲಿ ಸೇರಿಸಿ ಸರಿಪಡಿಸಲಾಗುವದು. ಸದ್ಯಕ್ಕೆ ಓದುಗರು ಈ ಟಿಪ್ಪಣೆಗಳನ್ನು ತಕ್ಕ ಸ್ಥಳದಲ್ಲಿ ಹೊಂದಿಸಿಕೊಂಡು ಓದಬೇಕೆಂದು ಬಿನ್ನವಿಸುವೆವು.]

ಬಾಲ್ಯದ ಕೆಲವು ಘಟನೆಗಳು

(ಇವು ಮೂರನೆಯ ಪ್ರಕರಣಕ್ಕೆ ಸಂಬಧಿಸಿದವು)

(೧) ಶ್ರೀಧರನ ಬಾಲ್ಯದ ಕೆಲವು ಭಾವನೆಗಳು, ಅವನ ಪ್ರತಿಭಾ ಶಕ್ತಿಯನ್ನೂ ಅವನ ಗುಣಗಾಂಭೀರ್ಯವನ್ನೂ, ಅವನು ಮುಂದೆ ಅಂಗಿಕರಿಸಲಿರುವ ಅಘಟಿತ ಕಾರ್ಯದ ಸಂಕೇತವನ್ನೂ ಅವನ ಮನೋದಾರ್ಢ್ಯವನ್ನೂ ಸ್ವಾಮಿತ್ವದ ಕುರುಹನ್ನೂ ವ್ಯಕ್ತಗೊಳಿಸುವುವು.

ನಮ್ಮ ಶ್ರೀಧರನಿಗೆ ಐದುವರುಷ ತುಂಬಿರಬಹುದು. ಆಗಲೇ ಅವನು ಸರ್ವರಿಗೂ ಪರಿಚಿತನಾಗಿದ್ದನು. ಪರಿಚಿತನಾಗಿರುವುದು ಮಾತ್ರವಲ್ಲ; ಅಂದು ಅವನು ಸರ್ವರಲ್ಲಿಯೂ ಇಟ್ಟಿರುವ ಮಮತೆ, ದಯಾಪರತ್ವ, ಸಹಾನುಭೂತಿ ಇವೆಲ್ಲವೂ ಸರ್ವಾತ್ಮ ಭಾವನೆಯ ನಿದರ್ಶಕಗಳಾಗಿ ಅವನ ಆ ಚಿಕ್ಕ ವಯಸ್ಸಿನಲ್ಲಿಯೇ ಕಂಡುಬರುತ್ತಿದ್ದವು.

ಅವನಿರುವ ಪ್ರದೇಶದಲ್ಲೊಂದು ಬಾವಿಯಿದ್ದಿತು. ಆದರೆ ಆ ಬಾವಿಯ ಸುತ್ತು ಮುತ್ತಲೂ ಕುಂಬಾರ ಹುಳವೆಂಬ ಒಂದು ಜಾತಿಯ ಜಂತುವು ವಾಸಿಸಿದ್ದು ಅದು ನೀರನ್ನು ತರುವದಕ್ಕೆ ಅಲ್ಲಿಗೆ ಹೋದ ಜನರನ್ನು ಕಚ್ಚಿ ಹಿಂಸಿಸುತ್ತಿದ್ದಿತು. ಅದು ಕಚ್ಚಿದರೆ ಚೇಳು ಕಚ್ಚಿದಂತೆ ನೋವಾಗುವುದು. ಆದ್ದರಿಂದ ಆ ಹುಳದ ಮೂಲಕವಾಗಿ, ನೀರನ್ನು ತರಲು ಸಾಧ್ಯವೇ ಆಗುತ್ತಿರಲಿಲ್ಲ. ಅದನ್ನು ನೋಡಿ ಒಮ್ಮೆ ವೃದ್ಧ ಹೆಂಗುಸೊಬ್ಬಳು ಶ್ರೀಧರನ ಬಳಿಗೆ ಬಂದು, " ಅಪ್ಪಾ ! ನೋಡು, ಆ ಬಾವಿಯ ಸಮೀಪಕ್ಕೆ ಹೋಗುವಂತೆಯೇ ಇಲ್ಲವಾಗಿದೆ. ಹೋದಕೂಡಲೇ ಅಲ್ಲಿದ್ದ ಹುಳವು ಕಚ್ಚಿ ವಿಪರೀತವಾಗಿ ಹಿಂಸಿಸುವುದು. ಆದ್ದರಿಂದ ಆ ಬಾವಿಯಿಂದ ನೀರನ್ನು ತರಲಿಕ್ಕೆ ಹೇಗೂ ಸಾಧ್ಯವಿಲ್ಲವಾಗಿದೆ." ಎಂದು ಹೇಳಿದಳು. ಅದನ್ನು ಕೇಳಿ ಶ್ರೀಧರನಿಗೆ ಬೇಸರವಾಯಿತು. ಏನುಮಾಡಬೇಕಾಯಿತು ಎಂದು ಕ್ಷಣ ನಿಮಿಷ ಯೋಚಿಸಿದನು. ಕೂಡಲೇ ಅವನಿಗೊಂದು ಉಪಾಯವು ಸೂಚಿಸಿತು. " ಅವೆಲ್ಲವೂ ದುಷ್ಟ ಜಂತುಗಳು. ಅವುಗಳಿಂದ ಈಜನ್ಮದಲ್ಲಿ ಪರರಿಗೆ ಉಪಕಾರವಾಗದೆ ಅಪಕಾರವೇ ಆಗುತ್ತಿರುವುದು. ಇವು ಈ ಜನ್ಮದಲ್ಲಿ ಮಾಡುವುದೇನು ?ಪರರ ಹಿಂಸೆಯ ವಿನಹ ಮತ್ತೇನನ್ನೂ ಮಾಡಲಾರವು. ಇವು ಜೇನು ಹುಳವಿನಂತೆ ಅಲ್ಲ. ಜೇನು ಹುಳವು ಪರರಿಗಾಗಿ ತುಪ್ಪವನ್ನಾದರೂ ಸಂಗ್ರಹಿಸಿಡುವುದು. ಪಂಚಾಮೃ

ತಾದಿಗಳಲ್ಲಿ ಅವರ ಉಪಯೋಗವು ದೇವರಿಗೂ ಆಗುವುದು. ಆದರೆ ಈ ಕುಂಬಾರ ಹುಳಗಳಿಂದ ಕಚ್ಚುವುದರ ಹೊರತಾಗಿ ಯಾವ ವಿಧದಿಂದಲೂ ಉಪಕಾರವಾಗದು. ಇದು ಮನೆಯಲ್ಲಿ ಗೂಡು ಕಟ್ಟಿದರೆ ಮನೆಯ ಜನರಲ್ಲಿ ಕಲಹಾದಿಗಳು ಉದ್ಭವಿಸುವವು ಎಂದು ಹೇಳುವದೂ ಉಂಟು. ಇದನ್ನು ಅಪಶಕುನದ ಹುಳವೆಂತಲೂ ಹೇಳುವರು.

ಒಬ್ಬ ದುಷ್ಟನನ್ನು ನಷ್ಟಪಡಿಸಿದರೆ ಅದರ ಮೂಲಕ ಅನೇಕ ಒಳ್ಳೆಯ ಜನರ ಬಾಧೆಯನ್ನು ನಷ್ಟಪಡಿಸಿದಂತಾಗುವುದು.

ಇವನ್ನೆಲ್ಲ ಕೊಂದು ಹಾಕಿದರೆ ಏನಾಗುವುದು ? ದುಷ್ಟರ ವಧೆಯಿಂದ ಸಜ್ಜನರ ಸಂರಕ್ಷಣೆಯಾಗಿ ಅವರಿಂದ ಬಹುಜನ ಸಮಾಜಕ್ಕೆ ಉಪಕಾರವಾಗುವುದು. ಅಲ್ಲದೆ, ನನ್ನಿಂದ ಇವು ಮೃತಪಟ್ಟರೆ ಇವುಗಳಿಗೆ ಮುಂದಿನ ಜನ್ಮವು ಒಳ್ಳೆಯದಾಗಿ ಬಂದು ಇವೂ ತಮ್ಮ ಉದ್ಧಾರವನ್ನು ಮಾಡಿಕೊಂಡು ಜನರಿಗೂ ನೆರವಾದಾವು. ಅದರಲ್ಲಿಯೂ ರಾಮನಾಮದಿಂದ ಇವನ್ನು ಕೊಂದುಹಾಕುವಲ್ಲಿಯಂತೂ ಇವಕ್ಕೆ ಸಾಯುವ ಕಾಲಕ್ಕೆ ರಾಮನಾಮದ ತಾರಕ ಉಪದೇಶವೇ ಆಗಿ ಜನ್ಮವೂ ಹೋಗಿಬಿಡುವುದೆಂದು ಮನಸ್ಸಿನಲ್ಲಿ ಶ್ರೀಧರನು ವಿಚಾರ ಮಾಡಿದನು. ಹಾಗೆಯೇ ಎದ್ದು ರಾಮಮಂತ್ರವನ್ನು ಉಚ್ಚರಿಸುತ್ತಾ ಆ ಜಂತುಗಳೆಲ್ಲವನ್ನೂ ತುಳಿದು ತುಳಿದು ಅವನ್ನು ಸಂಪೂರ್ಣವಾಗಿ ನಾಶಮಾಡಿದನು. ಅನಂತರ ಇಂದು ಇವೆಲ್ಲಕ್ಕೂ ಸದ್ಗತಿಯನ್ನು ದಯಪಾಲಿಸಿರುವೆನು, ಎಂಬ ಹರ್ಷದಿಂದ ಮನೆಯನ್ನು ಸೇರಿದನು. ಮರುದಿನ ನೀರಿಗಾಗಿ ಹೋದ ಜನರು ಅಲ್ಲಿ ಹುಳಗಳಿಲ್ಲದುದನ್ನು ನೋಡಿ ಇದು ಶ್ರೀಧರನದೇ ಕೆಲಸವಾಗಿರಬೇಕೆಂದು ಭಾವಿಸಿ ಸಂತೋಷದಿಂದಲೂ ನಿರಾತಂಕವಾಗಿಯೂ ನೀರನ್ನು ತೆಗೆದುಕೊಂಡುಹೋದರು.

(೨) ಶ್ರೀಧರನ ದೊಡ್ಡಪ್ಪನವರ ಹೆಸರು ಗೋವಿಂದರಾಯರೆಂಬದು ವಾಚಕರ ನೆನಪಿನಲ್ಲಿರಬಹುದು. ಒಮ್ಮೆ ಗೋವಿಂದರಾಯರು ಸಾಯಂಕಾಲ ಸಂಧ್ಯಾವಂದನೆಯನ್ನು ಮಾಡುತ್ತ ಕುಳಿತಿದ್ದಾಗ ಶ್ರೀಧರನು ತನ್ನ ಸ್ವಭಾವದಂತೆ ಸಮೀಪದಲ್ಲಿಯೇ ಕುಳಿತಿದ್ದನು. ಆಗ ಅವರು ಆಚಮನವನ್ನು ಮಾಡಿ ಕೇಶವಾದಿ ನಾಮಗಳನ್ನು ಉಚ್ಚರಿಸುತ್ತಾ ‘ ಶ್ರೀಧರಾಯ ನಮಃ ’ ಎಂಬ ಮಂತ್ರವನ್ನು ಉಚ್ಚರಿಸಿದರು. ಇದನ್ನು ಕೇಳಿ ನಮ್ಮ ಶ್ರೀಧರನು ಅವರನ್ನು ಕುರಿತು

"ನೀವು ಪ್ರತಿನಿತ್ಯವೂ ನನ್ನನ್ನು ಬಯ್ಯುತ್ತೀರಿ. ಹೊಡೆಯಲಿಕ್ಕೆ ಬರುತ್ತೀರಿ. ಆದರೆ ಸಂಧ್ಯಾನಂದನೆಯ ಕಾಲದಲ್ಲಿ ಮಾತ್ರ ನನ್ನನ್ನು ನಮಸ್ಕರಿಸುತ್ತೀರಿ." ಎಂದು ಉಸುರಿದನು. ಐದು ವರುಷದ ಆ ಬಾಲಕನು ಆ ರೀತಿ ಹೇಳಿದುದನ್ನು ನೋಡಿ ದೊಡ್ಡಪ್ಪನವರ ಮನಸ್ಸಿನಲ್ಲಿ ಯಾವ ಭಾವನೆಯು ಮೂಡಿರಬೇಕೆಂದು ನಾವು ವರ್ಣಿಸದೆ, ಅದನ್ನು ಅವರ ಮತ್ತು ಪಾಠಕರ ಅಂತಃಕರಣಕ್ಕೆ ಒಪ್ಪಿಸೋಣ.

(೩) ಸಿಂಹದ ಮರಿಯು ಕುರಿಮರಿಯನ್ನು ಎಂದಿಗೂ ಹೋಲದು. ಅಲ್ಲದೆ ಗಜರಾಜನ ಗಂಡಸ್ಥಳವನ್ನು ಸೀಳಬಲ್ಲೆನೆಂಬ ಪ್ರತಿಜ್ಞೆಯನ್ನು ಸಿಂಹದ ಮರಿಯೊಂದೇ ಮಾಡಬಲ್ಲದು. ಕುರಿಮರಿಯಲ್ಲಿ ಆ ಭಾವನೆಯೇ ಬರದು. "ನಾಭಿಷೇಕೋ ನ ಸಂಸ್ಕಾರೋ ಸಿಂಹಸ್ಯ ಕ್ರಿಯತೇ ವನೇ। ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ॥" ಎಂಬಂತೆ ಮನುಷ್ಯನ ಭವಿತವ್ಯವು ಅವನ ಚಿಕ್ಕಂದಿನಲ್ಲಿಯೇ ತೋರಹೂಸುವದು.

ಒಮ್ಮೆ ಶ್ರೀಧರನ ಸ್ನೇಹಿತರೆಲ್ಲರೂ ಒಟ್ಟುಗೂಡಿ ವಿನೋದಾರ್ಥವಾಗಿ ಒಂದುಕಡೆ ಕುಳಿತಿದ್ದರು. ಆಗ ಸಹಜವಾಗಿ ಮಹತ್ವದ ಚರ್ಚೆಯೊಂದು ಪ್ರಾರಂಭವಾಯಿತು. ಎಲ್ಲರೂ ತಮ್ಮ ಭವಿಷ್ಯದ ಧ್ಯೇಯವನ್ನು ಹೇಳಬೇಕೆಂದು ಗೊತ್ತಾಯಿತು. ಅದರಂತೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುತ್ತ ಸಾಗಿದರು. ಅನಂತರ ನಮ್ಮ ಶ್ರೀಧರನ ಸರದಿಯೂ ಬಂದಿತು. ಸರ್ವರೂ ಶ್ರೀಧರನ ಮುಖದಿಂದ ಹೊರಡುವ ವಾಣಿಯನ್ನೇ ನಿರೀಕ್ಷಿಸುತ್ತಿದ್ದರು. ಆಗ ಶ್ರೀಧರನು ಹರ್ಷಗೊಂಡು "ಜಗತ್ತಿನಲ್ಲಿ ಸರ್ವರೂ, ನನ್ನನ್ನು ಸರ್ವಧರ್ಮಪ್ರತಿಪಾದ್ಯನಾದ ಪರಮಾತ್ಮನೆಂದು ಕಾಣಬೇಕು. ನಾನು ಆಯಾ ಧರ್ಮದ ಅನುಯಾಯಿಗಳಿಗೆ ಆಯಾಧರ್ಮದ ಪ್ರಭುವಾಗಿ ಕಂಡು ನನ್ನ ಮೂಲಕ ಅವರೆಲ್ಲರಿಗೂ ಶಾಶ್ವತ ಸತ್ಯಸುಖವು ದೊರಕುವಂತಾಗಬೇಕೆಂಬುದೇ ನನ್ನ ಧ್ಯೇಯ." ಎಂದು ಹೇಳಿದನು. ವಾಚಕರು ಚಿಕ್ಕ ಮಗು ಶ್ರೀಧರನ ಈ ಮಾತಿನ ಅರ್ಥವನ್ನು ಸರ್ವರೀತಿಯಿಂದಲೂ ಗ್ರಹಿಸತಕ್ಕದ್ದಾಗಿದೆ.

ಮಾತೃಶ್ರೀ ಕಮಲಾಬಾಯಿಯವರ ದೇಹಾವಸಾನದ ಸಮಯದಲ್ಲಿ ಬಾಲಕ ಶ್ರೀಧರನು ಹತ್ತಿರ ಕುಳಿತಿದ್ದನು. ತಾಯಿಯವರು ಇಹಲೋಕದ

ಯಾತ್ರೆಯನ್ನು ಪೂರೈಸುವ ವೇಳೆ ಬಂದಿರುವುದೆಂದು ಮನಗಂಡು "ಅಮ್ಮಾ, ನಿನಗೆ ನನ್ನಿಂದ ಇನ್ನು ಏನಾಗಬೇಕು ? ನೀನು ನನಗೆ ಯಾವ ಸೇವೆಯನ್ನು ನಿಯಮಿಸಿದರೂ ನಾನು ಅದನ್ನು ಪೂರ್ಣಗೊಳಿಸುವೆನು" ಎಂದು ಹೇಳಿದನು. ಕಮಲಾಬಾಯಿಯವರು ಅದನ್ನು ಕೇಳಿ ಮಗನ ಹಸ್ತವನ್ನು ಹಿಡಿದು "ಮಗು ! ನೀನು ನಮ್ಮ ಕುಲದ ಹಾಗೂ ಜಗತ್ತಿನ ಕಲ್ಯಾಣವನ್ನು ಎಷ್ಟರ ಮಟ್ಟಿಗೆ ಮಾಡುವೆ ಎಂಬುದನ್ನು ನಾನು ಸಂಪೂರ್ಣ ಅರಿತಿದ್ದೇನೆ. ನಿನ್ನಿಂದ ಕೇಳಿದ ಆತ್ಮ ವಿಚಾರವು ಚೆನ್ನಾಗಿ ದೃಢಗೊಂಡಿದೆ. ಈಗಲೂ ಅದು ಮರೆಯಲಿಲ್ಲ. ಮನಸ್ಸಿನ ಆನಂದವು ಉಕ್ಕುತ್ತಿದೆ. ಆದರೆ ಈಗ ನಿನಗೊಂದು ವಿಚಾರವನ್ನು ಜ್ಞಾಪಿಸುವೆನು. ವತ್ಸ ! ಎಲ್ಲ ಸ್ತ್ರೀ ಸಮಾಜವನ್ನು ನನ್ನ ರೂಪವೆಂದು ತಿಳಿದು ಅವರ ಉದ್ಧಾರವನ್ನು ನೀನು ಮಾಡು. ಈ ಮುಂದೆ ನೀನು ಮಾಡುವ ಸ್ತ್ರೀ ಸಮಾಜದ ಉದ್ಧಾರವೇ ನನ್ನ ಅಖಂಡ ಸೇವೆಯೆಂದು ನಾನು ಭಾವಿಸುತ್ತೇನೆ. ಸ್ತ್ರೀ ಎಂಬ ಭಾವನೆಯಿಂದ ಕಣ್ಣೆತ್ತಿ ನೋಡದಿರುವುದಕ್ಕಿಂತಲೂ ತಾಯಿ ಎಂಬ ಭಾವನೆಯಿಂದ ಅವರೊಡನೆ ಪರಮಾರ್ಥದ ನಾಲ್ಕು ಮಾತುಗಳನ್ನಾಡುವುದು ಮೇಲು. ಇದರಿಂದ ಸ್ತ್ರೀಯರ ಬಗೆಗೆ ದುಷ್ಟಭಾವನೆಯುಂಟಾಗದೆ ತನ್ನ ಉದ್ಧಾರವೂ ಆಗಿ ಅವರ ಉದ್ಧಾರವೂ ಆಗುವುದು. ಜ್ಞಾನಿಯು ಸರ್ವಸಮವಾದ ಆತ್ಮದೃಷ್ಟಿಯನ್ನು ಬಿಟ್ಟು ಸ್ತ್ರೀ ಎಂಬ ದೃಷ್ಟಿಯಿಂದ ಒಂದು ಭೇದ ಕಲ್ಪನೆಯನ್ನಿಟ್ಟುಕೊಂಡರೆ ಅವನಿಗೆ ಅದೇ ಮೃತ್ಯುವಾಗಿ ಪರಿಣಮಿಸುವುದು. ಶ್ರೀಧರ ! ನೀನು ಎಲ್ಲವನ್ನೂ ತಿಳಿದವನು. ನನಗೆ ಯಾವ ಇಚ್ಛೆಯೂ ಇಲ್ಲ. ಈ ಮುಂದೆ ನಿನಗೆ ಒಂದು ತಾಯಿಯಲ್ಲ, ಎಲ್ಲ ಸಕಲ ಸ್ತ್ರೀ ದೇಹವೂ ನಿನಗೆ ತಾಯಿಯಾಗಿರುವುದು. ನನ್ನಂತೆ ಎಲ್ಲರ ಉದ್ಧಾರ ಮಾಡುವದಕ್ಕೋಸ್ಕರ ನಾನು ನನ್ನ ಈ ಮುದ್ದು ಮಗನನ್ನು ಇಲ್ಲಿ ಬಿಟ್ಟುಹೋಗುತ್ತಿದ್ದೇನೆಂದು ನನಗೆ ಹರ್ಷವೇ ಆಗುತ್ತಿದೆ. ನನ್ನ ಈ ಒಂದು ಮಾತನ್ನು ನಡೆಯಿಸುವೆಯಲ್ಲವೆ ? ನನ್ನ ಮಗನು ನನ್ನ ಮಾತನ್ನು ಅಲ್ಲಗಳೆಯುವವನಲ್ಲವೆಂದು ನನಗೆ ಚೆನ್ನಾಗಿ ಗೊತ್ತು. ನನಗೆ ಯಾವ ದುಃಖವೂ ಇಲ್ಲ. ಆನಂದವೇ ಹೆಚ್ಚುತ್ತಿದೆ. ಚಿತ್ತವು ನಿಮಿಷ ನಿಮಿಷಕ್ಕೂ ಸ್ವರೂಪಾಕಾರ ತಾಳುತ್ತಿದೆ. ಈ ಬಗ್ಗೆ ನಿನ್ನ ವಚನವನ್ನು ತೆಗೆದುಕೊಂಡು ಈ ಪಾರ್ಥಿವ ಶರೀರವನ್ನು ಬಿಟ್ಟು ನನ್ನ ಅನಂತಾ

ನಂತ ಆನಂದಸ್ವರೂಪದಲ್ಲಿಯೇ ಕರಗಿಹೋಗುತ್ತೇನೆ, ಎಂದು ಹೇಳಿದಳು. ಶ್ರೀಧರನು ಅತ್ಯಂತ ಮಾತೃಭಕ್ತಿಯಿಂದೊಡಗೂಡಿದವನಾಗಿ "ಅಮ್ಮಾ! ನಾನು ನಿನ್ನ ವಚನವನ್ನು ಸರ್ವಥೈವ ಪಾಲಿಸುವೆನು, ಎಂದು ಭಾಷೆಯಿತ್ತನು. ತಾಯಿಯು ಸಮಾಧಾನಗೊಂಡು ಇಹಲೋಕಯಾತ್ರೆಯನ್ನು ಪೂರೈಸಿದಳು. (ಹಿಂದೆ ೨೩ ನೆಯ ಪುಟದಲ್ಲಿ ಬಂದಿರುವ ವಿಚಾರವನ್ನೇ ಇಲ್ಲಿ ವಿವರಿಸಿ ಹೇಳಲಾಗಿದೆ.)

ಶ್ರೀಧರನಿಗೆ ಅಕ್ಕ ಗೋದಾವರಿಯ ಮೇಲೆ ಬಲು ಪ್ರೇಮ. ರಜೆಯ ದಿನಗಳಲ್ಲಿ ಆಗಾಗ ಅವರ ಮನೆಗೆ ಹೋಗುತ್ತಲಿದ್ದನು. ಗೋದಾವರಿಗೂ ಶ್ರೀಧರನನ್ನು ಕಂಡರೆ ತುಂಬಾ ಅಕ್ಕರೆ, ಅವಳು ಶ್ರೀಧರನ ಸಂಗಡ ಪ್ರೇಮ ದಿಂದ ಮಾತನಾಡುವುದೂ ಬಹಳ. ಒಂದು ದಿನ ಶ್ರೀಧರನು ಮನೆಗೆ ಬಂದಿರಲು, ಎಂದಿನಂತೆ ಬಂಧುಭಗಿನಿಯರು ಹೃದಯವನ್ನು ಅರಳಿಸಿ ಆನಂದದಿಂದ ಹಲವು ಕೆಲವು ಮಾತನಾಡಿದರು. ಮಧ್ಯದಲ್ಲಿ ಗೋದಾವರಿಯು ಶ್ರೀಧರನನ್ನು ಕುರಿತು "ತಮ್ಮಾ! ನೀನು ತುಂಬಾ ಜಾಣನು. ನಿನ್ನ ಭಾವ ನಟನೆ, ನಡೆ ನುಡಿ ನಗು ನೋಟ ಇವೆಲ್ಲವೂ ಅತ್ಯಂತ ಆಕರ್ಷಕವಾಗಿವೆ. ಹಾಗೆಯೇ ಈ ದಿನವೂ ಸಹ ನಿನ್ನ ಬುದ್ಧಿ ಕೌಶಲ್ಯವನ್ನು ಪ್ರಯೋಗಿಸಿ ಇಂದು ಮಧ್ಯಾಹ್ನದ ಒಳಗೆ ನಿನ್ನ ಕೀರ್ತಿಯು ಈ ಊರಲ್ಲೆಲ್ಲ ಹರಡುವ ಯಾವುದಾದರೂ ಒಂದು ಯುಕ್ತಿಯನ್ನು ಹೂಡು. ನಿನ್ನ ಬುದ್ಧಿವಂತಿಕೆಯಿಂದ ಈ ಊರಿನವರೆಲ್ಲರನ್ನು ಮರುಳು ಮಾಡಿದಲ್ಲಿ ನೀನು ನಿಜವಾದ ಜಾಣನೆಂದು ನಂಬುತ್ತೇನೆ.' ಎಂದು ಹೇಳಿದಳು. 'ಆಗಬಹುದು' ಎಂದು ಶ್ರೀಧರನು ಉತ್ತರವಿತ್ತನು. ಕೊಂಚಕಾಲಯೋಚಿಸಿದನಂತರ ಉಪಾಯವೊಂದು ಹೊಳೆಯಿತು. ಮನೆಯ ಮುಂದುಗಡೆ ಕಾಲು ನೀಡಿ ಕುಳಿತು ದಪ್ಪ ಪುಸ್ತಕವೊಂದನ್ನು ಹಿಡಿದು ಕೊಂಡು ಓದುವವನಂತೆ ನಟಿಸುತ್ತಿದ್ದನು. ಆಗ ಅವನನ್ನು ನೋಡಿದವರೆಲ್ಲರೂ ಆಶ್ಚರ್ಯಪಟ್ಟು "ಅಬ್ಬಾ! ಇವನು ಇಷ್ಟು ಚಿಕ್ಕವನಾದರೂ ಎಂಥ ಪುಸ್ತಕವನ್ನೆಲ್ಲ ಓದುತ್ತಿರುವನು! ಎಷ್ಟು ಬುದ್ಧಿವಂತನಾಗಿರುವನು!" ಎನ್ನಹತ್ತಿದರು. ಸ್ವಲ್ಪ ಹೊತ್ತಿನಲ್ಲಿಯೇ ಶ್ರೀಧರನ ಹೊಗಳಿಕೆ ಊರಲ್ಲೆಲ್ಲ ಹರಡಿತು. ಅದನ್ನು ನೋಡಿ ಗೋದಾವರಿಗೆ ತಮ್ಮನ ಮೇಲಿನ ಪ್ರೇಮವು ಇಮ್ಮಡಿಯಾಯಿತು. ಶ್ರೀಧರನ ಬಳಿಗೆ ಬಂದು 'ತಮ್ಮಾ! ನೀನು ಖಂಡಿತವಾಗಿಯೂ ನಮ್ಮ ಊರಿನವರೆಲ್ಲರನ್ನೂ ಮರುಳುಮಾಡಿದ್ದೀಯೆ, ನಿನ್ನನ್ನು

ಎಷ್ಟು ಹೊಗಳಿದರೂ ಸಾಲದು ' ಎಂದಳು. ಶ್ರೀಧರನು ನಸುನಕ್ಕು " ಅಕ್ಕ, ನೀನು ಹೇಳಿದಂತೆ ಮಧ್ಯಾಹ್ನದ ಒಳಗೆ ಸರ್ವತ್ರ ಕೀರ್ತಿ ಹರಡುವ ಉಪಾಯವು ಇನ್ನೇನೂ ತೋಚಲಿಲ್ಲ. ಆದ್ದರಿಂದ ನಿರುಪಾಯವಾಗಿ ಹೀಗೆ ಮಾಡಬೇಕಾಯಿತು. ಈ ಮೂಲಕ ಜನರಿಗೆ ನನ್ನಿಂದ ವಂಚನೆಯಾಗಿರಬಹುದು. ಅದರ ಬಗ್ಗೆ ಕ್ಷಮಿಸು " ಎಂದು ಕೇಳಿಕೊಂಡನು.

ಇಲ್ಲಿ ಬಾಲಕ ಶ್ರೀಧರನು " ನನ್ನಿಂದ ವಂಚನೆಯಾಗಿರಬಹುದು ' ಎಂದು ಅನುಮಾನಾಸ್ಪದವಾದ ನುಡಿಯನ್ನು ಉಚ್ಚರಿಸುವಾಗ ಇದರ ಗಹನ ಗಂಭೀರವಾದ ಗೂಢಾರ್ಥದ ಲಕ್ಷ್ಯವನ್ನು ವಾಚಕರು ಶೋಧಿಸವುದವಶ್ಯವಿದೆ. ಆತ್ಮಸ್ವರೂಪವು ಸರ್ವಜ್ಞವಾಗಿಯೂ ಅದ್ವಿತೀಯವಾಗಿಯೂ ಇರುವಾಗ ಇದರಿಂದ ವಂಚನೆ ಹೇಗೆ ಆಗುವುದು ? ಎಂದು ಶ್ರೀಧರನ ಮನಸ್ಸಿಗೆ ಹೊಳೆದು ಈ ಉಭಯಾರ್ಥಪದವನ್ನು ಪ್ರಯೋಗಿಸಿರಬೇಕು. ನಿತ್ಯ ನಿರ್ವಿಕಾರವಾದ ಶುದ್ಧ ಚೈತನ್ಯಸ್ವರೂಪನಾಗಿ ಪರಿಪೂರ್ಣತೆಯಿಂದಲೂ ಅಖಂಡತೆಯಿಂದಲೂ ಶ್ರೀಧರನೇ ವ್ಯಾಪಿಸಿರುವಾಗ ಆತನು ಯಾರನ್ನು ತಾನೇ ವಂಚಿಸಬಲ್ಲನು ? ಆದುದರಿಂದ ' ವಂಚನೆಯಾಗಿರಬಹುದು ' ಎಂದು ನುಡಿದುದರ ಅರ್ಥವನ್ನು ವಂಚನೆ ಮಾಡಲಿಲ್ಲವೆಂದೇ ತಿಳಿಯತಕ್ಕದ್ದು. ಆದರೂ ವ್ಯಾವಹಾರಿಕ ದೃಷ್ಟಿಯಿಂದ ಅದರ ಸತ್ಯವನ್ನು ಕಾಪಾಡುವುದಕ್ಕಾಗಿ ಈ ರೀತಿ ನುಡಿದಿರುವನು.

(ಶ್ರೀಧರರು ವಿದ್ಯಾರ್ಥಿದಶೆಯಲ್ಲಿದ್ದಾಗಿನ ಒಂದು ಸಂದರ್ಭದ ವಿವರಣೆ)

ಶ್ರೀಧರರ ಅಲೌಕಿಕ ಬುದ್ಧಿಚಾತುರ್ಯ, ಅವರ ವಿಚಾರಪ್ರಣಾಲಿ, ಅವರ ಮನಃಪ್ರವೃತ್ತಿ ಇವನ್ನೆಲ್ಲ ನೋಡಿ ಅವರ ಸ್ನೇಹಿತರಿಗೆ ಆಶ್ಚರ್ಯವಾಗುತ್ತಿತ್ತು. ಕೆಲವರಲ್ಲಿ ಶ್ರೀಧರರು ಅಸಾಮಾನ್ಯ ಪುರುಷರೆಂಬ ಭಾವನೆಯು ಮೂಡಿತ್ತು. ಒಮ್ಮೆ ಎಲ್ಲರೂ ಒಟ್ಟುಗೂಡಿ ಶ್ರೀಧರರ ಪೂರ್ವ ವೃತ್ತಾಂತವನ್ನು ಕೇಳಬಯಸಿದರು. ಶ್ರೀಧರರು ಅವರ ಕುತೂಹಲವನ್ನು ನೋಡಿ ತನ್ನ ತಾಯಿಯಿಂದ ಕೇಳಿದ ಹಲಕೆಲವು ವಿಷಯಗಳನ್ನು ಹೇಳತೊಡಗಿದರು. ಹೇಳುತ್ತ ಹೋದಂತೆಲ್ಲ ಆ ಮಿತ್ರರ ಉತ್ಸುಕತೆಯೂ ಹೆಚ್ಚುತ್ತಿತ್ತು. ಶ್ರೀಧರರು ' ದತ್ತಾತ್ರೇಯನ ಅನುಗ್ರಹದಿಂದ ಜನ್ಮವೆತ್ತಿರುವೆ ' ಎಂದು ಹೇಳಿದ

ತಾಯಿಯ ನುಡಿಯನ್ನೂ, 'ವಿಶ್ವವಂದ್ಯನಾಗಿ ಬಾಳುವನು' ಎಂದು ಹೇಳಿದ ಅಣ್ಣನ ನುಡಿಯನ್ನೂ ಬಾಲ್ಯದ ಇತರ ಅನೇಕ ಘಟನೆಗಳನ್ನೂ ಗೆಳೆಯರ ಕಿವಿಗೆ ಹಾಕಿದರು. ಅವೆಲ್ಲವನ್ನು ಕೇಳಿ ಶ್ರೀಧರರ ಮಿತ್ರನೊಬ್ಬನು ತಮ್ಮ ಮಿತ್ರ ಸಮೂಹವನ್ನು ಉದ್ದೇಶಿಸಿ "ಶ್ರೀಧರನು ದೈವಾಂಶ ಸಂಭೂತನೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇದಕ್ಕೆ ಆತನ ಪೂರ್ವ ವೃತ್ತಾಂತವೇ ಸಾಕ್ಷಿಯಾಗಿರುವುದು. ಅವನ ಈಗಿನ ಮನಃಪ್ರವೃತ್ತಿಯೂ ಕೂಡ ಅದನ್ನೇ ಸೂಚಿಸುತ್ತಿರುವುದು. ಹೀಗಿರುವಾಗ ನಾವು ಶ್ರೀಧರನನ್ನು ಪರಮಾತ್ಮ ಸ್ವರೂಪನೆಂಬ ದೃಷ್ಟಿಯಿಂದಲೇ ಕಾಣುವುದು ಉಚಿತವಾಗಿದೆ" ಎಂದು ಅನೇಕ ರೀತಿಯಲ್ಲಿ ಹೇಳುತ್ತಿದ್ದನು.

ಅಷ್ಟರಲ್ಲಿ ಇನ್ನೊಬ್ಬ ಗೆಳೆಯನು, ಶ್ರೀಧರನು ದೈವಾಂಶಸಂಭೂತನೂ, ವಿಶ್ವವಂದ್ಯನೂ ಆಗಿರುವಲ್ಲಿ ಈಗ ತನ್ನ ಸಾಮರ್ಥ್ಯವೇನನ್ನೂ ತೋರಿಸದಿರಲು ಕಾರಣವೇನು? ಅವನು ನಿಜವಾಗಿಯೂ ಪರಮಾತ್ಮನಾಗಿದ್ದಲ್ಲಿ ಕ್ಷಣ ನಿಮಿಷದಲ್ಲಿ ಅಖಿಲ ಜಗತ್ತನ್ನೂ ಆನಂದಮಯವನ್ನಾಗಿ ಮಾಡಬಹುದಾಗಿತ್ತಲ್ಲ! ಈ ನಿನ್ನ ಮಾತು ಸಹಜವಾಗಿ ಒಪ್ಪತಕ್ಕದ್ದಲ್ಲವಾಗಿದೆ" ಎಂದನು.

ಅದನ್ನು ಕೇಳುತ್ತಲೇ ಮಿತ್ರನು ಪುನಃ ಮುಂದೆ ಬಂದು "ಪರಮಾತ್ಮನು ಮನಸ್ಸು ಮಾಡಿದಲ್ಲಿ ನಿಮಿಷಾರ್ಧದಲ್ಲಿ ಹೊಸ ಸೃಷ್ಟಿಯನ್ನೇ ಮಾಡಬಲ್ಲನು; ಕ್ಷಣಾರ್ಧದಲ್ಲಿ ಅದನ್ನು ಆನಂದಗೊಳಿಸಬಲ್ಲನು, ಎಂಬ ನಿನ್ನ ಮಾತಿನ ಅಭಿಪ್ರಾಯವೂ ಸತ್ಯವಾಗಿದೆ. ಪರಮಾತ್ಮನು, ತನ್ನ ಶಕ್ತಿಯು ಸರ್ವದರಲ್ಲಿಯೂ ಇರುವುದೆಂದು ಸೂಚಿಸುವುದಕ್ಕಾಗಿಯೂ, ಸ್ವಸಾಮರ್ಥ್ಯದಿಂದ ಸರ್ವರೂ ಪರಮಾತ್ಮ ಪದವನ್ನು ಸೇರಬಲ್ಲರೆಂದು ಸ್ಪಷ್ಟಪಡಿಸುವುದಕ್ಕಾಗಿಯೂ, ಮನುಷ್ಯರೂಪದಲ್ಲಿ ಜನ್ಮವೆತ್ತುತ್ತಾನೆ; ಸ್ವಸಾಮರ್ಥ್ಯವನ್ನು ನೆನಪಿನಲ್ಲಿಟ್ಟುಕೊಂಡು ಸಾಮಾನ್ಯ ಮನುಷ್ಯರಂತೆ ವ್ಯವಹಾರವನ್ನು ನಡೆಯಿಸುತ್ತಾನೆ. ಪುರಾಣೇತಿಹಾಸಗಳನ್ನು ನೋಡಿದರೂ ನಮಗೆ ಇದೇ ಮಾತು ಕಂಡುಬರುವುದು

ಪ್ರಭು ರಾಮಚಂದ್ರನು ಸೀತಾದೇವಿಯನ್ನು ಕಳೆದುಕೊಂಡಾಗ ಸಾಮಾನ್ಯ ಮನುಷ್ಯನಂತೆ ಅತ್ತನು. ಅತ್ತಿತ್ತ ಹುಡುಕಾಡಿದನು. ನಿಜವಾದ ಸಂಗತಿ ಅಂದು ಅವನಿಗೆ ಗೊತ್ತಿರಲಿಲ್ಲವೇ? ಕ್ಷಣಾರ್ಧದಲ್ಲಿ ರಾವಣನನ್ನು

ಕೊಂದು ಸೀತಾದೇವಿಯನ್ನು ತರಲು ಆತನಿಂದ ಸಾಧ್ಯವಾಗುತ್ತಿರಲಿಲ್ಲವೇ? ಆದಾಗ್ಯೂ ಹಾಗೆ ಮಾಡದಿರಲು ಕಾರಣವೇನು? ಇವೆಲ್ಲವನ್ನೂ ಸೂಕ್ಷ್ಮವಾಗಿ ಪರ್ಯಾಲೋಚಿಸಬೇಕಾಗಿದೆ.''

"ಶ್ರೀಕೃಷ್ಣನ ಉದಾಹರಣೆಯನ್ನು ತೆಗೆದುಕೊಂಡರೂ ಇದೇ ಮಾತು ಕಂಡುಬರುವುದು. ಅವನು ಕಂಸನ ವಧೆಯನ್ನು ಮೊದಲೇ ಮಾಡಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಅದೆಲ್ಲಕ್ಕೂ ಕಾಲಾವಕಾಶವಿದೆಯೆಂದು ಭಾವಿಸಿ ಮೊದಲು ತಟಸ್ಥನಿದ್ದು ಕ್ರಮೇಣ ಅವನ ಸಂಹಾರ ಮಾಡಿದನು.

ದುರುಳರಾದ ಕೌರವರಿಗೆ ಬುದ್ಧಿಗಲಿಸಿ ಅವರನ್ನು ಅಂಕಿತದಲ್ಲಿಡುವ ಸಾಮರ್ಥ್ಯವು ಕೃಷ್ಣಪರಮಾತ್ಮನಲ್ಲಿ ಇದ್ದಿಲ್ಲವೆಂತಲ್ಲ. ಹಾಗೆ ಪ್ರಥಮದಲ್ಲಿಯೇ ಆ ಕಾರ್ಯವನ್ನು ಮಾಡಿದರೆ ಅರ್ಜುನನಿಗೆ ಆತ್ಮಜ್ಞಾನದ ಉಪದೇಶವಾಗುತ್ತಿರಲಿಲ್ಲ. ತನ್ನಿಮಿತ್ತ ಭಗವದ್ಗೀತೆಯ ಮೂಲಕವಾಗಿ ಜ್ಞಾನಿಯು ಜಾಗತಿಕ ವ್ಯವಹಾರದಲ್ಲಿ ನಿರ್ವಹಿಸತಕ್ಕ ಕರ್ತವ್ಯತತ್ಪರತೆಯ ಅರಿವು ಯಾರಿಗೂ ಆಗುತ್ತಿರಲಿಲ್ಲ. "ಕರ್ಮವನ್ನು ಮಾಡು'' ಎಂದು ಹೇಳಿ ಕರ್ಮಸಂನ್ಯಾಸವನ್ನುಪದೇಶಿಸುವ ಪರಮಾತ್ಮನ ಗೂಢರಹಸ್ಯ ಯಾರಿಗೂ ತಿಳಿಯುತ್ತಿರಲಿಲ್ಲ. ಇಷ್ಟೆಲ್ಲ ಮಹತ್ಕಾರ್ಯಗಳನ್ನು ಮಾಡುವ ಸದುದ್ದೇಶವನ್ನಿಟ್ಟುಕೊಂಡೇ ಆ ಪರಮಾತ್ಮನು ತನ್ನ ಸಾಮರ್ಥ್ಯವನ್ನು ಗೌಪ್ಯವಾಗಿರಿಸಿದ್ದನು. ಪರಮಾತ್ಮನಾಗಲಿ ಮಹಾತ್ಮರಾಗಲೀ ತಮ್ಮ ಸಾಮರ್ಥ್ಯವನ್ನು ಗೌಪ್ಯವಾಗಿರಿಸಿಕೊಂಡು ಸಮಯಾನುಸಾರ ಅದರ ಉಪಯೋಗ ಮಾಡುತ್ತಾರೆ. ಅಂತಹ ತೇಜಸ್ವೀ ಪುರುಷರ ಪ್ರಭಾವವು ಯಾವ ಎಡರು ತೊಡರುಗಳಿಂದಲೂ ತಡೆಯಲ್ಪಡದೆ ತಕ್ಕ ಸಮಯವು ಒದಗಿದೊಡನೆ ತನ್ನಷ್ಟಕ್ಕೆ ತಾನೇ ಪ್ರಕಾಶಿಸಹತ್ತುವದು. ಅಲ್ಲಿಯವರೆಗೂ ಅವರು ಗಾಂಭೀರ್ಯದಿಂದ ಸಮಯವನ್ನು ನಿರೀಕ್ಷಿಸುತ್ತ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವರು. ಇದು ಪ್ರತಿಭಾಶಾಲಿಯ ಲಕ್ಷಣವಾಗಿರುವುದು." ಎಂದು ಹೇಳಿದನು. ಮಿಕ್ಕ ಗೆಳೆಯರೆಲ್ಲರೂ ಸಾವಧಾನದಿಂದ ಇದನ್ನು ಕೇಳುತ್ತ ಕುಳಿತಿದ್ದರು.

"ಹೇಗೇ ಇರಲಿ, ಒಳ್ಳೆಯದನ್ನೇ ಯೋಚಿಸುವುದು ನಮ್ಮ ಕರ್ತವ್ಯವು. ನಮ್ಮ ಶ್ರೀಧರನು ಜಗತ್ಪ್ರಭುವಾಗಿ ಬಾಳಿ ಅಖಿಲ ಜಗತ್ತಿನಲ್ಲಿಯೂ ಶಾಂತಿ

ಹಿಂದೂಸಾಮ್ರಾಜ್ಯವನ್ನು ಸ್ಥಾಪಿಸುವನೆಂದರೆ ಸಂತೋಷದ ಸಂಗತಿಯೇ ಸರಿ." ಎಂದು ಇನ್ನೂ ಕೆಲವರು ನುಡಿದರು.

ಶ್ರೀಧರರು ಗಂಭೀರತೆಯಿಂದ ಇವನ್ನೆಲ್ಲ ಆಲಿಸುತ್ತ ಕುಳಿತಿದ್ದರು. ಮಿತ್ರರೆಲ್ಲರ ಸಂಭಾಷಣೆ ಮುಗಿಯಿತು. ಅವರು ಶ್ರೀಧರರ ಮುಖದಿಂದ ಹೊರಡುವ ಅಮೃತನುಡಿಗಳನ್ನೇ ನಿರೀಕ್ಷಿಸುತ್ತಿದ್ದರು. ಶ್ರೀಧರರು ಅವರೆಲ್ಲರ ಕುತೂಹಲವನ್ನು ನೋಡಿ, " ಮಿತ್ರರೇ !

ಯಸ್ಯ ಮಿತ್ರೇಣ ಸಂಭಾಷಾ ಯಸ್ಯ ಮಿತ್ರೇಣ ಸಂಸ್ಥಿತಿಃ ।
ಯಸ್ಯ ಮಿತ್ರೇಣ ಸಲ್ಲಾಪಸ್ತತೋ ನಾಸ್ತೀಹ ಪುಣ್ಯಭಾಕ್ "

ಮಿತ್ರರ ಸಂಗಡ ಸಂಭಾಷಣೆ, ಮಿತ್ರರ ಸಹವಾಸ, ಮಿತ್ರರ ಸಂಗಡ ಸರಸ ಸಲ್ಲಾಪಗಳು ಇವುಗಳ ಲಾಭವು ಯಾವಾತನಿಗೆ ಆಗಿರುವುದೋ ಅವನಿಗಿಂತಲೂ ಪುಣ್ಯವಂತನೇ ಇಲ್ಲವೆಂದು ಸುಭಾಷಿತಕಾರರು ಹೇಳಿದ್ದಾರೆ. ಈ ದೃಷ್ಟಿಯಿಂದ ನಾನು ಭಾಗ್ಯವಂತನೇ ಸರಿ. ಮಿತ್ರರ ಮುಂದೆ ಯಾವನೂ ತನ್ನ ವಿಚಾರಗಳನ್ನು ಬಚ್ಚಿಡಲಾರನು. ಮಿತ್ರತ್ವದ ಸಂಬಂಧವೇ ಹಾಗಿದೆ. ಇದು ಹೃದಯವನ್ನು ಬಿಚ್ಚುವುದು. ನೀವು ಕೇಳಿದ್ದಕ್ಕೆ ತಾಯಿಯ ಮಾತು ನೆನಪಿಗೆ ಬಂದು, ಇದ್ದ ಸಂಗತಿ, ನನಗೆ ಗೊತ್ತಾಗದೆಯೇ ತಾನಾಗಿ ಹೊರಹೊರಟಿತು. ಯಾವುದೋ ಒಂದು ಸನ್ನಿವೇಶ ಒದಗಿ ' ಅವತಾರ ' ಎಂಬುವುದು ಈ ಹೊತ್ತಿನ ಚರ್ಚೆಯ ವಿಷಯವಾಯಿತು. ಅದನ್ನೇ ನಾವು ವಿಮರ್ಶಿಸಿ ನೋಡೋಣ.

" ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ "

ಯಾವ ಯಾವಾಗ ಧರ್ಮದ ಪ್ರಾಬಲ್ಯವು ಕಡಿಮೆಯಾಗುವುದೋ, ಅಧರ್ಮದ ಪ್ರಾಬಲ್ಯವು ಹೆಚ್ಚುವುದೋ, ಆಗಾಗ ನಾನು ನನ್ನ ಸಂಕಲ್ಪದಿಂದ ಅವತರಿಸುವೆನೆಂದು ಶ್ರೀಕೃಷ್ಣನು ಜಗತ್ತಿಗೆ ಆಶ್ವಾಸನವನ್ನು ಇತ್ತಿರುವನು. ಈ ಆಧಾರದಿಂದ ಧರ್ಮದ ಪುನರುಜ್ಜೀವನಕ್ಕಾಗಿ ಭಗವಂತನ ಅವತಾರವಾಗುವುದೆಂದು ಸ್ಪಷ್ಟವಾಗುವುದು. ಶ್ರೀ ಕೃಷ್ಣನು ಶ್ರೀ ಮಹಾ ವಿಷ್ಣುವಿನ ಅವತಾರ. ಮತ್ಸ್ಯ ಕೂರ್ಮಾದಿ ದಶಾವತಾರಗಳು ಪ್ರಸಿದ್ಧವಾಗಿರುವುವು. ಬ್ರಹ್ಮದೇವನ ಕಾರ್ಯವು ಸೃಷ್ಟಿಯ ಉತ್ಪತ್ತಿರೂಪವಾಗಿರುವುದು. ವಿಷ್ಣುವಿನ ಕಾರ್ಯವು

ಸೃಷ್ಟಿಯ ಪಾಲನೆಯ ರೂಪವಾಗಿರುವುದು. ಮತ್ತು ರುದ್ರನ ಸ್ವರೂಪವು ಸೃಷ್ಟಿಯ ಲಯ ರೂಪವಾಗಿರುವುದು ಎಂದು ಹೇಳಲ್ಪಟ್ಟಿದೆ. "ಧಾರಣಾತ್ ಧರ್ಮಃ" ಸೃಷ್ಟಿಯನ್ನು ಧರಿಸುವುದು ಎಂದರೆ ಸೃಷ್ಟಿಯನ್ನು ಪರಿಪಾಲನೆಮಾಡುವುದಾದ್ದರಿಂದ ಧರ್ಮ ಎಂಬ ಅನ್ವರ್ಥಕ ಹೆಸರು ಅದಕ್ಕೆ ಬಂದಿರುವುದು. ಪಾಲನೆಯ ಅಧಿಕಾರವುಳ್ಳ ವಿಷ್ಣುವು, ಜಗತ್ತನ್ನು ಪರಿಪಾಲಿಸುವಂತಹ ಧರ್ಮವು ಮಾಸಿಹೋದಾಗ ಅದನ್ನು ಮತ್ತೊಮ್ಮೆ ಉಜ್ವಲಗೊಳಿಸಲು ಅವತಾರವನ್ನು ತಾಳುವನೆಂಬುದನ್ನು ಯುಕ್ತಿಯುಕ್ತವಾಗಿಯೂ ತೋರಿಬರುವುದು. "ಧರ್ಮೋ ಧರ್ಮವಿವರ್ಧನಃ" ಧರ್ಮವೆಂತಲೂ, ಧರ್ಮವನ್ನು ಬೆಳೆಸುವವನೆಂತಲೂ ಅವನಿಗೆ ಈ ಕಾರಣದಿಂದಲೇ ಹೆಸರು ಬಂದಿರುವುದು.

ಅವತಾರಗಳಲ್ಲಿ ಅಂಶಾವತಾರವೆಂತಲೂ, ಪೂರ್ಣಾವತಾರವೆಂತಲೂ ಎರಡು ವಿಧವಿರುವುದು. ಇಂತಹ ಅಘಟಿತ ಕಾರ್ಯವನ್ನು ಮಾಡುವ ಆವಶ್ಯಕತೆ ತೋರಿರುವಲ್ಲಿ ಭಗವಂತನು ತನ್ನ ಪೂರ್ಣತೆಯಿಂದ ಅವತಾರವನ್ನು ತಾಳುವನು. ಆಯಾ ಕಾಲದ, ತನ್ನನ್ನು ನಂಬಿದ ಭಕ್ತರ ಕಾರ್ಯಕ್ಕೆ ಬೇಕಾಗುವಷ್ಟು ಸಾಮರ್ಥ್ಯವನ್ನು ಕೊಟ್ಟು ಧರ್ಮದ ಉದ್ಧಾರವನ್ನು ಮಾಡಿಸುವನು. ಭಕ್ತರಲ್ಲಿ ಬಂದ ಈ ಸಾಮರ್ಥ್ಯವು ಅಲ್ಪಾಂಶರೂಪವಾಗಿರುವುದರಿಂದ ಈ ಸಾಮರ್ಥ್ಯದಿಂದ ಕೂಡಿದವರಿಗೆ ಅಂಶಾವತಾರವೆಂದು ಹೇಳುವರು. ಕ್ವಚಿತ್ ಪ್ರಸಂಗದಲ್ಲಿ ಶ್ರೀ ದತ್ತ, ಆಂಜನೇಯ ಮುಂತಾದವರ ಅವತಾರವೂ ಆಗುವುದುಂಟು. ಶ್ರೀಪಾದ, ಶ್ರೀ ನರಸಿಂಹ ಸರಸ್ವತಿ, ಶ್ರೀ ಸಮರ್ಥ ರಾಮದಾಸರು ಮುಂತಾದವರ ಉದಾಹರಣೆಗಳು ಬೇಕಾದಷ್ಟಿವೆ. ಇಂತಹ ಅವತಾರಿಗಳಲ್ಲಿ ಹುಟ್ಟಿದಂದಿನಿಂದಲೇ ನಾನು ಇಂಥವನೆಂಬ ಭಾವನೆಯು ಸ್ಫುಟವಾಗಿ ಕಾಣಿಸಿಕೊಳ್ಳುವುದು. ಸಿದ್ಧ ಪುರುಷರು ಮುಂತಾದ ದೇವಯೋನಿ ವಿಶೇಷಗಳ ಅವತಾರವೂ ಕೂಡ ಕಾರಣಾಂತರದಿಂದ ಆಗಾಗ ಆಗುವುದುಂಟು. ವೈಕುಂಠ ಕೈಲಾಸಾದಿ ಲೋಕಗಳನ್ನು ಪಡೆದು ಅಲ್ಲಿಯೇ ಇದ್ದ ಭಕ್ತೋತ್ತಮರ ಅವತಾರವೂ ಆಗುವುದು. ಕಲ್ಪಾಂತದವರೆಗೂ ಇರುವಂತಹ ಋಷಿಗಳ ಅವತಾರವೂ ಆಗುವುದುಂಟು. ತನ್ನ ಪೂರ್ವ ಜಾತಿಯು ಅಂದರೆ ಪೂರ್ವದೇಹದ ನೆನಪು ಇರುವುದರಿಂದ ಇಂತಹವರಿಗೆ ಜಾತಿಸ್ಮರ

ರೆಂದು ಕರೆಯುವರು. ಭಗವಂತನು ಇಂಥವರಿಂದಲೂ ತನ್ನ ಧರ್ಮ ಕಾರ್ಯವನ್ನು ಮಾಡಿಸಿಕೊಳ್ಳುವನು. ಇವರು ತಾವಾಗಿ ನಾನು ಇಂಥವನ ಅವತಾರವೆಂದು ಹೇಳುವರು. ಶ್ರೀಪಾದರು, ಶ್ರೀ ನರಸಿಂಹ ಸರಸ್ವತಿಗಳು, ತಾವು ಶ್ರೀ ದತ್ತನೆಂದೇ ಹೇಳಿರುವರು. ಶ್ರೀ ಸಮರ್ಥರು ತಾವು ಆಂಜನೇಯನ ಅವತಾರವೆಂದು ಹೇಳಿರುವರು. ಉತ್ತರ ದೇಶದ ಕೆಲವು ಸಾಧುಗಳು 'ತಾನು ಸಿದ್ಧರಲ್ಲಿ ಒಬ್ಬನು.' 'ಇಂತಹ ದೇವಯೋನಿ ನನ್ನದಾಗಿದೆ.' ಎಂದು ಅವರವರ ಭಕ್ತರಿಗೆ ಹೇಳಿದ್ದನ್ನು ಈಗಲೂ ಆಯಾ ಸಾಂಪ್ರದಾಯದವರು ನೆನಪಿಗೆ ತಂದುಕೊಂಡು ಮೂಲ ಪುರುಷನ ಚರಿತ್ರೆಯನ್ನು ಒಳ್ಳೇ ಭಕ್ತಿ ಪ್ರೇಮಗಳಿಂದ ಹೇಳುವರು.

ಶ್ರೀ ತುಕಾರಾಮರು, "ನಾವು ವೈಕುಂಠವಾಸಿಗಳು, ಧರ್ಮ ಕಾರ್ಯಕ್ಕೋಸ್ಕರವೇ ಬಂದಿರುತ್ತೇವೆ. ಋಷಿಮುನಿಗಳ ಹೇಳಿಕೆಯಂತೆ ನಾವು ನಡೆದು ಜನರಿಗೆ ಬೋಧಿಸುವುದೇ ನಮ್ಮ ಕಾರ್ಯ" ಎಂದು ತಮ್ಮ "ಆಮೀ ವೈಕುಂಠವಾಸೀ" ಎಂಬ ಅಭಂಗದಲ್ಲಿ ಹೇಳಿದ್ದು ಸರ್ವವಿಶ್ರುತವಾಗಿದೆ. ತುಲಸೀದಾಸರು ವಾಲ್ಮೀಕಿಯ ಅವತಾರವೆಂದು ಹೇಳುವರು. ಅವರವರ ಅಧಿಕಾರದ ಪ್ರಕಾರ, ಅವರವರು ಧರ್ಮಕಾರ್ಯಗಳನ್ನು ಮಾಡುವರು. ಇಂಥವರಿಗೆ ಧರ್ಮಕಾರ್ಯ ಮಾಡಲು ಆ ಭಗವಂತನು ಆಜ್ಞಾಪಿಸುವನು; ಎಂದರೆ ತನ್ನ ಅಂಶರೂಪವಾದ ಸಾಮರ್ಥ್ಯವನ್ನು ಅವರಿಗೆ ಕೊಟ್ಟು ಅವರಿಂದ ಧರ್ಮಕಾರ್ಯಗಳನ್ನು ಮಾಡಿಸಿಕೊಳ್ಳುವನು. ಎಂದು ನಾವು ಭಾವಿಸಬೇಕು. **"ಪತಿತಪಾವನಾಚೇ ದಾಸ। ತೇ ಹೀ ಪಾವನ ಕರಿತೀ ಜಗಾಸ।"** ಪತಿತಪಾವನನ ದಾಸರೂ ಕೂಡ ಜಗತ್ತನ್ನು ಉದ್ಧರಿಸುವರೆಂದು ಶ್ರೀ ಸಮರ್ಥರು ಹೇಳಿರುವರು.

ಬ್ರಾಹ್ಮಣ ಕುಲದಲ್ಲಿ ಜನಿಸಿದವರೇ ಆಚಾರ್ಯರೂ ಧರ್ಮಸ್ಥಾಪಕರೂ ಎಂದು ಹೇಳಿಸಿಕೊಳ್ಳುವರು. ಇತರ ಜಾತಿಗಳಲ್ಲಿ ಹುಟ್ಟಿದವರು ತಮ್ಮ ತಮ್ಮ ವರ್ಣಧರ್ಮಕ್ಕೆ ಅನುಗುಣವಾಗಿ ಆಚರಣೆಯನ್ನು ಇಟ್ಟುಕೊಂಡು ಯೋಗ,ಭಕ್ತಿ,ಜ್ಞಾನ ಮುಂತಾದ ಮೋಕ್ಷಮಾರ್ಗ ಸಾಧನರೂಪವಾದ ಒಂದು ಸಂಪ್ರದಾಯದ ಪ್ರವರ್ತಕರಾಗುವರು. ಮತ್ತು ಆ ಕಾಲದಲ್ಲಿ ಬ್ರಾಹ್ಮಣ ಕುಲದಲ್ಲಿ ಜನಿಸಿದ ಮುಖ್ಯ ಧರ್ಮೋದ್ಧಾರಕನಿಗೆ ಇವರು ಸಹಾಯ ಮಾಡು

ವರು. ಇವರು ಜನರಿಗೆ ತಮ್ಮ ತಮ್ಮ ವರ್ಣದ ಪ್ರಕಾರ ಆಚರಿಸಲು ಬೋಧಿಸುವರು. ' ಆಚಿನೋತಿ ಹಿ ಶಾಸ್ತ್ರಾಣಿ ' ಎಂಬ ಶ್ಲೋಕದಲ್ಲಿ ಆಚಾರ್ಯ ಎಂದರೆ ಧರ್ಮೋದ್ಧಾರಕ ಎಂದು ವರ್ಣನೆಯಿರುವುದು. ಶ್ರುತಿ ಶಾಸ್ತ್ರಗಳ ಮುಖ್ಯ ಅಭಿಪ್ರಾಯಗಳನ್ನು ತಿಳಿಯಿ ಸಾಧನ ಕ್ರಮವನ್ನು ಉಳಿಸಲು ಆವಶ್ಯಕವಾದ ಆದರಣೀಯ ಆಚರಣೆಯನ್ನು ತಾನು ಇಟ್ಟುಕೊಂಡು ಶಿಷ್ಯರಿಗೂ ಯಾವನು ಬೋಧಿಸುವನೋ ಅವನು ಆಚಾರ್ಯನೆಂದು ಕರೆಯಲ್ಪಡುವನು. ಶಾಸ್ತ್ರೀಯವಾದ ನಿರ್ದುಷ್ಟ ಆಚರಣೆ, ಶ್ರುತಿ ಶಾಸ್ತ್ರ ಪ್ರಾವೀಣ್ಯ, ಬೋಧಕಶಕ್ತಿ, ಆದರಣೀಯ ಸ್ವಭಾವ, ನಿರ್ವಿಕಾರತೆ, ಸಮತ್ವ, ದಯಾಪರತ್ವ, ಎಲ್ಲಕ್ಕಿಂತಲೂ ಮುಖ್ಯ ಆತ್ಮಾನುಭವ, ಇವುಗಳಿಂದ ಇವನು ಅಲಂಕೃತನಾಗಿರುವನು. ಇವನ ನಡೆ ನುಡಿ ನೋಟಗಳಿಂದ ಜನರಿಗೆ ಇವನು ಆದರ್ಶನಾಗಿರುವನು. ಇಂತಹವನೇ ಧರ್ಮೋದ್ಧಾರಕನೆಂದು ಪೂಜಿಸಲ್ಪಡುವನು.

' ಧರ್ಮಸ್ಥಾಪನೇಚೇ ನರ । ತೇ ಈಶ್ವರಾಚೇ ಅವತಾರ ।
ಝಾಲೇ ಆಹೇತ ಪುಢೇ ಹೋಣಾರ । ದೇಣೇ ಈಶ್ವರಾಚೇ ।

ಧರ್ಮಸ್ಥಾಪನೆಯ ಪುರುಷರು ಪರಮಾತ್ಮನ ಅವತಾರವೆಂದು ತಿಳಿಯಬೇಕು. ಇಂತಹ ಅವತಾರಪುರುಷರು ಹಿಂದೂ ಆಗಿದ್ದಾರೆ; ಮುಂದೂ ಆಗುವರು. ಇಂಥವರಿಗೆ ಧರ್ಮ ಸ್ಥಾಪನೆಗೆ ಬೇಕಾದ ಸಾಮರ್ಥ್ಯವು ಪರಮಾತ್ಮನ ಅನುಗ್ರಹದಿಂದಲೇ ಬರುವದು.

ಸಾಮರ್ಥ್ಯ ಆಹೇ ಚಳವಳೀಚೇ । ಜೋ ಜೋ ಕರೀಲ ತಯಾಚೇ ।
ಪರಂತು ತೇಥೇ ಭಗವಂತಾಚೇ । ಅಧಿಷ್ಠಾನ ಪಾಹಿಜೇ ।

ಧರ್ಮ ಕಾರ್ಯದ ಚಳುವಳಿಯನ್ನು ಯಾರೂ ಮಾಡಬಹುದು. ಎಲ್ಲರಲ್ಲಿಯೂ ಆ ವಿಧದ ಸಾಮರ್ಥ್ಯವಿದೆ. ಆದರೆ ಅದಕ್ಕೆ ಆಧಾರವಾಗಿ ಪರಮಾತ್ಮನ ಸಾಮರ್ಥ್ಯದ ಅಧಿಷ್ಠಾನವೂ ಇರಬೇಕು. ಎಂದು ಶ್ರೀ ಸಮರ್ಥರ ವಚನಗಳಿವೆ.

ಶ್ರೀ ಸಮರ್ಥರು ಪರಮಾತ್ಮನ ಅಂಶವನ್ನು ಗುರುತಿಸಲು ಒಂದು ಓವಿಯನ್ನು (ಪದ್ಯ ಭಾಗದ ಒಂದು ವೃತ್ತಕ್ಕೆ ಓವಿ ಎಂದು ಹೆಸರು) ಮಾಡಿಟ್ಟಿದ್ದಾರೆ.

ಜೇ ಸ್ಫೂರ್ತೀಚೇ ಪುರುಷ । ತೇ ಪರಮೇಶ್ವರಾಚೇ ಅಂಶ ।
ಧರ್ಮಸ್ಥಾಪನೇಚಾ ಹವ್ಯಾಸ । ತೇಥೇಚಿ ವಸೇ । ”

ಯಾರು ಸತ್ಕೀರ್ತಿಶಾಲಿಗಳಾದ ಪುರುಷರೋ ಅವರು ಪರಮಾತ್ಮನ ಅಂಶ; ಧರ್ಮಸ್ಥಾಪನೆಯ ಹವ್ಯಾಸವು ಅಂಥವರಲ್ಲಿಯೇ ಇರುತ್ತದೆ, ಎಂದು ಇದರ ಅರ್ಥ. ಅರಳಿದ ಹೂವಿನ ಪರಿಮಳದಿಂದಲೂ, ಪಕ್ವವಾದ ಫಲದ ರುಚಿಯಿಂದಲೂ ಅದರ ಒಳ್ಳೆಯ ಜಾತಿಯು ಗೊತ್ತಾಗುವಂತೆ ಲೋಕೋತ್ತರವಾದ ಗುಣಗಳಿಂದಲೂ, ಅಸಾಮಾನ್ಯವಾದ ಕಾರ್ಯಗಳಿಂದಲೂ ಮನುಷ್ಯನು ಅವತಾರಿಯೆಂದು ಗುರುತಿಸಲ್ಪಡುವನು. ಹೂವಿಗೆ ಅರಳುವ, ಫಲಕ್ಕೆ ಹಣ್ಣಾಗುವ ಒಂದು ಕಾಲವು ಇದ್ದಂತೆ ಪ್ರತಿಯೊಬ್ಬನಿಗೂ ಒಂದು ಉತ್ಕರ್ಷದ ಕಾಲವು ನಿರ್ದಿಷ್ಟವಾಗಿರುವುದು. ಆ ಕಾಲದಲ್ಲಿಯೇ ಅವನ ಉಜ್ವಲತೆ ನಿದರ್ಶನಕ್ಕೆ ಬರುವುದು.

ಒಂದು ಕಡೆ ಅವತಾರಿಯ ವಿಷಯದಲ್ಲಿ ಶ್ರೀ ಸಮರ್ಥರೇ ಹೀಗೆ ಹೇಳಿದ್ದುಂಟು. “ ವಿವೇಕ ಪೈಸಾವಲೇಯಾ ಸಾವ ಅವತಾರೀ ಬೋಲಿಲೇ ” ಉನ್ನತವಾದ ವಿವೇಕ ಬುದ್ಧಿಗಳಿಂದ ಯಾರು ಜಗದ್ವಿಖ್ಯಾತರಾಗುವರೋ ಅವರೂ ಅವತಾರಿಗಳೆಂದು ಹೇಳಿಸಿಕೊಳ್ಳುವರು. ಈ ವ್ಯಾಖ್ಯೆಯು ವಿಚಾರ ಮಾಡುವಂಥದಾಗಿದೆ. ಆತ್ಮಾನಾತ್ಮವಿವೇಕವನ್ನು ಮಾಡಿ ಯಾರು ತಮ್ಮ ಜಗದ್ವ್ಯಾಪಿ ಸ್ವರೂಪವನ್ನು ತಿಳಿಯುವರೋ ಅವರು ಭಗವಂತನಿಗಿಂತಲೂ ಬೇರೆ ಉಳಿಯದೆ ಭಗವಂತನ ಅವತಾರ, ಭಗವಂತ, ಎಂದೇ ಹೇಳಿಸಿಕೊಳ್ಳುವರು. ಜೇ ಭಗವಂತಾಚೇ ಅಂಶ ! ತೇ ಭಗವಂತ ಇಚ್ಛಿತಿ ಯಾರು ಭಗವಂತನ ಅಂಶವಾಗಿರುವರೋ ಅವರು ಭಗವಂತನನ್ನೇ ಬಯಸುವರು. ಅವನ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಪಡುವರು.

“ ಸ ಯೋಹ ವೈ ತತ್ಪರಮಂ ಬ್ರಹ್ಮವೇದ ಬ್ರಹ್ಮೈವ ಭವತಿ ”

ಯಾವನು ಆ ಬ್ರಹ್ಮವನ್ನು ತಿಳಿಯುವನೋ ಅವನು ಆ ಬ್ರಹ್ಮವೇ ಆಗುವನೆಂಬ ಶ್ರುತಿಯು ಹೇಳಿಕೆಯಂತೆ ಶ್ರೀ ಸಮರ್ಥರೂ ಹೇಳಿದ್ದಾರೆ. ಬ್ರಹ್ಮವೆಂದರೆ ಈ ಚರಾಚರ ವಿಶ್ವದ ಶುದ್ಧ ಮತ್ತು ಸತ್ ಸ್ವರೂಪವು. ಇದಕ್ಕಿಂತಲೂ ದೊಡ್ಡ ವಸ್ತುವೇ ಇಲ್ಲ.

ಪರಮಾತ್ಮನಾಗಲು, ಪರಮಾತ್ಮನ ಜ್ಞಾನಮಾಡಿಕೊಳ್ಳುವ ಸಾಧನೆ ವನ್ನು ನಮ್ಮ ಧರ್ಮವು ಹೇಳುತ್ತಿರುವುದು.

ಜೀವೋ ಬ್ರಹ್ಮೈವ ನಾಪರಃ। ಜೀವನು ಬ್ರಹ್ಮರೂಪನೇ ಸರಿ. ಎಂಬುದಾಗಿ ಶ್ರೀ ಶಂಕರ ಭಗವತ್ಪಾದರು ಶ್ರುತಿಯ ಸಿದ್ಧಾಂತವನ್ನು ಬಿಚ್ಚಿ ಹೇಳಿರುವರು.

"ತತ್ಸೃಷ್ಟ್ವಾ ತದೇವಾನು ಪ್ರಾವಿಶತ್ । ಸ ಇಹ ಪ್ರವಿಷ್ಟ ಆನ ಖಾಗ್ರೇಭ್ಯಃ" ದೇಹಗಳನ್ನು ನಿರ್ಮಿಸ್ಸಿ ಆ ಪರಮಾತ್ಮನೇ ಆ ಎಲ್ಲ ದೇಹಗಳ ಲ್ಲಿಯೂ ನಖ ಶಿಖಾಂತವಾಗಿ ವ್ಯಾಪಿಸಿರುವನೆಂದು ಹಲವು ಶ್ರುತಿ ವಾಕ್ಯಗಳು ಜಗತ್ತಿಗೆ ಸಾರುತ್ತಿರುವವು.

"ನರ ಕರನೀ ಕರೇತೋ ನರಕಾ ನಾರಾಯಣ ಹೋಜಾಯ" ಎಂಬ ವಾಕ್ಯವು ಸಾಮಾನ್ಯವಾಗಿ ಎಲ್ಲರ ಬಾಯಿಯಲ್ಲಿಯೂ ಉಂಟು. ನರನು ತಪಸ್ಸಿನಿಂದ ನಾರಾಯಣನೇ ಆಗುವನೆಂದು ಇದರ ಅರ್ಥ. ಪ್ರತ್ಯಕ್ಷ ನಾರಾಯಣನಾಗಲು ನರನಿಗೆ ಸಾಧ್ಯವಾಗುವುದು. ನಾರಾಯಣನೇ ನರನ ಯಥಾರ್ಥರೂಪವೆಂದು ನಮ್ಮ ವೇದಗಳು ಸಾರುತ್ತಿರುವುವು. **ನಾನು ಈ ವಿಧವಾಗಿ ನಾರಾಯಣಸ್ವರೂಪನಾಗಿದ್ದೇನೆ.** ಆ ಹಕ್ಕು ನಿಮಗೂ ಇದೆ. ಆದರೆ ನಾವು ಆ ಸ್ವರೂಪವನ್ನು ಬೆಳಗಿಸುವ ಸಾಧನೆ ಮಾಡಿ ಅದನ್ನು ಪಡೆಯಬೇಕು. ಎಂದು ಶ್ರೀಧರರು ನುಡಿದರು. ಇದನ್ನು ಕೇಳಿ ಸರ್ವರಿಗೂ ಆನಂದವಾಯಿತು.

ಮುಗಿಸುವ ಮೊದಲು

ಮೊದಲಮಾತಿನಿಂದ ಪ್ರಾರಂಭವಾದ 'ಶ್ರೀಗುರು ಚರಿತ್ರೆ'ಯ ಮೊದಲನೆಯ ಸಂಪುಟವನ್ನು ಮುಗಿಸುವ ಮೊದಲು ಶ್ರೀಗುರು ಚರಣಾರವಿಂದಗಳಿಗೆ ವಂದಿಸಿ ಭಕ್ತಮಹಾಜನರ ಕ್ಷಮೆಯನ್ನು ಪ್ರಾರ್ಥಿಸಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಇದು ಶ್ರೀಗಳವರ ಆತ್ಮಚರಿತ್ರೆಯಲ್ಲ. ಆಧುನಿಕ ಲೋಕದಲ್ಲಿ ಎಷ್ಟೋ ಜನರು ತಮ್ಮ ಚರಿತ್ರೆಯನ್ನು ತಾವೇ ಬರೆದು ಪ್ರಕಟಿಸಿರು-

ಲೌಕಿಕರು ತಮ್ಮ ಜೀವನ
ಸ್ತಾರೆ. ಭೌತಿಕ ಕೀರ್ತಿ ಕಾಮಿಗಳಾದ
ಕ್ರಮವನ್ನೂ ಮನೋಭಾವನೆಗಳನ್ನೂ ಲೋಕಕ್ಕೆ ವಿಶದಪಡಿಸ
ಲೋಸುಗ ಬರೆಯುತ್ತಾರೆ; ಇದು ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿಯ
ಒಂದು ವಿಶಿಷ್ಟವಿಚಾರ; ಇಂದು ನಮ್ಮವರೂ ಇದನ್ನು ಅನುಸರಿಸು
ತ್ತಿದ್ದಾರೆ; ಆರ್ಯಸಂಸ್ಕೃತಿಯಲ್ಲಿ ಇದಕ್ಕೆ ಸ್ಥಾನವಿಲ್ಲ; ತನ್ನನ್ನು ತಾನೇ
ವಿಸ್ತರಿಸಿ ತನ್ನ ಗುಣಗಳನ್ನು ಬಣ್ಣಿಸಿ ಬರೆಯುವಷ್ಟು ನಮ್ಮ ಆರ್ಯ
ಮಹಾಜನರು ದೇಹಾಭಿಮಾನಿಗಳಾಗಿರಲಿಲ್ಲ; ಎಂದು ಹೇಳುವದೂ
ಉಂಟು. ಏನೇ ಇರಲಿ ಲೋಕಕಲ್ಯಾಣಕ್ಕೆ ಸಾಧನವಾಗಿರುವ ಇಂಥ
ಮಹಾನುಭಾವರ ಚರಿತ್ರೆಯನ್ನು ಬರೆಯುವದೂ ಪ್ರಕಟಿಸುವದೂ
ಭಕ್ತಮಹಾಜನರು ಓದಿ ಆನಂದಪಡೆದು ಸನ್ಮಾರ್ಗಗಾಮಿಗಳಾಗು
ವದೂ ಅವಶ್ಯ ಎಂಬ ಮಾತನ್ನು ಅನುಲಕ್ಷಿಸಿ ಭಕ್ತರು ತಾವು ಕಂಡು
ಕೇಳಿದ ಹಲಕೆಲವು ವಿಷಯಗಳನ್ನು ಇದರಲ್ಲಿ ಸಂಗ್ರಹಿಸಲು ಪ್ರಯ
ತ್ನಿಸಬೇಕಾಯಿತು. ಆದುದರಿಂದ ಇದರಲ್ಲಿ ನ್ಯೂನಾತಿರಿಕ್ತಗಳು
ಸೇರಿರುವದು ಸಹಜವೇ ಸರಿ. ಇದೇ ದೃಷ್ಟಿಯಿಂದ ಶ್ರೀಗಳವರು
ಇದನ್ನು ಅಲ್ಲಿ ಇಲ್ಲಿ ಓದಿಸಿ ಕೇಳಿದಾಗ ಕಂಡುಬಂದ ಕೊರತೆಗಳನ್ನು
ತುಂಬಿಕೊಳ್ಳಲು ಒಂದೆರಡು ಮಾತುಗಳನ್ನು ಹೇಳಬೇಕಾಗಿ ಬಂದಿತು
ಇಷ್ಟಾದರೂ ಇದು ಸಂಪೂರ್ಣ ಚರಿತ್ರೆಯಾಯಿತೆಂದು ಹೇಳಲು
ನಮಗೆ ಧೈರ್ಯ ಸಾಲದು. **'ಅಕರಣಾನ್ಮಂದಕರಣಂ ಶ್ರೇಯಃ**
ಎಂಬಂತೆ ಶ್ರೀಗುರುವಿನ ಅಲ್ಪಸೇವೆಯೆಂದು ಈ ಕಾರ್ಯವನ್ನು ಮಾ
ದೆವು. ಕರುಣಾಳುವಾದ ಶ್ರೀಗುರುವಿನ ಕ್ಷಮಾಪೂರಿತ ಅನುಗ್ರ
ವನ್ನು ಪ್ರಾರ್ಥಿಸುವೆವು.

ಭಗವಾನ್ ಶ್ರೀಧರ ಮಹಾಸ್ವಾಮಿಗಳವರು ಅಲೌಕಿಕ ಮ
ಪುರುಷರೆಂಬುದನ್ನು ನಾವಿಂದು ಪ್ರತ್ಯಕ್ಷ ನೋಡುತ್ತಿದ್ದೇವೆ. ಇ
ವರು ನಮ್ಮ ಕಣ್ಣೆದುರಿಗೆ ಇದ್ದಾರೆ. ಇಂತಹ ದೈವಿಕ ಶಕ್ತಿಸಂಪ
ಗುರೂತ್ತಮರು ತಮ್ಮ ಪೂರ್ವಾಶ್ರಮದಲ್ಲಿಯೂ ಅಲೌಕಿಕ ಗು
ಪೂರ್ಣರಾಗಿಯೇ ಬೆಳಗಿರುವರೆಂಬುದನ್ನು ಈ ಸಂಕ್ಷೇಪ ಚರಿತ್ರೆಯ
ಕಾಣಬಹುದು. ದೊಡ್ಡದೊಂದು ಚರಿತ್ರೆಯನ್ನು ಯೋಗ್ಯ ಕ್ರಮ

ಬರೆಯುವದಕ್ಕೆ ತಕ್ಕ ವಿಷಯ ಸಂಗ್ರಹವೂ ಬ[illegible] ಅದನ್ನು ಸರಿಯಾದ ಕ್ರಮದಲ್ಲಿ ಹೊಂದಿಸಿ ಆಯಾ ಸ್ಥಳದಲ್ಲಿ ತಕ್ಕ ಪ್ರತಿಪಾದನೆಗಳನ್ನು ಸೇರಿಸಿ ಓದುಗರಿಗೆ ಮಾರ್ಗದರ್ಶಕವಾಗುವಂತೆ ಬರೆಯುವ ಕೌಶಲ್ಯವೂ ಬೇಕು. ಪ್ರಸ್ತುತ ಬರೆಹವು ಕೇವಲ ಭಕ್ತರ ಹೃದಯದಲ್ಲಿ ಉಗಮಹೊಂದಿದ ಭಕ್ತಿಯ ಒರತೆಯ ನೀರು ಇಷ್ಟೆ. ಅದು ಇನ್ನೂ ಝರಿಯಾಗಿ ಹಳ್ಳವಾಗಿ ಮಹಾ ಪುಣ್ಯ ಪ್ರವಾಹವಾಗಿ ಮಾರ್ಪಡಬೇಕಾಗಿದೆ. ಆ ಅಂಶಗಳೆಲ್ಲ ಇನ್ನುಮುಂದೆ ಬರಲಿವೆ. ಇದು ವಿದ್ಯಾರ್ಥಿ ಸಂಪುಟವಾದುದರಿಂದ ಅವರು ಸಜ್ಜನಗಿರಿಗೆ ತಪಶ್ಚರ್ಯೆಗಾಗಿ ಹೊರಟು ಅಲ್ಲಿಗೆ ಮುಟ್ಟಿದ ವರೆಗಿನ ವಿಷಯಗಳು ಮಾತ್ರ ಇದರಲ್ಲಿ ಸಂಕ್ಷೇಪವಾಗಿ ಸಂಗ್ರಹಿಸಲ್ಪಟ್ಟಿವೆ. ಈ ಸಜ್ಜನಗಡದಲ್ಲಿ ತಪಸ್ಸುಮಾಡಿ ಸಾಕ್ಷಾತ್ಕಾರವನ್ನು ಹೊಂದಿದ ಬಳಿಕವೇ ಈ ಪುಣ್ಯಪ್ರವಾಹವು ಉಗಮ ಹೊಂದಿತು. ಮುಂದೆ ಗೋಕರ್ಣ ಮಂಡಲ, ಸಾಗರ ಪ್ರಾಂತ ಮೊದಲಾದ ಕಡೆಗೆ ಪ್ರವಹಿಸಿ ಸೀಗೆಹಳ್ಳಿಯಲ್ಲಿ ಸಂನ್ಯಾಸ ಗ್ರಹಣ ರೂಪದ ಪವಿತ್ರ ತೀರ್ಥವಾಗಿ ಪರಿಣಮಿಸಿ, ಇಂದು ಈ ಲೋಕಪಾವನ ಕಾರ್ಯಕ್ಕಾಗಿ ಪ್ರವಹಿಸತೊಡಗಿದೆ. ಆ ಪುಣ್ಯ ಪ್ರವಾಹವನ್ನು ಸಂದರ್ಶಿಸಿ ಪುನೀತರಾಗುವ ಭಕ್ತಮಹಾಜನರ ಸಂಖ್ಯೆ ಎಷ್ಟು ಎಂಬುದನ್ನು ಕಣ್ಣಾರೆ ಕಂಡೇ ತಿಳಿಯಬೇಕು.

ಈ ವಿದ್ಯಾರ್ಥಿ ಸಂಪುಟದಲ್ಲಿ ಬಂದಿರುವ ವಿಷಯಗಳನ್ನು ತುಸು ವಿಮರ್ಶಿಸಿ ಈ ಮಾತು ಮುಗಿಸೋಣ. ಈ ಮಹಾನುಭಾವರ ವಂಶವೃತ್ತ, ಜನ್ಮ, ಈ ವಿಭಾಗಗಳಲ್ಲಿ ಕಂಡುಬರುವ ಅಂಶಗಳಿಂದ ಗುರೂತ್ತಮರು ಸತ್ಕುಲಸಂಭೂತರು ಶ್ರೀ ದತ್ತಾತ್ರೇಯನ ಅನುಗ್ರಹರೂಪವಾಗಿ ದತ್ತಜಯಂತಿಯ ದಿನವೇ ದತ್ತಜನ್ಮದ ಸಮಯದಲ್ಲಿಯೇ ಈ ಭೂಲೋಕಕ್ಕೆ ಆಗಮಿಸಿದರು; ಆದುದರಿಂದ ಇವರು ಶ್ರೀದತ್ತ ಸ್ವರೂಪವೇ ಎಂಬ ಮಾತಿಗೆ ಬೇರೆ ಆಧಾರಗಳು ಬೇಕಿಲ್ಲ, ಎಂಬ ಮಾತನ್ನು ನಾವು ಮರೆಯುವಂತಿಲ್ಲ.

'ಮಾನವನು ಪರಿಸ್ಥಿತಿಯ ಅಡಿಯಾಳು.' ಎಂದು ಹೇಳುವ ಆಧುನಿಕರ ಮಾತಿಗೆ ಇವರ ಬಾಲ್ಯದ ಚರಿತ್ರೆಯು ಸರಿಯಾದ ಉತ್ತರವನ್ನು

ಹೇಳುವದು. ಮಾನವನು ತನ್ನ ಪ್ರಭಾವದಿಂದ ಪರಿಸ್ಥಿತಿಯನ್ನು ತನಗೆ ಅನುಕೂಲವಾಗಿ ಮಾರ್ಪಡಿಸಿಕೊಳ್ಳಲು ಬಂದೇ ಬರುವದು, ನರನು ನಾರಾಯಣನಾಗಬಲ್ಲನು, ಎಂಬುದನ್ನು ನಾವು ಈ ಭಾಗದಲ್ಲಿ ಅರಿತುಕೊಳ್ಳಲು ಅವಕಾಶವಿದೆ. ಶ್ರೀಗಳವರು-ಅಂದಿನ ಶ್ರೀಧರರು 'ನಾನು ನಾರಾಯಣ ಸ್ವರೂಪನಾಗಿದ್ದೇನೆ'ಎಂದುಹೇಳಿದ(ಪುಟ ೭೭). ಮಾತಿನ ಸತ್ಯತೆಯನ್ನು ನಾವು ಇಂದು ಪ್ರತ್ಯಕ್ಷ ಕಾಣುತ್ತಿದ್ದೇವಲ್ಲವೇ ?

ಈ ಚರಿತ್ರೆಯನ್ನು ಬರೆದು ಪ್ರಕಟಿಸುವದಕ್ಕೆ ಹಂಬಲಿಸಿ ಕಾರ್ಯಾರಂಭಮಾಡಿ ಸುಮಾರು ಮೂರು ವರ್ಷಗಳಾಗುತ್ತ ಬಂತು. ನಮಗೆ ಈ ಕಾರ್ಯಕ್ಕೆ ಶ್ರೀಗಳವರ ಒಪ್ಪಿಗೆ ಬೇಕಾಗಿದ್ದಿತು. ಮಹಾಪುರುಷರಿಗೆ ತಮ್ಮ ಪ್ರಶಂಸೆಬೇಕಾಗಿರುವದಿಲ್ಲ. ಜಗತ್ತನ್ನೆಲ್ಲ ಬೆಳಗುವ ಸೂರ್ಯನಾರಾಯಣನು ತನ್ನ ಆರಾಧನೆ ಮಾಡುವವರ ತುಪ್ಪದ ನೀರಾಜನದ ಬೆಳಕನ್ನು ಬಯಸುವದಿಲ್ಲ, ಎಂದರೆ ಆಶ್ಚರ್ಯವೇಕಾಗಬೇಕು ? ಹಾಗೆಯೇ ಶ್ರೀಮನ್ನಾರಾಯಣ ಸ್ವರೂಪಿಗಳಾದ ಶ್ರೀಗಳವರು ಆತ್ಮ ಪ್ರಶಂಸೆಯನ್ನೇಕೆ ಬಯಸುವರು ? ಆದ್ದರಿಂದ 'ಇರಲಿ, ನೋಡೋಣ, ಇನ್ನೊಮ್ಮೆ ಮಾಡುವಿರಂತೆ,' ಎಂದು ಈ ಕಾರ್ಯವನ್ನು ಮುಂದೆ ಮುಂದೆ ಸಾಗಿಸಿದರು. ಕೊನೆಗೆ ನಮ್ಮೆಲ್ಲರ ಆಗ್ರಹದಿಂದಲೇ ಈ ಪ್ರಕಟನೆಗೆ ಅವರ ಅನುಮತಿ ದೊರೆಯಿತು. ಇದರಲ್ಲಿ ಭಕ್ತರಿಗೆ ಸನ್ಮಾರ್ಗದರ್ಶನವಾಗಲೆಂಬುದೇ ನಮ್ಮೆಲ್ಲರ ಮುಖ್ಯ ಉದ್ದೇಶವೆಂಬುದನ್ನು ಇನ್ನೊಮ್ಮೆ ಹೇಳುವೆವು.

ಅಜ್ಞಾನಾದ್ವಾ ಪ್ರಮಾದಾದ್ವಾ ವೈಕಲ್ಯಾತ್ ಸಾಧನಸ್ಯ ವಾ ।
ಯನ್ನ್ಯೂನಮತಿರಿಕ್ತಂ ವಾ ತತ್ಸರ್ವಂ ಕ್ಷಂತುಮರ್ಹಸಿ ॥

ಎಂದು ಆ ಭಗವತ್‌ಸ್ವರೂಪವನ್ನು ಪ್ರಾರ್ಥಿಸಿ ಎಂದಿನಂತೆ--

ನಮಸ್ತೇ ಶ್ರೀಧರಸ್ವಾಮಿನ್ ನಮಸ್ತೇ ರಾಘವಪ್ರಿಯ ।
ನಮಸ್ತೇ ಜಿತಸಮ್ಮೋಹ ದೇಹಿ ಮೇ ತವ ರಕ್ಷಣಮ್ ॥

ಎಂದು ಶ್ರೀಗುರು ರಕ್ಷಣೆಯನ್ನು ಕೋರಿ ವಿರಮಿಸೋಣ.

ಶ್ರೀದತ್ತ ಜಯಂತಿ
ಶಾ. ಶಕೆ ೧೮೭೫

ಶ್ರೀಧರಭಕ್ತ

ಪರಮಾರ್ಥದಾನಿ



— ವಿಚಾರ ಮಾಲಿಕೆ —

೧. ಧರ್ಮ ವೃಕ್ಷಕ್ಕೆ ಮೂರು ಶಾಖೆಗಳು ‘ ಯಜ್ಞ, ಅಧ್ಯಯನ, ದಾನ

೨. ಯಾವುದು ಅನಂತವೋ ಅದು ಸುಖ; ಅಲ್ಪವಾದದ್ದರಲ್ಲಿ ಸುಖವಿಲ್ಲ.

೩. ಮುಕ್ತನು ಮರಳಿ ಜನ್ಮಕ್ಕೆ ಬಾರನು; ಮರಳಿ ಜನ್ಮಕೆ ಬಾಳನು.

೪. ಆತ್ಮಜ್ಞಾನಿಯೇ ಶೋಕವನ್ನೆಲ್ಲ ದಾಟುವನು.

೫. ಬಲದಿಂದ ಲೋಕವೆಲ್ಲ ಜೀವಿಸಿದೆ; ಬಲವ ಸಂಪಾದಿಸು.

೬. ಆಹಾರಶುದ್ಧಿಯಿಂದ ಮನಃಶುದ್ಧಿ.ಮನಃಶುದ್ಧಿಯಿಂದ ದೃಢಸ್ಮೃತಿ

೭. ತಕ್ಕಗುರುವಿನಿಂದರಿತಆತ್ಮವಿದ್ಯೆಯೇಸಾಕ್ಷಾತ್ಕಾರವನ್ನೀಯುವುದು.

— ಉಪನಿಷದ್ವಾಕ್ಯಗಳು.

ನೆನಪಿನಲ್ಲಿಡು—

ನರನು ನಾರಾಯಣನಾಗಬಲ್ಲನು. ಅದಕ್ಕೆ
ಗುರು ಸೇವೆಗಿಂತ ಹಿರಿಯ ದಾರಿ ಬೇರಿಲ್ಲ.